ಮಂಗಳವಾರ, ಜೂನ್ 13, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 163 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಏಕದಾನಿಯ ಪ್ಲೇಟ್‌ಲೆಟ್‌ಗಳೇ ರಕ್ತಸ್ರಾವದ ಅಪಾಯದಲ್ಲಿ ಜೀವಸಂಜೀವಿನಿ



ಬಿಜೆಪಿ ಜತೆ ಮೈತ್ರಿ ಗಾಳಿಸುದ್ದಿ: ಎಚ್‌ಡಿಕೆ 5

ಆಳ-ಅಗಲ
ಸಂಗಾತಿ ಹಂತಕರ ಮನಃಸ್ಥಿತಿ

ವಿದ್ಯುತ್ ಶಾಕ್‌ಗೆ ಜನರ ಆಕ್ರೋಶ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,724	18,601	₹61,650 (ಬೆಂಗಳೂರು)	₹75,300 (ಬೆಂಗಳೂರು)	82.43

24x7 ಕಾರ್ಯನಿರ್ವಹಿಸಿ – ಜಿಲ್ಲಾಡಳಿತಗಳಿಗೆ ಮುಖ್ಯಮಂತ್ರಿ ತಾಕೀತು

ಕುಡಿಯುವ ನೀರು: ಇರಲಿ ಎಚ್ಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಳೆಯ ಕೊರತೆಯಿಂದಾಗಿ ಹಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಆಗಿದ್ದು, ಕೊರತೆ ಇರುವ ಕಡೆಗಳಲ್ಲಿ ತ್ವರಿತಗತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಅಧಿಕಾರಿಗಳು ಪ್ರತಿ ನಿತ್ಯ 24 ಗಂಟೆಯೂ ಕಾರ್ಯ ನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮಳೆ ಕೊರತೆ ಮತ್ತು ಕುಡಿಯುವ ನೀರಿನ ಸಮಸ್ಯೆಯ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಜಿಲ್ಲಾಡಳಿತದ ಜತೆ ವಿಡಿಯೊ ಸಂವಾದ ನಡೆಸಿ ಮಾಹಿತಿ ಪಡೆದರು.

ರಾಜ್ಯದಲ್ಲಿ ಜೂನ್ 10 ರಂದೇ ಮುಂಗಾರು ಆರಂಭವಾಗಿದೆ. ಆದರೆ, ಜೂನ್ 1 ರಿಂದ 11 ರವರೆಗಿನ ಮಾಹಿತಿಯ ಪ್ರಕಾರ ರಾಜ್ಯದ ವಾಡಿಕೆ ಮಳೆಗಿಂತ ಶೇ 67 ರಷ್ಟು ಕೊರತೆ ಆಗಿದೆ. ಮುಂದಿನ ದಿನಗಳಲ್ಲಿ ವಾಡಿಕೆಯಷ್ಟು ಮಳೆ ಆಗಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆದರೂ ರಾಜ್ಯದ ಹಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಪರಿಸ್ಥಿತಿ ನಿಭಾಯಿಸಲು ಜಿಲ್ಲಾಡಳಿತ ಸಜ್ಜಾಗಬೇಕು ಎಂದರು.

ಪೂರ್ವ ಮುಂಗಾರು ಕೊರತೆಯ ಕಾರಣ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿತ್ತು. ಮುಂಬರುವ ದಿನಗಳಲ್ಲಿ ಮಳೆ ಬರುವ ಸಾಧ್ಯತೆ ಇದ್ದು, ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುವ ನಿರೀಕ್ಷೆ ಇದೆ ಎಂದು ಸಿದ್ದರಾಮಯ್ಯ ಆಶಯ ವ್ಯಕ್ತಪಡಿಸಿದರು.

ಇಂದಿರಾ ಕ್ಯಾಂಟೀನ್‌ಗೆ ಶೇ 20ರಷ್ಟು ಹೆಚ್ಚುವರಿ ಅನುದಾನ



ಸರ್ಕಾರದಿಂದ ಇಂದಿರಾ ಕ್ಯಾಂಟೀನ್‌ಗಳಿಗೆ ಈಗ ನೀಡಲಾಗುತ್ತಿರುವ ನಿರ್ವಹಣಾ ವೆಚ್ಚವನ್ನು ಶೇ 20ರಷ್ಟು ಹೆಚ್ಚಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆ, ಹೊಸ ಕ್ಯಾಂಟೀನ್ ಸ್ಥಾಪಿಸುವ ಬಗ್ಗೆ ಅಧಿಕಾರಿಗಳ ಜತೆ ಅವರು ಸಭೆ ನಡೆಸಿದರು.

ಸಭೆಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ರಾಜ್ಯ ಸರ್ಕಾರದಿಂದ ಇಲ್ಲಿಯವರೆಗೆ ಶೇ30ರಷ್ಟು ಕೊಡಲಾಗುತ್ತಿತ್ತು. ಅದನ್ನು ಶೇ 50ಕ್ಕೆ ಹೆಚ್ಚಿಸಲಾಗುವುದು. ರಾಜ್ಯದ ಇನ್ನುಳಿದ ಪ್ರದೇಶಗಳಲ್ಲಿ ಸ್ಥಳೀಯ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇ 50ರಷ್ಟು ನೀಡಲಾಗುತ್ತಿತ್ತು, ಅದನ್ನು ಶೇ 70ಕ್ಕೆ ಹೆಚ್ಚಿಸಲಾಗುವುದು ಎಂದು ಅವರು ಹೇಳಿದರು.

ಬಸ್ ನಿಲ್ದಾಣ, ರೈಲು ನಿಲ್ದಾಣ, ಶಾಲಾ–ಕಾಲೇಜು ಸೇರಿದಂತೆ ಜನನಿಬಿಡ ಪ್ರದೇಶಗಳಲ್ಲಿ ಇಂದಿರಾ ಕ್ಯಾಂಟೀನ್ ಪ್ರಾರಂಭಿಸಬೇಕು ಎಂದು ಸ್ಥಳೀಯ ಸಂಸ್ಥೆ ಅಧಿಕಾರಿಗಳಿಗೆ ಆದೇಶಿಸಿದರು.

ಎಲ್ಲೆಲ್ಲಿ ಹೊಸ ಇಂದಿರಾ ಕ್ಯಾಂಟೀನ್ ತೆರೆಯುವ ಅಗತ್ಯ ಇದೆಯೋ ಅವುಗಳ ಪಟ್ಟಿಯ ಪ್ರಸ್ತಾವವನ್ನು ಕೂಡಲೇ ಸಲ್ಲಿಸಬೇಕು. ಆಹಾರ ಕ್ರಮದಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಗುಣಮಟ್ಟದ ಆಹಾರ ನೀಡಬೇಕು. ಆಯಾ ಸ್ಥಳಗಳಲ್ಲಿ ಸ್ಥಳೀಯ ಆಹಾರ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಹೊಸ ಮನೆ: 59 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಹೊಸ ಮನೆಗಳ ಮಾಲೀಕರು ಮತ್ತು ಬಾಡಿಗೆ ಮನೆಗಳಿಗೆ ಹೊಸದಾಗಿ ವಾಸ್ತವ್ಯಕ್ಕೆ ಬಂದವರಿಗೆ ಉಚಿತ ವಿದ್ಯುತ್ ನೀಡಲು ಹೊಸ ಸೂತ್ರವೊಂದನ್ನು ಸರ್ಕಾರ ಮುಂದಿಟ್ಟಿದೆ.

ಈ ರೀತಿಯ ಗ್ರಾಹಕರಿಗೆ ವಿದ್ಯುತ್ ಬಳಕೆಯ ಸರಾಸರಿಯನ್ನು ತಿಂಗಳಿಗೆ 53 ಯೂನಿಟ್ ನಿಗದಿ ಮಾಡಿದ್ದು, ಅದಕ್ಕೆ ಶೇ 10 ರಷ್ಟು ಯೂನಿಟ್ ಹೆಚ್ಚುವರಿಯಾಗಿ ಸೇರಿಸಲಾಗುವುದು. ಅಂದರೆ, ಒಟ್ಟು 58 ರಿಂದ 59 ಯೂನಿಟ್‌ಗಳಷ್ಟು ವಿದ್ಯುತ್ ಅನ್ನು ಉಚಿತವಾಗಿ ಬಳಸಬಹುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಸುದ್ದಿಗಾರರಿಗೆ ತಿಳಿಸಿದರು.

‘ಹೊಸದಾಗಿ ಮನೆ ಕಟ್ಟಿಕೊಂಡು ವಾಸಕ್ಕೆ ಬಂದವರು ಮತ್ತು ಹೊಸದಾಗಿ ಬಾಡಿಗೆ ಮನೆ ಹಿಡಿದವರಿಗೆ ವಿದ್ಯುತ್ ಬಳಕೆಯ ಸರಾಸರಿ ಯಾವ ರೀತಿ ಲೆಕ್ಕ ಹಾಕಬೇಕು ಎಂಬ ಗೊಂದಲವಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯದ ಒಟ್ಟಾರೆ ಗೃಹ ಬಳಕೆಯ ಸರಾಸರಿ ಯೂನಿಟ್‌ಗಳನ್ನು ಗಣನೆಗೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ರಾಜ್ಯದಲ್ಲಿ ಗೃಹ ವಿದ್ಯುತ್ ಬಳಕೆಯ ಸರಾಸರಿ ಪ್ರಮಾಣ 53 ಯೂನಿಟ್‌ಗಳು. ಅದಕ್ಕೆ ಶೇ 10 ರಷ್ಟು ಯೂನಿಟ್‌ಗಳನ್ನು ಸೇರಿಸಲು ತೀರ್ಮಾನಿಸಲಾಯಿತು. ಈ ವಿಷಯವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ’ ಎಂದು ಅವರು ವಿವರಿಸಿದರು. ಒಂದು ವೇಳೆ ಈ ಗ್ರಾಹಕರು ನಿಗದಿತ ಯೂನಿಟ್‌ಗಳಿಂದ 200 ಯೂನಿಟ್‌ವರೆಗೆ ಬಳಕೆ ಮಾಡಿದರೆ, ವ್ಯತ್ಯಾಸದ ಮೊತ್ತವನ್ನು ಅವರೇ ಭರಿಸಬೇಕು. ಸಾಮಾನ್ಯ ಸ್ಲ್ಯಾಬ್ ಅನ್ವಯ ಬಿಲ್ ಪಾವತಿಸಬೇಕಾಗುತ್ತದೆ ಎಂದರು.

ಅಂಕಿ-ಅಂಶಗಳು

15	322	148
ಜಿಲ್ಲೆಗಳ ಕೆಲವೆಡೆ ನೀರಿನ ಕೊರತೆ	ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು	ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿ ಬಾಡಿಗೆ ಪಡೆದು ನೀರು ಪೂರೈಕೆ

ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಕೊರತೆ ಇರದಿದ್ದರೂ ಕಲುಷಿತ ನೀರಿನ ಸಮಸ್ಯೆ ಉಂಟಾಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಇದರ ವರದಿಯನ್ನು ಆಧರಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಶುದ್ಧ ನೀರು ಪೂರೈಕೆ: ಎಲ್ಲರಿಗೂ ಶುದ್ಧ ಕುಡಿಯುವ ನೀರು ಒದಗಿಸುವುದು ಅಧಿಕಾರಿಗಳ ಜವಾಬ್ದಾರಿ. ಅನುದಾನದ ಅಗತ್ಯವಿದ್ದರೆ ಒದಗಿಸಲಾಗುವುದು. ನೆಪ ಹೇಳಿ, ಜವಾಬ್ದಾರಿಯನ್ನು ಬೇರೊಬ್ಬರಿಗೆ ವಹಿಸಬಾರದು. ಕುಡಿಯುವ ನೀರಿನ ಸಮಸ್ಯೆ ಅತ್ಯಂತ ಸೂಕ್ಷ್ಮ ವಿಷಯ. ಮಳೆ ಬಂದು ಕುಡಿಯುವ ನೀರಿನ ಸಮಸ್ಯೆ ಬಗೆಹರಿದರೆ ಒಳ್ಳೆಯದು. ಇಲ್ಲವಾದರೆ, ಅಧಿಕಾರಿಗಳು 24 ಗಂಟೆಯೂ ಜಾಗೃತವಾಗಿದ್ದು, ನೀರಿನ ಸಮಸ್ಯೆ ಬಗೆಹರಿಸಬೇಕು ಎಂದು ತಾಕೀತು ಮಾಡಿದರು.

ಜಿಲ್ಲಾ ಮಟ್ಟದ ಅಧಿಕಾರಿಗಳು ಉಸ್ತುವಾರಿ ಸಚಿವರೊಂದಿಗೆ ಸಂಪರ್ಕದಲ್ಲಿದ್ದು, ನೀರಿನ ಸಮಸ್ಯೆ ಕುರಿತು ಸರಿಯಾದ ಮಾಹಿತಿ ಒದಗಿಸಬೇಕು. ಜಾನುವಾರುಗಳಿಗೂ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಎಚ್ಚರವಹಿಸಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ತಾಲ್ಲೂಕಿಗೆ ಭೇಟಿ ನೀಡಬೇಕು. ಪಿಡಿಒಗಳ ಕಾರ್ಯ ನಿರ್ವಹಣೆ ಬಗ್ಗೆ ನಿಗಾವಹಿಸಬೇಕು. ಜಲ ಜೀವನ್ ಮಿಷನ್ ಯೋಜನೆಯಡಿ ನೀರಿನ ಪೈಪ್ ಲೈನ್ ಅಳವಡಿಸಿರುವುದರ ಗುಣಮಟ್ಟ ಪರಿಶೀಲಿಸಿ, ಕೊಳವೆ ಒಡೆದು ಹೋಗುವುದು ಮತ್ತಿತರ ಸಮಸ್ಯೆ ಉಂಟಾದರೆ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು. ಸಭೆಯಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಇದ್ದರು.



ಮುಗಿಬಿದ್ದ ಮಹಿಳೆಯರು
ಹುಬ್ಬಳ್ಳಿ ಚನ್ನಮ್ಮ ವೃತ್ತದ ಬಳಿ ನಗರ ಸಾರಿಗೆ ಬಸ್ ಹತ್ತಲು ಮಹಿಳೆಯರು ಸೋಮವಾರ ಮುಗಿಬಿದ್ದರು
–ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಮೊದಲ ದಿನ ಪ್ರಯಾಣಿಸಿದ 5.71 ಲಕ್ಷ ಮಹಿಳೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಕ್ತಿ ಯೋಜನೆ ಜಾರಿಯಾದ ಮೊದಲ ದಿನ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಒಟ್ಟು 5,71,023 ಮಹಿಳೆಯರು ಪ್ರಯಾಣ ಮಾಡಿದ್ದಾರೆ.

ಭಾನುವಾರ ಮಧ್ಯಾಹ್ನ 1ಕ್ಕೆ ಶಕ್ತಿ ಯೋಜನೆ ಉದ್ಘಾಟನೆಗೊಂಡಿತ್ತು. ಅಲ್ಲಿಂದ ರಾತ್ರಿ 12 ಗಂಟೆಯವರೆಗೆ ಪ್ರಯಾಣಿಸಿದ ಮಹಿಳೆಯರ ವಿವರಗಳನ್ನು ಸಾರಿಗೆ ನಿಗಮ ನೀಡಿದೆ. ಸರ್ಕಾರ ಭರಿಸಲಿರುವ ಈ ಟಿಕೆಟ್‌ಗಳ ಒಟ್ಟು ಮೊತ್ತ ₹ 1,40,22,878 ಆಗಿದೆ.

ಕೆಎಸ್‌ಆರ್‌ಟಿಸಿಯಲ್ಲಿ 1,93,831 ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದರು. ಅದರ ಮೌಲ್ಯ ₹ 58,16,178 ಆಗಿದೆ. ಬಿಎಂಟಿಸಿಯಲ್ಲಿ 2,01,215 ಮಹಿಳೆಯರು ಈ ಯೋಜನೆಯನ್ನು ಮೊದಲ ದಿನ ಬಳಸಿಕೊಂಡಿದ್ದರು. ಅದರ ಮೌಲ್ಯ ₹ 26,19,604. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ 1,22,354 ಮಹಿಳೆಯರು ಪಯಣಿಸಿದ್ದರು. ಅದರ ಮೌಲ್ಯ ₹ 36,17,096. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 53,623 ಮಹಿಳೆಯರು ಪ್ರಯಾಣ ಬೆಳೆಸಿದ್ದರು. ಅದರ ಮೌಲ್ಯ ₹ 19.70 ಲಕ್ಷವಾಗಿದೆ.

ಭಾನುವಾರ ಮಧ್ಯಾಹ್ನ 1ರ ನಂತರ ಹೊರಟು ರಾತ್ರಿ 12ರ ನಂತರ ಹಿಂತಿರುಗಿರುವ ಬಸ್‌ಗಳಲ್ಲಿ ಪ್ರಯಾಣಿಸಿದ ಮಹಿಳಾ ಪ್ರಯಾಣಿಕರ ಸಂಖ್ಯೆ ಇದರಲ್ಲಿ ಸೇರಿಲ್ಲ ಎಂದು ಸಾರಿಗೆ ಇಲಾಖೆ ತಿಳಿಸಿದೆ.

ಇನ್ನೊಂದು ಸುದ್ದಿ 5

ಒಳಪುಟಗಳಲ್ಲಿ

ಹೆಲ್ಪ್ ಲೈನ್ ನಿರ್ವಾಹಕನಿಗೆ ₹4 ಲಕ್ಷ ವೇತನ 5



ಬಿಪರ್‌ಜಾಯ್ ಭೀತಿ: 7,500 ಜನರ ಸ್ಥಳಾಂತರ 9

‘ಕೋವಿನ್ ಪೋರ್ಟಲ್ ದತ್ತಾಂಶ ಸೋರಿಕೆಯಾಗಿಲ್ಲ’ 9

2 ವರ್ಷಗಳ ಕನಿಷ್ಠ ಮಟ್ಟಕ್ಕೆ ಹಣದುಬ್ಬರ

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರ ಪ್ರಮಾಣವು ಮೇ ತಿಂಗಳಲ್ಲಿ ಎರಡು ವರ್ಷಗಳ ಕನಿಷ್ಠ ಮಟ್ಟವಾದ ಶೇಕಡ 4.25ಕ್ಕೆ ಇಳಿಕೆ ಕಂಡಿದೆ. ಆಹಾರ ಮತ್ತು ಇಂಧನ ಉತ್ಪನ್ನಗಳ ಬೆಲೆ ಏರಿಕೆಯು ತಗ್ಗಿದ್ದು ಇದಕ್ಕೆ ಒಂದು ಕಾರಣ.

ಹಣದುಬ್ಬರ ಪ್ರಮಾಣವು ಕಡಿಮೆ ಆಗಿರುವುದರಿಂದಾಗಿ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಸಕ್ತ ಹಣಕಾಸು ವರ್ಷದಲ್ಲಿ ರೆಪೊ ದರವನ್ನು ಸ್ಥಿರವಾಗಿ ಇರಿಸಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ಮೇ ತಿಂಗಳ ಹಣದುಬ್ಬರ ಪ್ರಮಾಣವು 2021ರ ಏಪ್ರಿಲ್ ನಂತರದ ಅತಿ ಕಡಿಮೆ ಪ್ರಮಾಣ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಸತತ ನಾಲ್ಕು ತಿಂಗಳುಗಳಿಂದ ಕಡಿಮೆ ಆಗುತ್ತಿದೆ. ಅಲ್ಲದೆ, ಸತತ ಮೂರು ತಿಂಗಳುಗಳಿಂದ ಅದು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಗರಿಷ್ಠ ಮಿತಿಯಾಗಿರುವ ಶೇ 6ಕ್ಕಿಂತ ಕಡಿಮೆ ಇದೆ.

8ನೇ ಪುಟ ನೋಡಿ

ಏಪ್ರಿಲ್‌ನಲ್ಲಿ ಶೇ 4.2ರಷ್ಟು ಬೆಳವಣಿಗೆ ಕಂಡ ಕೈಗಾರಿಕಾ ಉತ್ಪಾದನೆ



ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ಏಪ್ರಿಲ್‌ನಲ್ಲಿ ಶೇಕಡ 4.2ಕ್ಕೆ ಏರಿಕೆ ಕಂಡಿದೆ. ಮಾರ್ಚ್‌ನಲ್ಲಿ ಶೇ 1.7ರಷ್ಟು ಇತ್ತು.

ಕೈಗಾರಿಕಾ ಉತ್ಪಾದನೆ ಸೂಚ್ಯಂಕದ (ಐಐಪಿ) ಆಧಾರದಲ್ಲಿ ಲೆಕ್ಕ ಹಾಕುವ ಕೈಗಾರಿಕಾ ಉತ್ಪಾದನೆಯು 2022ರ ಏಪ್ರಿಲ್‌ನಲ್ಲಿ ಶೇ 6.7ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಈ ವರ್ಷದ ಏಪ್ರಿಲ್‌ನಲ್ಲಿ ಶೇ 2.5ರಷ್ಟು ಇಳಿಕೆ ಕಂಡಂತಾಗಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ತಯಾರಿಕಾ ವಲಯದ ಚಟುವಟಿಕೆಯು ಈ ವರ್ಷದ ಏಪ್ರಿಲ್‌ನಲ್ಲಿ ಶೇ 4.9ರಷ್ಟು ಬೆಳವಣಿಗೆ ಕಂಡಿದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ಶೇ 5.6ರಷ್ಟು ಬೆಳವಣಿಗೆ ಕಂಡಿತ್ತು.

ವಿದ್ಯುತ್ ಉತ್ಪಾದನೆ ಶೇ 1.1ರಷ್ಟು ಆಗಿದೆ. ಬಂಡವಾಳ ಸರಕುಗಳ ಬೆಳವಣಿಗೆಯು ಹಿಂದಿನ ವರ್ಷದ ಏಪ್ರಿಲ್‌ನಲ್ಲಿ ಶೇ 12ರಷ್ಟು ಬೆಳವಣಿಗೆ ಕಂಡಿದ್ದು, ಈ ವರ್ಷದ ಏಪ್ರಿಲ್‌ನಲ್ಲಿ ಶೇ 6.2ರಷ್ಟು ಬೆಳವಣಿಗೆ ಸಾಧಿಸಿದೆ. ಗ್ರಾಹಕ ಬಳಕೆ ವಸ್ತುಗಳ ತಯಾರಿಕೆಯಲ್ಲಿನ ಬೆಳವಣಿಗೆ ಶೇ 7.2ರಷ್ಟು ಇದ್ದಿದ್ದು, ಶೇ 3.5ಕ್ಕೆ ಇಳಿಕೆ ಆಗಿದೆ.ಗಣಿ ವಲಯದ ಬೆಳವಣಿಗೆಯು ಈ ವರ್ಷದ ಏಪ್ರಿಲ್‌ನಲ್ಲಿ ಶೇ 5.1ರಷ್ಟು ಹೆಚ್ಚಾಗಿದೆ. ಕಳೆದ ವರ್ಷ ಶೇ 8.4ರಷ್ಟು ಬೆಳವಣಿಗೆ ಕಂಡಿತ್ತು. 2022–23ನೇ ಹಣಕಾಸು ವರ್ಷಕ್ಕೆ ಐಐಪಿ ಶೇ 5.2ರಷ್ಟು ಆಗಿದೆ. 2021–22ರಲ್ಲಿ ಶೇ 11.4ರಷ್ಟು ಆಗಿತ್ತು.

ರಾಜ್ಯದ ತೆರಿಗೆ ಪಾಲು ₹4,314 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರಕ್ಕೆ ತೆರಿಗೆ ಹಂಚಿಕೆಯ ಮೂರನೇ ಕಂತಿನ ರೂಪದಲ್ಲಿ ₹4,314 ಕೋಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ. ಕೇಂದ್ರವು 28 ರಾಜ್ಯಗಳಿಗೆ ಒಟ್ಟು ₹1.18 ಲಕ್ಷ ಕೋಟಿ ಬಿಡುಗಡೆಗೊಳಿಸಿದೆ.

ಸಾಮಾನ್ಯವಾಗಿ ಮಾಸಿಕ ₹59,140 ಕೋಟಿ ಬಿಡುಗಡೆ ಮಾಡಲಾಗುತ್ತಿತ್ತು.

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮುಖ್ಯಮಂತ್ರಿಗೆ ಬರಲಿದೆ ಹೊಸ ಫಾರ್ಚೂನರ್

ಸಚಿವರ ಕಾರು: ‘9’ರ ನಂಟು!

• ರಾಜೇಶ್ ರೈ ಚಟ್ಲ

ಬೆಂಗಳೂರು: ಐಷಾರಾಮಿ ಕಾರು ಖರೀದಿಸುವ ಖಯಾಲಿ ಹೊಂದಿರುವವರು ಅದಕ್ಕೆ ‘ಫ್ಯಾನ್ಸಿ ನಂಬರ್’ ಕೂಡಾ ಬಯಸುತ್ತಾರೆ. ಅದಕ್ಕಾಗಿ ಎಷ್ಟು ಬೇಕಾದರೂ ಖರ್ಚು ಮಾಡಲು ಸಿದ್ಧರಿರುತ್ತಾರೆ. ಆದರೆ, ಸರ್ಕಾರ ಹಣ ವ್ಯಯ ಮಾಡದೆ ಸಚಿವರು, ಅಧಿಕಾರಿಗಳು ಓಡಾಡಲು ಒದಗಿಸುವ ಕಾರಿಗೆ ಸಂಖ್ಯಾಶಾಸ್ತ್ರದ ಪ್ರಕಾರ ‘ಅದೃಷ್ಟ ಸಂಖ್ಯೆ’ ‘9’ರ ಬೆನ್ನೇರುತ್ತದೆ!

ಮುಖ್ಯಮಂತ್ರಿ, ಸಚಿವರು, ಅಧಿಕಾರಿಗಳಿಗೆ ಓಡಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ವಾಹನ ಒದಗಿಸುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಂಪುಟದ ಇತರ 32 ಸಚಿವರಿಗೂ ಈಗಾಗಲೇ ಕಾರು ನೀಡಲಾಗಿದೆ. ವಿಶೇಷವೆಂದರೆ, ಈ ಕಾರುಗಳ ನೋಂದಣಿ ಸಂಖ್ಯೆ ಒಂದಲ್ಲ ಒಂದು ರೀತಿಯಲ್ಲಿ ‘9’ರ ನಂಟು ಹೊಂದಿದೆ.

ಸಿದ್ದರಾಮಯ್ಯ ಅವರು 2019ರ ಮಾದರಿಯ 18,507 ಕಿ.ಮೀ ಸಂಚರಿಸಿದ ಫಾರ್ಚೂನರ್ (ನೋಂದಣಿ ಸಂಖ್ಯೆ ಕೆಎ–3–ಜಿಎ–4545) ಬಳಸುತ್ತಿದ್ದಾರೆ. ಅವರ ಕಾರಿನ ನೋಂದಣಿ ಸಂಖ್ಯೆಯ ಎಲ್ಲ ಸಂಖೆಗಳನ್ನು ಕೂಡಿಸಿದಾಗ ‘9’ ಆಗುತ್ತದೆ. (4+5+4+5= 18, 1+8=9). ಅಲ್ಲದೆ, ಶೀಘ್ರದಲ್ಲೇ ಮುಖ್ಯಮಂತ್ರಿಗೆ ₹ 40 ಲಕ್ಷದ ಹೊಸ ಫಾರ್ಚೂನರ್ ಕಾರನ್ನು ಸರ್ಕಾರ ಖರೀದಿಸಲಿದೆ.

ಡಿ.ಕೆ. ಶಿವಕುಮಾರ್ ಮತ್ತು ಸಚಿವರ ಪೈಕಿ ಎಂ.ಬಿ. ಪಾಟೀಲ, ಜಮೀರ್ ಅಹಮದ್ ಖಾನ್ ಅವರಿಗೆ ಟೊಯೊಟಾ ‘ಇನ್ನೋವಾ ಹೈಕ್ರಾಸ್’ ಕಾರು ನೀಡಲಾಗಿದೆ. ಇತ್ತೀಚೆಗಷ್ಟೆ ಭಾರತೀಯ ಮಾರುಕಟ್ಟೆಗೆ ಬಂದಿರುವ, 2023ರ ಮಾದರಿಯ ಈ ಕಾರುಗಳು ₹ 18.30 ಲಕ್ಷದಿಂದ ಟಾಪ್ ಎಂಡ್ ಮಾದರಿ ₹ 28.97 ಲಕ್ಷ ಬೆಲೆ ಹೊಂದಿದೆ. ಈ ಮೂವರೂ ಬಳಸುವ ಕಾರುಗಳು ಈಗಾಗಲೇ 5,500 ಕಿ.ಮೀಗೂ ಕಡಿಮೆ ಓಡಿದೆ.

9ನೇ ಪುಟ ನೋಡಿ

ಏನಿದು ವಿಶೇಷ?



‘9’ ಅಂಕಿ ಅತ್ಯಂತ ಶಕ್ತಿಶಾಲಿ ಮತ್ತು ಅದೃಷ್ಟದ ಸಂಖ್ಯೆ ಎಂದೇ ಪರಿಗಣಿಸಲಾಗಿದೆ. ನವಗ್ರಹ, ನವಧಾನ್ಯ, ನವಶಕ್ತಿಗಳು, ನವವಿಧ ಭಕ್ತಿಗಳು, ನವನಿಧಿಗಳು, ಮಹಾಭಾರತದಲ್ಲಿ 18 (1+8=9) ಪರ್ವಗಳು, ಭಗವದ್ಗೀತೆಯಲ್ಲಿ 18 ಅಧ್ಯಾಯಗಳಿವೆ. ಈ ಕಾರಣಕ್ಕೆ ಬಹುತೇಕ ವಾಹನ ಮಾಲೀಕರು ತಮ್ಮ ವಾಹನಗಳ ನೋಂದಣಿ ಸಂಖ್ಯೆ ಒಂದಲ್ಲ ಒಂದು ರೀತಿಯಲ್ಲಿ ‘9’ರ ಸಂಬಂಧ ಹೊಂದಬೇಕೆಂದು ಬಯಸುತ್ತಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಯೊಬ್ಬರು, ‘ಕಾರುಗಳಿಗೆ ‘9’ರ ನಂಟು ಇರುವ ನೋಂದಣಿ ಸಂಖ್ಯೆ ನೀಡುವಂತೆ ಸರ್ಕಾರದಿಂದಲೂ ಬೇಡಿಕೆ ಇದೆ. ಆದರೆ, ಕಾನೂನಿನಲ್ಲಿ ಅದಕ್ಕೆ ಅವಕಾಶ ಇಲ್ಲ. ಬೇಡಿಕೆ ಇರುವ ನಿರ್ದಿಷ್ಟ ಸಂಖ್ಯೆ ಅಥವಾ ಫ್ಯಾನ್ಸಿ ನಂಬರ್‌ನ್ನು ಇ–ಹರಾಜಿನಲ್ಲಿ ಪಡೆದುಕೊಳ್ಳಬೇಕು. ಇದರಿಂದ ಸಾರಿಗೆ ಇಲಾಖೆಗೂ ಆದಾಯ ಬರುತ್ತದೆ’ ಎಂದರು.

ಹಸಿವಿನಿಂದ ಹೆಣ್ಣು ಹುಲಿ ಸಾವು : ಸಿಬ್ಬಂದಿ ಗಸ್ತಿನಲ್ಲಿದ್ದಾಗ ಶವ ಪತ್ತೆ

ಹುಣಸೂರು (ಮೈಸೂರು ಜಿಲ್ಲೆ): ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಡಿ.ಬಿ.ಕುಪ್ಪೆ ವಲಯದ ಕಬಿನಿ- ತಡಿಕಿಹಳ್ಳ ಅರಣ್ಯ ಪ್ರದೇಶದಲ್ಲಿ 15ರಿಂದ 18 ತಿಂಗಳ ಹೆಣ್ಣು ಹುಲಿ ಸಾವಿಗೀಡಾಗಿರುವುದು ಭಾನುವಾರ ಸಂಜೆ ಪತ್ತೆಯಾಗಿದೆ.

'ಇಲಾಖೆಯ ಸಿಬ್ಬಂದಿಯು ಎಂದಿನಂತೆ ಗಸ್ತಿನಲ್ಲಿದ್ದಾಗ, ಹುಲಿಯು ಸತ್ತು ಬಿದ್ದಿದ್ದು ಕಂಡುಬಂದಿತ್ತು. ಮೇಲ್ನೋಟಕ್ಕೆ ಹುಲಿಯ ದೇಹದ ಮೇಲೆ ಗಾಯದ ಗುರುತುಗಳು ಕಂಡುಬಂದಿದ್ದವು. ರಾತ್ರಿಯಾಗಿದ್ದ-ರಿಂದ ಕಳೇಬರವನ್ನು ಯಥಾಸ್ಥಿತಿಯ-ಲ್ಲಿರಿಸಿ ಸಿಬ್ಬಂದಿ ಕಾವಲಿಡಲಾಗಿತ್ತು. ಸೋಮವಾರ ಮರಣೋತ್ತರ ಪರೀಕ್ಷೆ ನಡೆಸಲಾಯಿತು' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ ತಿಳಿಸಿದ್ದಾರೆ.

'ಆ ಹುಲಿಯು ಬೇರೊಂದು ಹುಲಿಯ ಜೊತೆ ಕಾದಾಡಿ ಎಡಗಾಲಿನ ಮೂಳೆ ಮುರಿದಿದೆ, ಬಲ ಮುಂಗಾಲು ಹಾಗೂ ದೇಹದ ಇತರ ಭಾಗಗಳಲ್ಲಿ ಗಾಯವಾಗಿ ಜ್ವರದಿಂದ ಹಾಗೂ ಹಸಿವಿನಿಂದ ಮೃತಪಟ್ಟಿದೆ ಎಂದು ದೃಢಪಟ್ಟಿದೆ. ಅಧಿಕಾರಿಗಳ ಸಮ್ಮುಖದಲ್ಲಿ ಪಶು ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷೆ ನಡೆಸಿದರು. ಈ ಸ್ಥಳವು ಹುಲಿ ಸಂರಕ್ಷಿತ ಪ್ರದೇಶದ ಕೋರ್ ವಲಯ ಆಗಿರುವುದರಿಂದ ಕಳೇಬರವನ್ನು ಸುಡಲಾಯಿತು' ಎಂದರು.

ಮೇಟಿಕುಪ್ಪೆ ವನ್ಯಜೀವಿ ಉಪವಿಭಾಗದ ಎಸಿಎಫ್ ರಂಗಸ್ವಾಮಿ ಕೆ.ಎನ್. ಕಂಚಮಳ್ಳಿ ಪಶು ವೈದ್ಯಾಧಿಕಾರಿ ಡಾ.ಪ್ರಸನ್ನ ಬಿ.ಬಿ., ಮಾದಾಪುರ ಪಶು ವೈದ್ಯಾಧಿಕಾರಿ ಡಾ.ಸಂದೀಪ್ ಎಂ., ವಲಯ ಅರಣ್ಯಾಧಿಕಾರಿ ಮಧು ಕೆ.ಎಲ್., ಮುಖ್ಯ ವನ್ಯಜೀವಿ ಪರಿಪಾಲಕ ಎಂ.ತನಿಕೋಡಿ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ನಾಮನಿರ್ದೇಶಿತ ಪ್ರತಿನಿಧಿ ವೆಂಕಟೇಶ್ ಎಂ.ಜೆ. ಹಾಜರಿದ್ದರು.

ಹೊಳೆಯಂತಾದ ರಸ್ತೆಗಳು • ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟಣೆ

ಮನೆಗಳಿಗೆ ನುಗ್ಗಿದ್ದ ರಾಜಕಾಲುವೆ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ಸಂಜೆಯಿಂದ ರಾತ್ರಿಯವರೆಗೂ ಜೋರು ಮಳೆ ಸುರಿದಿದ್ದು, ಪ್ರಮುಖ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು.

ಹಲವು ದಿನಗಳಿಂದ ನಗರದಲ್ಲಿ ಬಿಸಿಲು ಕಡಿಮೆಯಾಗಿ ಆಗಾಗ ಮೋಡ ಕವಿದ ವಾತಾವರಣ ಕಾಣಿಸಿಕೊಳ್ಳುತ್ತಿ-ದೆ. ಸೋಮವಾರವೂ ಕೆಲವೆಡೆ ಮೋಡ ಕವಿದ ವಾತಾವರಣವಿತ್ತು. ಸಂಜೆ ಜಿಟಿ ಜಿಟಿ ಆರಂಭವಾದ ಮಳೆ, ಕೆಲ ನಿಮಿಷಗಳಲ್ಲಿ ಜೋರಾಗಿ ಸುರಿಯಲಾ-ರಂಭಿಸಿತು.

ರಾಜರಾಜೇಶ್ವನಗರ, ಜ್ಞಾನಭಾರತಿ, ನಾಯಂಡನಹಳ್ಳಿ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಲಗ್ಗೆರೆ, ಪೀಣ್ಯ, ಯಶವಂತಪುರ, ಸದಾಶಿವನಗರ, ಮಲ್ಲೇಶ್ವರ, ಹೆಬ್ಬಾಳ, ಸಂಜಯನಗರ, ಆರ್‌.ಟಿ. ನಗರ, ಶಿವಾಜಿನಗರ, ಅಶೋಕನಗರ, ಎಂ.ಜಿ. ರಸ್ತೆ, ಕೋರಮಂಗಲ, ಮಡಿವಾಳ, ಶಾಂತಿನಗರ, ವಿಲ್ಸನ್ ಗಾರ್ಡನ್, ಚಾಮರಾಜಪೇಟೆ, ಜೆ.ಪಿ.ನಗರ, ಗಿರಿನಗರ ಹಾಗೂ ಸುತ್ತಮುತ್ತ ಪ್ರದೇಶ-ಗಳಲ್ಲಿ ಮಳೆ ಅಬ್ಬರ ಹೆಚ್ಚಿತ್ತು.

ಪ್ರಮುಖ ರಸ್ತೆಗಳು ಹಾಗೂ ಒಳ ರಸ್ತೆಗಳಲ್ಲಿ ಕಾಲುವೆಗಳು ನೀರಿನಿಂದ ತುಂಬಿ ಹರಿದವು. ಕಾಲುವೆಯಿಂದ ಹೊರಬಂದ ನೀರು, ರಸ್ತೆಯಲ್ಲಿ ಹರಿಯಿತು. ಇದೇ ಸ್ಥಿತಿಯಲ್ಲಿ ವಾಹನಗಳು ಸಂಚರಿಸಿದವು. ಕೆಲ ವಾಹನಗಳು, ನೀರಿನಲ್ಲಿಯೇ ಕೆಟ್ಟು ನಿಂತವು. ಕೆಲವೆಡೆ ರಸ್ತೆಗಳಲ್ಲಿ ಹರಿಯುತ್ತಿದ್ದ ನೀರಿನ ಜೊತೆ ತ್ಯಾಜ್ಯ ಹರಡಿಕೊಂಡಿತ್ತು.



ನಗರ್ತಪೇಟೆ ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲಿ ವಾಹನಗಳು ಸಂಚರಿಸಿದವು – ಪ್ರಜಾವಾಣಿ ಚಿತ್ರ

ಸ್ಥಳ	ಮಿ.ಮೀ
ವರ್ತೂರು	93.50
ಎಚ್‌ಎಎಲ್ ವಿಮಾನ ನಿಲ್ದಾಣ	88
ಮಾರತ್ತಹಳ್ಳಿ	87.50
ಹಗದೂರು	53
ಬೆಳ್ಳಂದೂರು	45.50
ವನ್ನಾರ್‌ಪೇಟೆ	44
ಸಂಪಂಗಿರಾಮನಗರ	36
ಕೋರಮಂಗಲ	33
ವಿಶ್ವೇಶ್ವರಪುರ	32
ದೊಡ್ಡನೆಕ್ಕುಂದಿ	30.50
ವಿಜ್ಞಾನಪುರ	30

ರಸ್ತೆಯಲ್ಲಿ ನೀರು ಹರಿಯುತ್ತಿದ್ದ-ರಿಂದ ವಾಹನಗಳ ಸಂಚಾರ ನಿಧಾ-ನಗತಿಯಲ್ಲಿತ್ತು. ಪ್ರಮುಖ ರಸ್ತೆಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತು, ವಿಪರೀತ ದಟ್ಟಣೆ ಕಂಡುಬಂತು.

ಮನೆಗೆ ನುಗ್ಗಿದ ನೀರು: ಬಿಬಿಎಂಪಿ ವಾರ್ಡ್ 118ರಲ್ಲಿರುವ ವಿನೋಬ ನಗರದಲ್ಲಿ ರಾಜಕಾಲುವೆ ನೀರು ಅಕ್ಕ-ಪಕ್ಕದ ಕೆಲ ಮನೆಯೊಳಗೆ ನುಗ್ಗಿತ್ತು.

ಮನೆಯೊಳಗೆ ನೀರು ನುಗ್ಗುತ್ತಿದ್ದಂತೆ ಆತಂಕಕ್ಕೆ ಒಳಗಾದ ನಿವಾಸಿಗಳು, ಮನೆ ಸಾಮಗ್ರಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸಿದರು. ಮನೆಯೊಳಗೆ ನುಗ್ಗಿದ್ದ ನೀರನ್ನು ಸ್ಥಳೀಯ ನಿವಾಸಿಗಳು ಹೊರಗೆ ಹಾಕಿದರು.

'ವಿನೋಬ ನಗರದಲ್ಲಿ ರಾಜಕಾಲುವೆ ಇದೆ. ಅದರಲ್ಲಿಯ ನೀರು ಮನೆಗಳಿಗೆ ನುಗ್ಗಿರುವ ಬಗ್ಗೆ ಮಾಹಿತಿ ಬಂದಿದೆ. ಸಿಬ್ಬಂದಿ ಸ್ಥಳಕ್ಕೆ ಹೋಗಿ ನೀರು ತೆರವು ಮಾಡುತ್ತಿದ್ದಾರೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಸ್ಥಳೀಯರೊಬ್ಬರು, 'ರಾಜಕಾಲುವೆ ಕಾಮಗಾರಿ ನಡೆಯುತ್ತಿದೆ. ಇದರಿಂದಾಗಿ ನೀರು ತುಂಬಿ ಹರಿದು ಮನೆಯೊಳಗೆ ನುಗ್ಗಿದೆ' ಎಂದರು. ನಗರದ ಪ್ರಮುಖ ಕಾಲುವೆ ಹಾಗೂ ರಾಜಕಾಲುವೆಗಳಲ್ಲಿ ನೀರು ಧಾರಾಕಾರವಾಗಿ ಹರಿಯಿತು.

ವರ್ತೂರು, ಮಾರತ್ತಹಳ್ಳಿಯಲ್ಲಿ ತುಂಬಿ ಹರಿದ ರಾಜಕಾಲುವೆ: ನಗರದ ವರ್ತೂರು ಹಾಗೂ ಮಾರತ್ತಹಳ್ಳಿಯಲ್ಲೂ ಜೋರು ಮಳೆ ಸುರಿಯಿತು. ಬಹುತೇಕ ರಾಜಕಾಲುವೆಗಳು ತುಂಬಿ ಹರಿದವು. ಅದೇ ನೀರು ರಸ್ತೆಯಲ್ಲಿ ಹರಿದಿದ್ದರಿಂದ, ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು.

ರಸ್ತೆಯಲ್ಲಿ ವಾಹನ, ಬೀದಿಬದಿ ಆಶ್ರಯ: ಕಚೇರಿ ಹಾಗೂ ಇತರೆ ಕೆಲಸ ಮುಗಿಸಿ ಸಂಜೆ ಮನೆಯತ್ತ ಹೊರಟಿದ್ದ ಜನ, ತೊಂದರೆ ಅನುಭವಿಸಿದರು.

ಮಳೆ ಸುರಿಯುತ್ತಿದ್ದ ವೇಳೆ ರಸ್ತೆ ಪಕ್ಕದಲ್ಲಿ ದ್ವಿಚಕ್ರ ವಾಹನಗಳನ್ನು ನಿಲ್ಲಿಸಿದ್ದ ಸವಾರರು, ಬೀದಿಬದಿಯ ಮಳಿಗೆಗಳಲ್ಲಿ ಆಶ್ರಯ ಪಡೆದಿದ್ದರು. ಹಲವೆಡೆ, ಕೆಳ ಸೇತುವೆಗಳಲ್ಲೂ ಜನರು ನಿಂತುಕೊಂಡಿದ್ದರು.

'ಮುಂಗಾರು ಆರಂಭವಾಗುತ್ತಿದೆ. ಬೆಂಗಳೂರಿನ ಹಲವೆಡೆ ಸೋಮವಾರ ಉತ್ತಮ ಮಳೆ ಆಗಿದೆ. ಮುಂದಿನ ಎರಡು ದಿನ ಮಳೆ ಮುಂದುವರಿಯುವ ಸಾಧ್ಯತೆ ಇದೆ' ಎಂದು ಹವಾಮಾನ ಇಲಾಖೆ ತಿಳಿಸಿವೆ.

ಮಾರುಕಟ್ಟೆಯಲ್ಲಿ ತೊಂದರೆ: ಚಿಕ್ಕಪೇಟೆ, ಕಾಟನ್‌ಪೇಟೆ, ಹಲಸೂರು ಗೇಟ್, ಕಲಾಸಿಪಾಳ್ಯ, ಕೆ.ಆರ್. ಮಾರುಕಟ್ಟೆ ಹಾಗೂ ಸುತ್ತಮುತ್ತ ಮಳೆ ಅಬ್ಬರ ಹೆಚ್ಚಿತ್ತು. ಚಿಕ್ಕದಾದ ರಸ್ತೆಯಲ್ಲಿ 2 ಅಡಿಯಷ್ಟು ನೀರು ಹರಿದು, ಜನರ ಓಡಾಟಕ್ಕೆ ತೊಂದರೆ ಆಯಿತು.

ಜೂನ್ 1ರಿಂದಲೇ ಪರಿಷ್ಕೃತ ಶುಲ್ಕ ವಸೂಲಿ

ಸದ್ದಿಲ್ಲದೆ ಮತ್ತೆ ಟೋಲ್ ಹೆಚ್ಚಳ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು-ಮೈಸೂರು ಹೆದ್ದಾರಿ ಸಂಚಾರ ಮತ್ತಷ್ಟು ದುಬಾರಿಯಾಗಿದೆ. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರವು ಸದಿಲ್ಲದೆ ಶೇ 22ರಷ್ಟು ಟೋಲ್ ಏರಿಕೆ ಮಾಡಿದೆ.

ಟೋಲ್ ಹೆಚ್ಚಳದ ಬಗ್ಗೆ ಸಾರ್ವ-ಜನಿಕರಿಗೆ ಮಾಹಿತಿ ನೀಡದೆ ಜೂನ್ 1ರಿಂದಲೇ ಪ್ರಾಧಿಕಾರ ಪರಿಷ್ಕೃತ ಶುಲ್ಕ ವಸೂಲು ಮಾಡುತ್ತಿದೆ. ಹೆಚ್ಚಿನ ಹಣ ಕಡಿತದಿಂದ ಪ್ರಯಾಣಿಕರ ಜೇಬಿಗೆ ಕತ್ತರಿ ಬೀಳುತ್ತಿರುವುದು ತಡವಾಗಿ ತಿಳಿದು ಬಂದಿದೆ. ಹೆಚ್ಚಿನ ವಾಹನಗಳಿಗೆ ಫಾಸ್ಟ್ಯಾಗ್ ಡಿಜಿಟಲ್ ಪಾವತಿ ವ್ಯವಸ್ಥೆ ಇರುವ ಕಾರಣ ಟೋಲ್ ಏರಿಕೆ ವಾಹನ ಸವಾರರು ಮತ್ತು ಮಾಲೀಕರ ಗಮನಕ್ಕೆ ಬಂದಿರಲಿಲ್ಲ.

ಇದೇ ಏಪ್ರಿಲ್ 1ರಂದು ಟೋಲ್ ದರ ಏರಿಕೆ ಮಾಡಲಾಗಿತ್ತು. ಆಗ ಸಾರ್ವಜನಿಕ ಆಕ್ರೋಶದ ಹಿನ್ನಲೆಯಲ್ಲಿ ಅದೇ ದಿನ ಹೆಚ್ಚಳ ನಿರ್ಧಾರ ಕೈಬಿಡಲಾಗಿತ್ತು. ಇದೀಗ ಮತ್ತೆ ಟೋಲ್ ದರ ಪರಿಷ್ಕರಣೆ ಮಾಡಲಾಗಿದೆ. ಶೇ 22 ರಷ್ಟು ಟೋಲ್ ಏರಿಕೆಯಾಗಿರು-ವುದನ್ನು ಪ್ರಾಧಿಕಾರದ ಮೂಲಗಳು ಖಚಿತಪಡಿಸಿವೆ.



₹200 ವರೆಗೆ ಏರಿಕೆ: ಕಾರು, ವ್ಯಾನ್, ಜೀಪ್‌ನಂತಹ ಲಘು ವಾಹನಗಳಿಗೆ ಕನಿಷ್ಠ ₹30 ಮತ್ತು ಏಳು ಎಕ್ಸೆಲ್‌ನ ಭಾರಿ ವಾಹನಗಳಿಗೆ ಗರಿಷ್ಠ ₹200ವರೆಗೆ ಟೋಲ್ ಹೆಚ್ಚಳವಾಗಿದೆ.

ಪರಿಷ್ಕೃತ ಟೋಲ್ (ಜೂನ್ 1ರಿಂದ ಜಾರಿ)

ವಾಹನ	ಹಳೆ ಟೋಲ್	ಪರಿಷ್ಕೃತ ಟೋಲ್	ಹೆಚ್ಚಳ ಮೊತ್ತ
(ಬೆಂಗಳೂರು-ಮೈಸೂರು ಏಕಮುಖ ಸಂಚಾರ)			
ಕಾರು, ವ್ಯಾನ್, ಜೀಪ್‌ಗಳು	₹135	₹165	₹30
ಲಘು ವಾಹನಗಳು, ಮಿನಿ ಬಸ್‌ಗಳು	₹220	₹270	₹50
ಟ್ರಕ್, ಬಸ್, 2 ಆಕ್ಸೆಲ್ ವಾಹನಗಳು	₹460	₹565	₹105
3 ಆಕ್ಸೆಲ್ ವಾಣಿಜ್ಯ ವಾಹನಗಳು	₹500	₹615	₹115
ಭಾರಿ ವಾಹನಗಳು	₹720	₹885	₹165
7 ಅಥವಾ ಅದಕ್ಕಿಂತ ಹೆಚ್ಚಿನ ಆಕ್ಸೆಲ್ ವಾಹನಗಳು	₹880	₹1,080	₹200

'ಕಾನೂನು ಇಲಾಖೆಗೆ ಮರುನಾಮಕರಣ'

ಪ್ರಜಾವಾಣಿ ವಾರ್ತೆ

ಗದಗ: 'ಕಾನೂನು ಇಲಾಖೆ ಹೆಸರನ್ನು ಕಾನೂನು, ನ್ಯಾಯ ಮತ್ತು ಮಾನ-ವಹಕ್ಕುಗಳ ಇಲಾಖೆ ಎಂದು ಮರುನಾಮಕರಣ ಮಾಡಲಾಗಿದೆ' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

'ಈ ಹಿಂದೆ ನಾನು ಕಾನೂನು ಸಚಿವನಾಗಿದ್ದ ವೇಳೆ ಹೆಸರನ್ನು ಬದಲಾ-ಯಿಸಲಾಗಿತ್ತು. ಆದರೆ, ತಾಂತ್ರಿಕ ಅಥವಾ ಇನ್ನಿತರ ಕಾರಣದಿಂದ ಹೆಸರು ಕಾನೂನು ಇಲಾಖೆಯಾಗಿಯೇ ಉಳಿದಿತ್ತು. ಈಗ ಕಾನೂನು ಇಲಾಖೆಗೆ ಮರುನಾಮಕರಣ ಮಾಡಲಾಗಿದೆ' ಎಂದು ಅವರು ಸೋಮವಾರ ಪತ್ರಿಕಾ-ಗೋಷ್ಠಿಯಲ್ಲಿ ತಿಳಿಸಿದರು.

'ಕಾನೂನು ಅನುಷ್ಠಾನದ ಜತೆಗೆ ಶಾಂತಿಯುತ ಸಮಾಜ ನಿರ್ಮಾಣದ ಉದ್ದೇಶದಿಂದ 'ವ್ಯಾಜ್ಯಮುಕ್ತ ಗ್ರಾಮ'ಗಳ ನಿರ್ಮಾಣಕ್ಕೆ ಒತ್ತು ಕೊಡಲಾಗುವುದು' ಎಂದು ಅವರು ಹೇಳಿದರು.

ಮಿಲಿಟರಿ ಕಾಲೇಜಿಗೆ ದಿವ್ಯಾಂಶ್ ಆಯ್ಕೆ

ಬೆಂಗಳೂರು: ಡೂನ್ ವ್ಯಾಲಿಯಲ್ಲಿ-ರುವ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜಿಗೆ (ಆರ್‌ಐಎಂಸಿ) ಕರ್ನಾಟಕದಿಂದ ದಿವ್ಯಾಂಶ್ ಪ್ರಕಾಶ್ ಆಯ್ಕೆಯಾಗಿದ್ದಾರೆ.



ದಿವ್ಯಾಂಶ್ ಪ್ರಕಾಶ್

2022ರ ಡಿಸೆಂಬರ್‌ನಲ್ಲಿ ರಾಷ್ಟ್ರ ಮಟ್ಟದಲ್ಲಿ ಪರೀಕ್ಷೆ ನಡೆದಿತ್ತು. ಏಪ್ರಿಲ್‌ನಲ್ಲಿ ಲಿಖಿತ ಪರೀಕ್ಷೆಯ ಫಲಿತಾಂಶ ಪ್ರಕಟವಾ-ಗಿತ್ತು. ಬಳಿಕ ಸಂದರ್ಶನ ನಡೆದಿತ್ತು. ಭಾನುವಾರ 33 ಮಂದಿಯ ಅರ್ಹತಾ ಪಟ್ಟಿಯನ್ನು ಆರ್‌ಐಎಂಸಿ ಪ್ರಕಟಿಸಿದ್ದು, ಕರ್ನಾಟಕದಿಂದ ಬೆಂಗಳೂರಿನ ಚಂದಾಪುರದ ದಿವ್ಯಾಂಶು ಒಬ್ಬರೇ ಈ ಪಟ್ಟಿಯಲ್ಲಿದ್ದಾರೆ. 10ನೇ ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಎರಡು ಬಾರಿ ಆರ್‌ಐಎಂಸಿ ಪರೀಕ್ಷೆ ನಡೆಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತದೆ.



'ಕುಂಟ ಕೋಣ ಮೂಕ ಜಾಣ' ನಾಟಕದ 101ನೇ ಪ್ರದರ್ಶನ ಉದ್ಘಾಟನಾ ಕಾರ್ಯಕ್ರಮದಲ್ಲಿ ರಂಗಕರ್ಮಿ ಬಿ. ಜಯಶ್ರೀ ಅವರು ಪುಟ್ಟರಾಜ ಗವಾಯಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು . ಸಂಚಯ ತಂಡದ ಗಣೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ, ನಾಟಕಕಾರ ರಾಜೇಂದ್ರ ಕಾರಂತ, ನಾಟ್ಯ ಸಂಘದ ಮಾಲೀಕ ಜೇವರ್ಗಿ ರಾಜಣ್ಣ ಇದ್ದರು –ಪ್ರಜಾವಾಣಿ ಚಿತ್ರ

'ಕಂಪನಿ ನಾಟಕ ಉಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮಿಳುನಾಡು, ಮಹಾರಾಷ್ಟ್ರ ಮತ್ತಿತರ ರಾಜ್ಯಗಳಲ್ಲಿ ಕಂಪನಿ ನಾಟಕಗಳು ನಶಿಸಿವೆ. ನಮ್ಮಲ್ಲಿ ಇನ್ನೂ ಉಳಿದಿರುವುದು ಹೆಮ್ಮೆಯ ವಿಚಾರ. ಸರ್ಕಾರ ಮತ್ತು ಪ್ರೇಕ್ಷಕರು ಈ ವೃತ್ತಿ ರಂಗಭೂಮಿಯನ್ನು ಉಳಿಸಿ, ಬೆಳೆಸಬೇಕು' ಎಂದು ಸಾಹಿತಿ ಚಂದ್ರಶೇಖರ ಕಂಬಾರ ಹೇಳಿದರು.

ಗಾಂಧಿನಗರದ ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಜೇವರ್ಗಿಯ ವಿಶ್ವಜ್ಯೋತಿ ಪಂಚಾಕ್ಷರ ನಾಟ್ಯ ಸಂಘದ 'ಕುಂಟ ಕೋಣ ಮೂಕ ಜಾಣ' ನಾಟಕದ 101ನೇ ಪ್ರದರ್ಶನ ಕಾರ್ಯಕ್ರಮದಲ್ಲಿ ಸೋಮವಾರ ಮಾತನಾಡಿದರು.

'ಕರ್ನಾಟಕದಲ್ಲಿ ನಾಟಕ ತಂಡಗಳು ಉಳಿದಿರುವುದು ನಮ್ಮ ಭಾಗ್ಯ. ಒಂದು ನಾಟಕ 15 ಸಾವಿರ ಪ್ರದರ್ಶನ ಕಾಣುವುದು ದೊಡ್ಡ ಸಾಧನೆ ಎಂದು ಬಣ್ಣಿಸಿದರು.

ರಂಗಕರ್ಮಿ ಬಿ. ಜಯಶ್ರೀ ಮಾತನಾಡಿ, 'ಈ ನಾಟಕ ಬೆಂಗಳೂರಿನಲ್ಲಿ 101ನೇ ಪ್ರದರ್ಶನವಾಗುತ್ತಿರುವಾಗ ಭಾರಿ ಸಂಭ್ರಮ ಕಾಣಬೇಕಿತ್ತು. ರಾಜಣ್ಣ ಅವರಿಗೆ ಆರೋಗ್ಯ ಸಮಸ್ಯೆಯೂ ಸೇರಿದಂತೆ ಕೆಲವು ಕಾರಣಗಳಿಂದ ಆ ಸಂಭ್ರಮ ಕಾಣುತ್ತಿಲ್ಲ' ಎಂದು ಬೇಸರಿಸಿದರು.


ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ, ಸಂಚಯ ತಂಡದ ಗಣೇಶ್, ನಾಟಕಕಾರ ರಾಜೇಂದ್ರ ಕಾರಂತ ಮಾತನಾಡಿದರು.

ವಿಶ್ವಜ್ಯೋತಿ ಪಂಚಾಕ್ಷರ ನಾಟ್ಯ ಸಂಘದ ಮಾಲೀಕ ಜೇವರ್ಗಿ ರಾಜಣ್ಣ ಇದ್ದರು. ಬೆಂಗಳೂರಿನಲ್ಲಿ ನಡೆದ ಎಲ್ಲ ಪ್ರದರ್ಶನಗಳನ್ನು ವೀಕ್ಷಿಸಿದ್ದ ಶೋಭಾ ಅವರನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು.

ಜೇವರ್ಗಿ ರಾಜಣ್ಣ ಬರೆದ 12 ನಾಟಕಗಳಲ್ಲಿ 'ಕುಂಟ ಕೋಣ ಮೂಕ ಜಾಣ' ಅತ್ಯಂತ ಜನಪ್ರಿಯ. ರಾಜ್ಯದಾದ್ಯಂತ 15 ಸಾವಿರಕ್ಕೂ ಹೆಚ್ಚು ಪ್ರದರ್ಶನ ಕಂಡ ಏಕೈಕ ನಾಟಕ ಎಂಬ ಹೆಗ್ಗಳಿಕೆಯನ್ನು ಪಡೆದಿದೆ.

ಬೆಂಗಳೂರು ವಿ.ವಿಗೆ ‘ಎ++’ ಮಾನ್ಯತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಬೆಂಗಳೂರು ವಿಶ್ವ ವಿದ್ಯಾಲಯಕ್ಕೆ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿಯಿಂದ (ನ್ಯಾಕ್) ’ಎ + + ’ ಶ್ರೇಣಿ ದೊರೆತಿದೆ’ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಯಕರ ಎಸ್.ಎಂ., ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ವಿಶ್ವ-ವಿದ್ಯಾಲಯವು 2018ರಿಂದ 2022 ರವರೆಗಿನ ಮೌಲ್ಯಮಾಪನ ಅವಧಿಯ ಸ್ವಯಂ ಅಧ್ಯಯನ ವರದಿಯನ್ನು ನ್ಯಾಕ್‌ಗೆ ಸಲ್ಲಿಸಿತ್ತು. ದೇಶದ ಕೆಲವೇ ಶೈಕ್ಷಣಿಕ ಸಂಸ್ಥೆಗಳು ನಾಲ್ಕನೇ ಆವೃತ್ತಿಗೆ ಮಂಡಳಿಯಿಂದ ಮಾನ್ಯತೆ ಪಡೆದಿವೆ. ಇವುಗಳಲ್ಲಿ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿ-ದ್ಯಾಲಯದ (ಜೆಎನ್‌ಯು) ನಂತರ ದೇಶದಲ್ಲಿ ಮೊದಲ ಬಾರಿಗೆ ಈ ಸಾಧನೆಗೈದಿರುವುದು ಬೆಂಗಳೂರು ವಿಶ್ವವಿದ್ಯಾಲಯ ಎಂಬುದು ಹೆಮ್ಮೆಯ ವಿಷಯ. ಈ ಮೂಲಕ ವಿಶ್ವ ವಿದ್ಯಾಲಯವು ಸಂಪೂರ್ಣ ಸ್ವಾಯತ್ತತೆಯನ್ನು ಪಡೆಯುವ ಅವಕಾಶ ಪಡೆದು ಕೊಂಡಿದೆ’ ಎಂದು ತಿಳಿಸಿದರು.

‘ನ್ಯಾಕ್ ನಿಗದಿಪಡಿಸಿದ ಮಾನದಂಡಗಳಾದ ಪಠ್ಯಕ್ರಮ, ಬೋಧನೆ ಹಾಗೂ ಕಲಿಕೆ, ಮೌಲ್ಯಮಾಪನ, ಸಂಶೋಧನೆ, ಮೂಲಸೌಕರ್ಯ, ಕಲಿಕಾ ಸಂಪನ್ಮೂಲ, ವಿದ್ಯಾರ್ಥಿಗಳ ಪ್ರಗತಿ, ಆಡಳಿತ ಮತ್ತು ನಿರ್ವಹಣೆ, ಸಾಂಸ್ಥಿಕ ಮೌಲ್ಯಗಳಲ್ಲಿ ವಿಶ್ವ-ವಿದ್ಯಾಲಯವು ಗರಿಷ್ಠ 4 ಅಂಕಗಳಲ್ಲಿ 3.75 ಅಂಕಗಳನ್ನು ಪಡೆದುಕೊಂಡಿದೆ. ಐದು ವರ್ಷಗಳವರೆಗೆ ಈ ಮಾನ್ಯತೆ ಇರಲಿದೆ. ನ್ಯಾಕ್ ತಂಡವು ಮೇ 17ರಿಂದ 19ರವರೆಗೆ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಇಲ್ಲಿನ ಸೌಕರ್ಯ ಮತ್ತು ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಂಡಿತ್ತು’ ಎಂದು ತಿಳಿಸಿದರು.

‘ಕಳೆದ ಐದು ವರ್ಷಗಳಲ್ಲಿ ಶೈಕ್ಷಣಿಕ ಮತ್ತು ಮೂಲ ಸೌಕರ್ಯಕ್ಕೆ ಸಂಬಂಧಿಸಿದ ವಿವಿಧ ಕಾರ್ಯಗಳ ಮೂಲಕ ವಿವಿಯು ಶೈಕ್ಷಣಿಕ ಉತ್ಕೃಷ್ಟತೆಯನ್ನು ಸಾಧಿಸಿದೆ. ಹಿಂದಿನ ಎರಡು ಆವೃತ್ತಿಗಳಲ್ಲಿ 3.16 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ‘ಎ’ ಶ್ರೇಣಿ ಪಡೆದಿತ್ತು. ಹಲವು ಆಯಾಮಗಳಲ್ಲಿ ವಿವಿಯು ತನ್ನ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡ ಪರಿಣಾಮ ‘ಎ ಪ್ಲಸ್ ಪ್ಲಸ್’ ಶ್ರೇಣಿ ಪಡೆಯಲು ಸಾಧ್ಯವಾಗಿದೆ’ ಎಂದರು.

‘ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆ, ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಹೊಸ ಕೋರ್ಸ್‌ಗಳ ಪರಿಚಯ, ಪ್ರತಿ ಅಧ್ಯಾಪಕರಿಂದ ಹತ್ತಕ್ಕೂ ಹೆಚ್ಚು ಸಂಶೋಧನಾ ಪ್ರಕಟಣೆಗಳು, ಹೆಚ್ಚಿನ ಸಂಶೋಧನಾ ನಿಧಿ, ಅನೇಕ ಸಲಹಾ ಯೋಜನೆಗಳು, ಅತ್ಯುತ್ತಮ ಉಲ್ಲೇಖ ಸೂಚ್ಯಂಕ, 53 ಪೇಟೆಂಟ್‌ಗಳು, ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ವಿಶೇಷ ಬೆಂಬಲ ಜೈವಿಕ ವೈವಿಧ್ಯತೆಯ ಸಂರಕ್ಷಣೆ ಮತ್ತು ಇ-ಆಡಳಿತದಂತಹ ಕಾರ್ಯಕ್ರಮಗಳ ಮೂಲಕ ಈ ಶೈಕ್ಷಣಿಕ ಉತ್ಕೃಷ್ಟತೆ ಸಿಕ್ಕಿದೆ’ ಎಂದು ವಿವರಿಸಿದರು.

ಬೆಂಗಳೂರು ವಿವಿ ಪಡೆದ ಅಂಕಗಳು

ವಿಷಯ	ಅಂಕ
ಪಠ್ಯಕ್ರಮದ ಅಂಶಗಳು	4
ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ	3.8
ಸಂಶೋಧನೆ ಮತ್ತು ಆವಿಷ್ಕಾರ	3.72
ಮೂಲಸೌಕರ್ಯ ಮತ್ತು ಕಲಿಕಾ ಸಂಪನ್ಮೂಲಗಳು	3.85
ವಿದ್ಯಾರ್ಥಿಗಳು ಸಹಕಾರ ಮತ್ತು ಪ್ರಗತಿ	3.48
ಆಡಳಿತ, ನಾಯಕತ್ವ ಮತ್ತು ನಿರ್ವಹಣೆ	3.34
ವಿದ್ಯಾಸಂಸ್ಥೆಯ ಮೌಲ್ಯಗಳು, ಉತ್ತಮ ಚಟುವಟಿಕೆಗಳು	3.95

‘ಸಂಶೋಧನೆಗೆ ಹೆಚ್ಚಿನ ಧನ ಸಹಾಯ’

‘ಎ + + ಶ್ರೇಣಿಯೊಂದಿಗೆ ವಿವಿಯು ದೇಶ-ವಿದೇಶಗಳಲ್ಲಿ ಕ್ಯಾಂಪಸ್ ಸ್ಥಾಪಿಸುವ ಸ್ವಾಯತ್ತತೆಯನ್ನು ಪಡೆದುಕೊಂಡಿದೆ. ಹೈಬ್ರಿಡ್ ಹಾಗೂ ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸಬಹುದು. ಅಲ್ಲದೇ ಶ್ರೇಷ್ಠ ಸಂಸ್ಥೆಯ ಸ್ಥಾನಮಾನ ಪಡೆಯಲು ಪ್ರಯತ್ನಿಸುವುದರ ಮೂಲಕ ಸಂಶೋಧನೆ ಹಾಗೂ ಆವಿಷ್ಕಾರಗಳಿಗೆ ಹೆಚ್ಚು ಧನ ಸಹಾಯವನ್ನು ಪಡೆಯಬಹುದು’ ಎಂದು ಕುಲಪತಿ ಜಯಕರ ಎಸ್.ಎಂ. ತಿಳಿಸಿದರು.

ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಿ.ಎಂ ಹೇಳಿಕೆ

ಸರ್ಕಾರಿ ಆಸ್ಪತ್ರೆಗಳ ಸುಧಾರಣೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ಆಸ್ಪತ್ರೆಗಳಿಗೆ ಸಮಾನವಾದ ಸೇವೆ ಸಿಗುವಂತೆ ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಸುಧಾರಣೆಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಸಮಿತಿ ನೇತೃತ್ವದಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ಆಯೋಜಿಸಿದ್ದ ಸಮಾರಂಭದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಶುಶ್ರೂಷಕರಿಗೆ ‘ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ಸರ್ಕಾರಿ ಆಸ್ಪತ್ರೆ ಮತ್ತು ಖಾಸಗಿ ಆಸ್ಪತ್ರೆಗಳ ವೈದ್ಯರು ಮತ್ತು ಶುಶ್ರೂಷಕ-ರಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ಆದರೆ, ಕಾರ್ಯನಿರ್ವಹಣೆಯ ವಿಧಾನ ಮತ್ತು ಶಿಸ್ತಿನಲ್ಲಿ ವ್ಯತ್ಯಾಸ ಇದೆ. ಸರ್ಕಾರಿ ಆಸ್ಪತ್ರೆಗಳಲ್ಲೂ ಶಿಸ್ತು ತಂದರೆ ಸುಧಾರಣೆ ಸಾಧ್ಯವಾಗಲಿದೆ. ಆ ದಿಕ್ಕಿನಲ್ಲಿ ನಮ್ಮ ಸರ್ಕಾರ ಕೆಲಸ ಮಾಡಲಿದೆ’ ಎಂದರು.

‘ರಾಜಕಾರಣಿಗಳು ಸರ್ಕಾರಿ ಆಸ್ಪತ್ರೆ-ಗಳಲ್ಲಿ ಚಿಕಿತ್ಸೆ ಪಡೆದು ಜನರಲ್ಲಿ ಭರವಸೆ ಮೂಡಿಸುವ ಕೆಲಸ ಮಾಡಬೇಕಿದೆ’ ಎಂದು ಹೇಳಿದರು.

ಜಯದೇವ ಮಾದರಿ ಸಂಸ್ಥೆ: ‘ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ರಾಜಕಾರಣಿಗಳು, ಶ್ರೀಮಂತರೂ ಚಿಕಿತ್ಸೆ ಪಡೆಯುತ್ತಾರೆ. ಅಲ್ಲಿ ಶಿಸ್ತು ಇರುವುದಕ್ಕೆ ಎಲ್ಲರೂ ಹೋಗುತ್ತಾರೆ. ಅದೊಂದು ಮಾದರಿ ಆಸ್ಪತ್ರೆ. ಇತರ ಸರ್ಕಾರಿ ಆಸ್ಪತ್ರೆಗಳಲ್ಲಿ ಇದೇಕೆ ಸಾಧ್ಯ ಆಗುವುದಿಲ್ಲ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

‘ಸರ್ಕಾರಿ ಆಸ್ಪತ್ರೆಗಳಲ್ಲಿ ಶುಶ್ರೂಷಕರ ಕೊರತೆ ಆಗದಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ. ಆಸ್ಪತ್ರೆಗಳ ಸುಧಾರಣೆಗೆ ವೈದ್ಯರು, ಶುಶ್ರೂಷಕರು ಸಹಕಾರ ನೀಡಬೇಕು’ ಎಂದು ಕೋರಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಸಮಿತಿ ಅಧ್ಯಕ್ಷ ಐವಾನ್ ನಿಗ್ಲಿ, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್ ಕುಮಾರ್, ಆಯುಕ್ತ ಡಿ. ರಂದೀಪ್ ಇದ್ದರು.



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ‘ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ’ ಪುರಸ್ಕೃತರ ಸಂಭ್ರಮ – ಪ್ರಜಾವಾಣಿ ಚಿತ್ರ

12 ಮಂದಿಗೆ ಪ್ರಶಸ್ತಿ ಪ್ರದಾನ

ಐದು ಸಾವಿರ ಹೆರಿಗೆಗಳಿಗೆ ಸಹಕರಿಸಿರುವ ಗದಗ ಜಿಲ್ಲೆಯ ನರಗುಂದ ತಾಲ್ಲೂಕು ಆಸ್ಪತ್ರೆಯ ನರ್ಸಿಂಗ್ ಅಧಿಕಾರಿ ಭಾರತಿ ಪಾಟೀಲ್, 37,000 ಜನರಿಗೆ ನರ್ಸಿಂಗ್ ತರಬೇತಿ ನೀಡಿರುವ ಬೆಂಗಳೂರಿನ ವಿಮೆಡೊ ಅಕಾಡೆಮಿಯ ಕಾರ್ಯನಿರ್ವ-ಹಣಾ ವಿಭಾಗದ ಮುಖ್ಯಸ್ಥ ಶಶಿಕುಮಾರ್ ಎಚ್.ಎಸ್. ಸೇರಿದಂತೆ 12 ಮಂದಿಗೆ ‘ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಬೆಂಗಳೂರಿನ ಸ್ಪರ್ಶ್ ಆಸ್ಪತ್ರೆಯ ಜೆಮಿಮಲ್ ಕ್ರಿಸ್ಟೋಫರ್, ಬನ್ನೇರುಘಟ್ಟದ ಫೋರ್ಟಿಸ್ ಆಸ್ಪತ್ರೆಯ ಹಿರಿಯ ಶುಶ್ರೂಷಕಿ ಪ್ರಿಯದರ್ಶಿನಿ ಆರ್., ಬೆಂಗಳೂರು ವೈದ್ಯಕೀಯ ಕಾಲೇಜಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸೋಂಕು ನಿಯಂತ್ರಣ ವಿಭಾಗದ ಜಾನ್ ಮಾರ್ಷಲ್ ಎಲ್., ಮಂಗಳೂರು ಕೆಎಂಸಿ ಆಸ್ಪತ್ರೆಯ ಭುವನೇಶ್ವರಿ, ಮಂಗಳೂರಿನ ಫಾದರ್ ಮುಲ್ಲರ್ಸ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಾರ್ಡ್ ಉಸ್ತುವಾರಿ ಪ್ರೆಸಿಲ್ಲಾ ರೋಡ್ರಿಗಸ್, ಮೈಸೂರು ಕೆ.ಆರ್. ಆಸ್ಪತ್ರೆಯ ಹಿರಿಯ ನರ್ಸಿಂಗ್ ಅಧಿಕಾರಿ ಎಂ.ಎಂ. ರತಿ, ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯ ನರ್ಸಿಂಗ್ ಅಧಿಕಾರಿ ಶೈಲಜಾ ಬಿ.ಎಂ., ಹೊಸಪೇಟೆ ಸಾರ್ವಜನಿಕ ಆಸ್ಪತ್ರೆಯ ನರ್ಸಿಂಗ್ ಅಧಿಕಾರಿ ಬಿ. ರೇಣುಕಾ, ವಿಕ್ಟೋರಿಯಾ ಆಸ್ಪತ್ರೆಯ ನರ್ಸಿಂಗ್ ಅಧೀಕ್ಷಕಿ ಕವಿತಾ ಮತ್ತು ಹುಬ್ಬಳ್ಳಿಯ ಕೆ.ಎಲ್.ಇ. ನರ್ಸಿಂಗ್ ವಿಜ್ಞಾನಗಳ ಕಾಲೇಜು ಪ್ರಾಂಶುಪಾಲ ಡಾ.ಸಂಜಯ್ ಎಂ. ಪೀರಾಪುರ್ ಅವರಿಗೆ ಮುಖ್ಯಮಂತ್ರಿಯವರು ಪ್ರಶಸ್ತಿ ಪ್ರದಾನ ಮಾಡಿದರು.

ನರ್ಸಿಂಗ್ ವಿ.ವಿ. ಬೇಡಿಕೆ ಪರಿಶೀಲನೆ

ರಾಜ್ಯದಲ್ಲಿ ನರ್ಸಿಂಗ್ ಶಿಕ್ಷಣಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯ ಆರಂಭಿಸುವಂತೆ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಸಮಿತಿ ಅಧ್ಯಕ್ಷ ಐವಾನ್ ನಿಗ್ಲಿ ಒತ್ತಾಯಿಸಿದರು.

ಈ ಕುರಿತು ತಮ್ಮ ಭಾಷಣದಲ್ಲಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಈಗಾಗಲೇ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇದೆ. ಎಲ್ಲ ವಿಷಯಗಳಿಗೂ ಪ್ರತ್ಯೇಕ ವಿಶ್ವವಿದ್ಯಾಲಯ ಆರಂಭಿಸುವುದು ಕಷ್ಟ. ಆದರೂ, ನರ್ಸಿಂಗ್ ವಿಶ್ವವಿದ್ಯಾಲಯ ಆರಂಭಿಸಬೇಕೆಂಬ ಬೇಡಿಕೆ ಕುರಿತು ಪರಿಶೀಲಿಸಿ, ನಿರ್ಧಾರಕ್ಕೆ ಬರಲಾಗುವುದು’ ಎಂದರು.

‘ದೇಶದ್ರೋಹಕ್ಕೆ ಜಾಮೀನು ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ’ದೇಶದ್ರೋಹ-ದಂತಹ ಗಂಭೀರ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನಿನ ಕರುಣೆ ತೋರಲಾಗದು‘ ಎಂದು ಅಭಿಪ್ರಾಯ-ಪಟ್ಟಿರುವ ಹೈಕೋರ್ಟ್, 2020ರಲ್ಲಿ ಬೆಂಗಳೂರಿನಲ್ಲಿ ನಡೆದ ಡಿ.ಜೆ ಹಳ್ಳಿ, ಕೆ.ಜಿ ಹಳ್ಳಿ ಪೊಲೀಸ್ ಠಾಣೆಗಳ ಮೇಲಿನ ಗಲಭೆಗೆ ಸಂಬಂಧಿಸಿದ ಆರೋಪಿಯ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ.

ಜಾಮೀನು ಕೋರಿ ಪ್ರಕರಣದ 22ನೇ ಆರೋಪಿಯಾದ ಕೆ.ಜಿ. ಹಳ್ಳಿಯ ವಿನೋಬಾ ನಗರದ ಇಮ್ರಾನ್ ಆಹಮದ್ (40) ಸಲ್ಲಿಸಿದ್ದ ಅರ್ಜಿ ವಿಲೇವಾರಿ ಮಾಡಿರುವ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಹಾಗೂ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಸಂವಿಧಾನದ ಪ್ರಕಾರ ವೈಯಕ್ತಿಕ ಸ್ವಾತಂತ್ರ್ಯವಿದ್ದರೂ ಸಮಾಜದ ಹಿತದೃಷ್ಟಿ ಮತ್ತು ಸಾರ್ವಜನಿಕ ಸುರಕ್ಷೆಯ ಕಾರಣದಿಂದ ಇಂತಹ ಪ್ರಕರಣಗಳ ಆರೋಪಿಗಳಿಗೆ ಜಾಮೀನು ನೀಡಲಾಗದು. ದೇಶದ್ರೋಹದಂ-ತಹ ಗಂಭೀರ ಸ್ವರೂಪದ ಅಪರಾಧಗಳನ್ನು ಹತ್ತಿಕ್ಕಲು ಸಂಸತ್ ಶಾಸನವನ್ನು ರೂಪಿಸಿರುವುದು ಪರಿಗಣಿಸಬೇಕಾಗುತ್ತದೆ‘ ಎಂದು ನ್ಯಾಯಪೀಠ ಹೇಳಿದೆ. ಎನ್‌ಐಎ ಪರ ವಿಶೇಷ ಪ್ರಾಸಿಕ್ಯೂಟರ್ ಪಿ. ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು.

ನಿರ್ದೇಶನ: ಪ್ರಕರಣದಲ್ಲಿ ಹಲವು ಆರೋಪಿಗಳ ಜಾಮೀನು ಅರ್ಜಿಗಳನ್ನು ಇದೇ ಹೈಕೋರ್ಟ್‌ನ ಸಹವರ್ತಿ ನ್ಯಾಯಪೀಠಗಳು ವಜಾಗೊಳಿಸಿರುವ ಅಂಶ ಉಲ್ಲೇಖಿಸಿರುವ ನ್ಯಾಯಪೀಠವು, ‘ಈ ಪ್ರಕರಣದಲ್ಲಿ ಆರೋಪಿಗಳಿಗೆ ತ್ವರಿತ ನ್ಯಾಯ ಕೇಳುವ ಎಲ್ಲಾ ಸಾಂವಿಧಾನಿಕ ಹಕ್ಕುಗಳಿವೆ. ಇದು ತ್ವರಿತ ವಿಚಾರಣೆಗೆ ಹೇಳಿ ಮಾಡಿಸಿದ ಪ್ರಕರಣ. ಸಾಧ್ಯವಾದರೆ ಪ್ರತಿದಿನ ವಿಚಾರಣೆ ನಡೆಸಬೇಕು’ ಎಂದು ನಿರ್ದೇಶಿಸಿದೆ.

ಜುಲೈನಲ್ಲಿ ಚಂದ್ರಯಾನ 3

ಕೊಟ್ಟಾಯಂ (ಪಿಟಿಐ): ‘ಎಲ್ಲಾ ಪರೀಕ್ಷೆಗಳು ಸುಸೂತ್ರವಾಗಿ ನಡೆದರೆ ಜುಲೈ 12ರಿಂದ 19ರ ನಡುವೆ ಚಂದ್ರನ ದಕ್ಷಿಣ ಧ್ರುವಕ್ಕೆ ಚಂದ್ರಯಾನ-3ರ ಬಾಹ್ಯಾಕಾಶ ನೌಕೆಯ ಉಡಾವಣೆ ನಡೆಯಲಿದೆ’ ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದರು.

ಸಂತ ಕ್ಲೇವಿಯರ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ನಗರದಲ್ಲಿ ಇಂದು

ಉದ್ಯೋಗ ಮೇಳ: ಅತಿಥಿಗಳು: ರಾವ್ ಸಾಹೇಬ್ ದಾದಾರಾವ್ ದಾನ್ವೆ, ಆಯೋಜನೆ: ಕೆನರಾ ಬ್ಯಾಂಕ್, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 9ರಿಂದ

ಪರಿಶಿಷ್ಟ ಸಮುದಾಯಗಳ ಸಹೋದರತ್ವ ಸಮಾವೇಶ: ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಡಾ.ಜಿ. ಪರಮೇಶ್ವರ್, ಅಧ್ಯಕ್ಷತೆ: ಎಚ್.ಪಿ. ಸುಧಾಮ್ ದಾಸ್, ಅತಿಥಿಗಳು: ಬಿ. ಗೋಪಾಲ್, ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಡಾ.ಎಚ್.ಸಿ. ಮಹದೇವಪ್ಪ, ಆರ್.ಬಿ. ತಿಮ್ಮಾಪುರ, ಶಿವರಾಜ್ ತಂಗಡಗಿ, ಕೆ.ಎನ್. ರಾಜಣ್ಣ, ಆಯೋಜನೆ: ಕಾಂಗ್ರೆಸ್ ಪ್ರಚಾರ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11

ಐತಿಹಾಸಿಕ ಪಾಕ ಪದ್ಧತಿಗಳನ್ನು ಪುನರುಜ್ಜೀವನಗೊಳಿಸುವ ಸ್ಪರ್ಧೆ: ಅತಿಥಿಗಳು: ಕೆ.ಎಚ್. ಮುನಿಯಪ್ಪ, ದಿನೇಶ್ ಗುಂಡೂರಾವ್, ಆಯೋಜನೆ: ಸೌತ್ ಇಂಡಿಯಾ ಶೆಫ್ ಅಸೋಸಿಯೇಷನ್, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11.30

ಪ್ರವಚನ ವಾಹಿನಿ: ‘ವಿದುರ ನೀತಿ’ ಕುರಿತು ಉಪನ್ಯಾಸ: ಆನಂದ ತೀರ್ಥಾಚಾರ್ ಮಾಳಗಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಧಾರ್ಮಿಕ ಪ್ರವಚನ: ಭಜನೆ: ದೇವಗಿರಿ ಲಕ್ಷ್ಮೀಕಾಂತ ಭಜನಾ ಮಂಡಳಿ ಮತ್ತು ತಂಡ, ‘ವಿಜಯ ಕವಚ’ದ ಕುರಿತು ಕಲ್ಯಾ ಶ್ರೀಕಾಂತಾಚಾರ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಪ್ರಸನ್ನವರದ ಶ್ರೀನಿವಾಸಸ್ವಾಮಿ ದೇವಸ್ಥಾನ, ಗಾಂಧಿ ಬಜಾರ್ ಸಂಜೆ 6ರಿಂದ

‘ಮುದಿ ದೊರೆ ಮತ್ತು ಮೂವರು ಮಕ್ಕಳು’ ನಾಟಕ ಪ್ರದರ್ಶನ: ರಚನೆ: ಎಚ್.ಎಸ್. ವೆಂಕಟೇಶಮೂರ್ತಿ, ನಿರ್ದೇಶನ: ಎನ್. ಮಂಗಳಾ, ಉಪಸ್ಥಿತಿ: ಬಿ.ವಿ. ರಾಜಾರಾಂ, ಆಯೋಜನೆ: ಭಾಗವತರು ನಾಟಕೋತ್ಸವ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

***

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ

nagaradalli_indu@prajavani.co.in



ಪ್ರತಿ ವರ್ಷ ಜೂನ್ ಹದಿನಾಲ್ಕರಂದು ವಿಶ್ವ ರಕ್ತದಾನಿಗಳ ದಿನವನ್ನಾಗಿ ಆಚರಿಸಲಾಗುತ್ತದೆ. ರಕ್ತದಾನಕ್ಕೆ ಮುಂದಾಗಿ, ಅಗತ್ಯವಿದ್ದಾಗ ಕೇವಲ ಕಿರುಬಿಲ್ಲೆಗಳನ್ನು ದಾನ ಮಾಡುವ ದಾನಿಯಾಗಿಯೂ ಮುಂದಾಗಿ. ಇದರಿಂದ ದಾನಿಗೆ ಯಾವುದೇ ಅಪಾಯವಿಲ್ಲ. ಇದು ರಕ್ತಸ್ರಾವದ ಅಪಾಯದಲ್ಲಿರುವ ರೋಗಿಗೆ ಮರುಜೀವ ಕೊಡಬಲ್ಲ ಸಂಜೀವಿನಿ.

ಜೀವಸಂಜೀವಿನಿ ಏಕದಾನಿಯ ಪ್ಲೇಟ್‌ಲೇಟ್

ಡಾ. ವಿನಯ ಶ್ರೀನಿವಾಸ್

ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿದ್ದ ರೋಗಿ ಡೆಂಗಿ ಜ್ವರದಿಂದ ಬಳಲುತ್ತಿದ್ದರು. ರಕ್ತಪರೀಕ್ಷೆ ಮಾಡಿಸಿದಾಗ ಕಿರುಬಿಲ್ಲೆಗಳ (ಪ್ಲೇಟ್‌ಲೇಟ್) ಸಂಖ್ಯೆ ವಿಪರೀತ ಕಡಿಮೆಯಾಗಿತ್ತು. ಸಾಮಾನ್ಯವಾಗಿ ಒಂದೂವರೆ ಲಕ್ಷಕ್ಕೂ ಮೇಲ್ಪಟ್ಟು ಇರಬೇಕಾಗಿದ್ದ ಕಿರುಬಿಲ್ಲೆಗಳು ಕೇವಲ ಆರು ಸಾವಿರಕ್ಕೆ ಇಳಿದಿದ್ದವು. ಅದು ಅವರಲ್ಲಿ ಯಾವುದೇ ಕ್ಷಣದಲ್ಲಿ ತೀವ್ರ ರಕ್ತಸ್ರಾವ ಉಂಟುಮಾಡುವ ಸಂಭವವಿತ್ತು. ಅದರ ಸೂಕ್ಷ್ಮವನ್ನು ಅರಿತ ಅಲ್ಲಿನ ತಜ್ಞವೈದ್ಯರು, ನಮ್ಮ ರಕ್ತಕೇಂದ್ರವನ್ನು ಸಂಪರ್ಕಿಸಿ, 'ನಿಮ್ಮಲ್ಲಿ ಸಿಂಗಲ್ ಡೋನರ್ ಪ್ಲೇಟ್‌ಲೇಟ್ ಲಭ್ಯವಿದೆಯೆ?' ಎಂದು ಕೇಳಿದ್ದರು. ನಮ್ಮಲ್ಲಿ ಸೌಲಭ್ಯವಿಲ್ಲದಿದ್ದ ಕಾರಣ ಬೇರೊಂದು ರಕ್ತ ಕೇಂದ್ರದಿಂದ ಅದಕ್ಕೆ ವ್ಯವಸ್ಥೆ ಮಾಡಿಕೊಟ್ಟೆವು.

ಏನಿದು ಒಬ್ಬ ದಾನಿಯ ಪ್ಲೇಟ್‌ಲೇಟ್?

ಕೆಂಪು ರಕ್ತಕಣ, ಬಿಳಿ ರಕ್ತಕಣ ಮತ್ತು ಕಿರುಬಿಲ್ಲೆಗಳು ರಕ್ತದ ಮೂರು ಮುಖ್ಯ ಜೀವಕೋಶಗಳು. ರಕ್ತಸ್ರಾವವನ್ನು ನಿಯಂತ್ರಣದಲ್ಲಿಡುವಲ್ಲಿ ಕಿರುಬಿಲ್ಲೆಗಳ ಪಾತ್ರ ಮಹತ್ತರವಾದದ್ದು. ಇವುಗಳ ಸಂಖ್ಯೆ ಸಾಮಾನ್ಯ ಮಟ್ಟಕ್ಕಿಂತ ಕಡಿಮೆಯಾದಾಗ ವ್ಯಕ್ತಿಯ ಶರೀರದ ಯಾವುದೇ ಭಾಗದಲ್ಲಿ ರಕ್ತಸ್ರಾವವಾಗುವ ಸಂಭವವಿರುತ್ತದೆ. ಇದನ್ನು ತಪ್ಪಿಸಲು ರೋಗಿಗೆ ಕಿರುಬಿಲ್ಲೆಗಳ ವರ್ಗಾವಣೆ ಅತ್ಯವಶ್ಯಕ. ಸಾಮಾನ್ಯವಾಗಿ ರಕ್ತಕೇಂದ್ರಗಳಲ್ಲಿ ಯಾವುದೇ ದಾನಿಯಿಂದ ಸಂಗ್ರಹಿಸಿದ ರಕ್ತದಿಂದ ಕಿರುಬಿಲ್ಲೆಗಳನ್ನು (ರ‍್ಯಾಂಡಮ್ ಡೋನರ್ ಪ್ಲೇಟ್‌ಲೇಟ್) ಪ್ರತ್ಯೇಕಿಸಿ, ಶೇಖರಿಸಿಡಲಾಗುತ್ತದೆ. ಸಾಮಾನ್ಯವಾಗಿ ಐವತ್ತು ಮಿ. ಲೀ. ದ್ರಾವಣದಲ್ಲಿರುವ ಈ ಕೇಂದ್ರೀಕೃತ ಕಿರುಬಿಲ್ಲೆಗಳು, ಸ್ವೀಕರಿಸಿದ ರೋಗಿಯಲ್ಲಿ ಕೇವಲ ಐದರಿಂದ ಹತ್ತು ಸಾವಿರದಷ್ಟು ಮಾತ್ರ ಹೆಚ್ಚಳವನ್ನು ತರಬಲ್ಲವು. ಹಾಗಾಗಿಯೇ ರೋಗಿಯಲ್ಲಿ ಕಿರುಬಿಲ್ಲೆಗಳ ಸಂಖ್ಯೆ ತೀರ ಕಡಿಮೆಯಾದಾಗ ಈ ವರ್ಗಾವಣೆ ನಿರೀಕ್ಷಿತ ಫಲಿತಾಂಶವನ್ನು ನೀಡದೆ, ಹೆಚ್ಚಿನ ಸಂಖ್ಯೆಯಲ್ಲಿ (ನಾಲ್ಕಾರು ಚೀಲ) ಕಿರುಬಿಲ್ಲೆಗಳನ್ನು ವರ್ಗಾವಣೆ ಮಾಡಬೇಕಾಗಿ ಬರಬಹುದು. ಇಂತಹ ಸನ್ನಿವೇಶಗಳಲ್ಲಿ ಒಬ್ಬನೇ ದಾನಿಯಿಂದ ಸಂಗ್ರಹಿಸಿದ ಕಿರುಬಿಲ್ಲೆಗಳು ಅತ್ಯಂತ ಪರಿಣಾಮಕಾರಿ.

ಸಿದ್ಧಪಡಿಸುವುದು ಹೇಗೆ?


ಒಬ್ಬ ದಾನಿಯ ಕಿರುಬಿಲ್ಲೆಗಳನ್ನು ಸಿದ್ಧಪಡಿಸಲು 'ಪ್ಲೇಟ್‌ಲೇಟ್ ಅಫೆರಿಸಿಸ್' ಉಪಕರಣ ಎಂಬ ವಿಶೇಷ ವ್ಯವಸ್ಥೆ ಅತ್ಯವಶ್ಯಕ. ರಕ್ತಕೇಂದ್ರವು ಈ ಸೇವೆಯನ್ನು ಒದಗಿಸಲು ಔಷಧ ನಿಯಂತ್ರಣ ಮಂಡಳಿಯಿಂದ ಹೆಚ್ಚುವರಿ ಪರವಾನಗಿಯನ್ನು ಪಡೆದಿರಬೇಕು. ಈ ರೀತಿ ಕೇವಲ ಕಿರುಬಿಲ್ಲೆಗಳನ್ನು ದಾನ ಮಾಡುವ ದಾನಿಯನ್ನು ಎಂದಿನಂತೆ ರಕ್ತಪರೀಕ್ಷೆಗೆ ಒಳಪಡಿಸಿ, ಆತನ ರಕ್ತದ ಹಿಮೋಗ್ಲೋಬಿನ್ ಮತ್ತು ಮೂರೂ ರಕ್ತಕಣಗಳು ಸಾಮಾನ್ಯ ಮಟ್ಟದಲ್ಲಿವೆಯೇ ಎಂದು ಖಾತರಿ ಪಡಿಸಿಕೊಳ್ಳಬೇಕು. ಆತನನ್ನು ರಕ್ತ ಹಾಗೂ ರಕ್ತದ ಘಟಕಗಳ ಮೂಲಕ ಹರಡಬಲ್ಲ ಎಲ್ಲ ಸೋಂಕುಗಳ ತಪಾಸಣೆಗೆ ಒಳಪಡಿಸಬೇಕು. ಎಲ್ಲ ವರದಿಗಳು ಸಾಮಾನ್ಯವಾಗಿದ್ದಾಗ ಆತನನ್ನು ದಾನ ಪ್ರಕ್ರಿಯೆಗೆ ಒಳಪಡಿಸಬಹುದು. ವಿಶೇಷ ಪ್ರತ್ಯೇಕಿಸುವ ಉಪಕರಣದ ಮೂಲಕ ವ್ಯಕ್ತಿಯ ರಕ್ತವು ಹಾದು ಹೋದಾಗ, ಅದರಲ್ಲಿನ ಕಿರುಬಿಲ್ಲೆಗಳನ್ನು ಮಾತ್ರವೇ ಪ್ರತ್ಯೇಕಿಸಿ, ಉಳಿದ ಅಂದರೆ ಕೆಂಪು ಮತ್ತು ಬಿಳಿ ರಕ್ತಕಣಗಳು ಹಾಗೂ ದ್ರವಾಂಶವನ್ನು ಪುನಃ ವ್ಯಕ್ತಿಯ ರಕ್ತಪರಿಚಲನೆಗೇ ವರ್ಗಾಯಿಸುವ ವ್ಯವಸ್ಥೆ ಇರುತ್ತದೆ. ಈ ವಿಧಾನದಲ್ಲಿ ಸುಮಾರು 250ರಿಂದ 300 ಮಿ.ಲೀ. ಕಿರುಬಿಲ್ಲೆಗಳನ್ನು ಸಂಗ್ರಹಿಸಬಹುದು. ಈ ಸಂಪೂರ್ಣ ಪ್ರಕ್ರಿಯೆಗೆ ಒಂದರಿಂದ ಒಂದೂವರೆ ತಾಸು ಬೇಕಾಗಬಹುದು. ಈ ರೀತಿಯ ಕಿರುಬಿಲ್ಲೆಗಳನ್ನು ರೋಗಿಗೆ ಅಗತ್ಯವಿದ್ದಾಗ ಮಾತ್ರವೇ ಸಿದ್ಧಪಡಿಸಲಾಗುತ್ತದೆ. ಏಕೆಂದರೆ ಇದರ ತಯಾರಿ ತುಸು ಸಂಕೀರ್ಣ ಹಾಗೂ ದುಬಾರಿ. ಅಲ್ಲದೆ, ಕಿರುಬಿಲ್ಲೆಗಳ ಜೀವಿತಾವಧಿ ಕೇವಲ ಐದು ದಿನಗಳಾದ್ದರಿಂದ ಇದನ್ನು ಸಿದ್ಧಪಡಿಸಿ ರಕ್ತಕೇಂದ್ರಗಳಲ್ಲಿ ಸಂಗ್ರಹಿಸಿ ಇಡುವ ಸಂಭವ ತೀರ ವಿರಳ.

ಕಿರುಬಿಲ್ಲೆಗಳು ಕಡಿಮೆಯಾಗುವುದು ಏಕೆ?

- ಡೆಂಗಿ ಜ್ವರ, ಇಲಿ ಜ್ವರ ಮೊದಲಾದ ಸೋಂಕು
- ಅಸ್ಥಿಮಜ್ಜೆಯ ಸೋಂಕು / ವೈಫಲ್ಯ
- ಕೆಲವು ಬಗೆಯ ರಕ್ತದ ಕ್ಯಾನ್ಸರ್
- ಕ್ಯಾನ್ಸರ್‌ಗಾಗಿ ಕಿಮೋಥೆರಪಿ ಅಥವಾ ವಿಕಿರಣ ಚಿಕಿತ್ಸೆ ಪಡೆಯುವಾಗ
- ಮಹಿಳೆಯರಲ್ಲಿ ಪ್ರಸವದ ನಂತರ ಒಮ್ಮೊಮ್ಮೆ ಸಂಭವಿಸುವ ಅಸಹಜ ರಕ್ತಸ್ರಾವದಲ್ಲಿ
- ರೋಗ ನಿರೋಧಕ ವ್ಯವಸ್ಥೆಯ ದೋಷ (ಇಮ್ಯೂನ್ ಥ್ರಾಂಬೋಸೈಟೋಪಿನಿಕ್ ಪರ್ಪ್ಯೂರ)
- ಕೆಲವು ಔಷಧಗಳ ಅಡ್ಡ ಪರಿಣಾಮ
- ವಿವಿಧ ಕಾರಣಗಳಿಗಾಗಿ ಗುಲ್ಮ (ಸ್ಪೀನ್) ಗಾತ್ರದಲ್ಲಿ ದೊಡ್ಡದಾದಾಗ
- ಅತಿಯಾದ ಮದ್ಯಪಾನ

ಹೆಚ್ಚುವರಿ ಪ್ರಯೋಜನಗಳೇನು?

- ಒಬ್ಬ ದಾನಿಯಿಂದ ಸಂಗ್ರಹಿಸಿದ ಕಿರುಬಿಲ್ಲೆಗಳು ಸಾಂಪ್ರದಾಯಿಕ ಕಿರುಬಿಲ್ಲೆಗಳಿಗಿಂತ ಐದರಿಂದ ಆರು ಪಟ್ಟು ಹೆಚ್ಚು ಪರಿಣಾಮಕಾರಿ. ಸ್ವೀಕರಿಸಿದ ವ್ಯಕ್ತಿಯಲ್ಲಿ ಒಮ್ಮೆಗೇ ಮೂವತ್ತರಿಂದ ಅರವತ್ತು ಸಾವಿರ ಕಿರುಬಿಲ್ಲೆಗಳನ್ನು ಹೆಚ್ಚಿಸುವುದರಿಂದ ಒಂದೇ ಒಂದು ವರ್ಗಾವಣೆಯೂ ಪರಿಣಾಮಕಾರಿಯಾಗಬಲ್ಲದು.
- ರೋಗಿಗೆ ಅತಿ ಹೆಚ್ಚಿನ ಸಂಖ್ಯೆಯ ಕಿರುಬಿಲ್ಲೆಗಳ ಅವಶ್ಯಕತೆ ಇದ್ದಾಗ ಈ ವಿಧಾನದಲ್ಲಿ ಸಿದ್ಧಪಡಿಸಿದ ಕಿರುಬಿಲ್ಲೆಗಳು ನಿರೀಕ್ಷಿಸಿದ ಫಲಿತಾಂಶವನ್ನು ತಕ್ಷಣವೇ ನೀಡಬಲ್ಲವು.
- ಈ ವಿಧಾನದಲ್ಲಿ ಸೂಕ್ಷ್ಮಾಣುಗಳ ವರ್ಗಾವಣೆಯ ಸಾಧ್ಯತೆ ಆದಷ್ಟು ಕಡಿಮೆ. ಸಾಮಾನ್ಯವಾಗಿ ಕಿರುಬಿಲ್ಲೆಗಳನ್ನು ಕೊಠಡಿಯ ಉಷ್ಣತೆ(22ರಿಂದ 24 ಡಿಗ್ರಿ)ಯಲ್ಲಿ ಸಂಗ್ರಹಿಸುವುದರಿಂದ ಚೀಲದಲ್ಲಿ ಸೂಕ್ಷ್ಮಾಣುಗಳು ಬೆಳೆಯಬಹುದು. ಆದರೆ ಒಬ್ಬ ದಾನಿಯ ಕಿರುಬಿಲ್ಲೆಗಳನ್ನು ಸಾಮಾನ್ಯವಾಗಿ ಸಿದ್ಧಪಡಿಸಿದ ತಕ್ಷಣವೇ ವರ್ಗಾಯಿಸುವುದರಿಂದ ಸೂಕ್ಷ್ಮಾಣುಗಳು ಬೆಳೆಯುವ ಸಾಧ್ಯತೆ ತೀರ ಕಡಿಮೆ.
- ಈ ವಿಧಾನದಲ್ಲಿ ಕಿರುಬಿಲ್ಲೆಗಳೊಂದಿಗೆ ಬಿಳಿ ಹಾಗೂ ಕೆಂಪು ರಕ್ತಕಣಗಳು ಮಿಶ್ರವಾಗುವ ಸಾಧ್ಯತೆ ಕಡಿಮೆ. ಹಾಗಾಗಿ ವರ್ಗಾವಣೆಯ ಸಮಯದಲ್ಲಿ ಕಂಡು ಬರುವ ಅಲರ್ಜಿ, ಜ್ವರದಂತಹ ಪ್ರತಿಕ್ರಿಯೆಗಳ ಸಂಭವ ಕೂಡ ಇಳಿಮುಖವಾಗುತ್ತವೆ.
- ರೋಗಿಗೆ ಪುನಃ ಪುನಃ ಬೇರೆ ಬೇರೆ ದಾನಿಗಳಿಂದ ಸಂಗ್ರಹಿಸಿದ ಕಿರುಬಿಲ್ಲೆಗಳ ವರ್ಗಾವಣೆಯನ್ನು ತಪ್ಪಿಸಬಹುದು. ಇದು ಇತರೆ ಪ್ರತಿಕಾಯಗಳಿಂದ ಉಂಟಾಗಬಹುದಾದ ಪ್ರತಿಕ್ರಿಯೆಗಳ ಸಂಭವವನ್ನು ಕಡಿಮೆ ಮಾಡುತ್ತದೆ.
- ರೋಗಿಯಲ್ಲಿ ಕಿರುಬಿಲ್ಲೆಗಳ ಕೊರತೆಯಿಂದ ಉಂಟಾಗುವ ರಕ್ತಸ್ರಾವವನ್ನು ಒಬ್ಬ ದಾನಿಯ ಕಿರುಬಿಲ್ಲೆಗಳು ತಕ್ಷಣವೇ ನಿಯಂತ್ರಿಸಬಲ್ಲವು.
- ಸಾಂಪ್ರದಾಯಿಕ ರಕ್ತದಾನ ಪ್ರಕ್ರಿಯೆಯಲ್ಲಿ ದಾನಿ ಮುಂದಿನ ಮೂರು ತಿಂಗಳವರೆಗೆ ರಕ್ತದಾನ ಮಾಡುವಂತಿರುವುದಿಲ್ಲ. ಆದರೆ ಈ ವಿಧಾನದಲ್ಲಿ ಕಿರುಬಿಲ್ಲೆಗಳನ್ನು ದಾನ ಮಾಡಿದ ವ್ಯಕ್ತಿ ಮುಂದಿನ ಮೂರರಿಂದ ನಾಲ್ಕು ದಿನಗಳಲ್ಲಿಯೇ ಪುನಃ ದಾನ ಪ್ರಕ್ರಿಯೆಗೆ ಅಣಿಯಾಗಬಹುದು.



ಹೃದಯಕ್ಕಾಗಿ 'ಹೃದಯ'ದ ಮಾತುಗಳು

ಡಾ. ವಿಜಯಲಕ್ಷ್ಮಿ ಪಿ.

'ಡಾಕ್ಟ್ರೇ ನಾನು ಪಥ್ಯದಲ್ಲೇ ಇದ್ದೀನಿ. ಆದ್ರೂ ನನಗೆ ಕೊಲೆಸ್ಟ್ರಾಲ್ ಜಾಸ್ತಿ ಅಂತ ರಿಪೋರ್ಟ್ ಬಂದಿದೆ. ಏನು ಮಾಡೋದು?'

'ನಾನು ಉಪ್ಪು ಕಡಿಮೇನೇ ತಿನ್ನೋದು, ಆದ್ರೂ ನನಗೆ ಬಿ.ಪಿ. ಜಾಸ್ತಿ ಇದೆಯಲ್ಲಾ?'

'ನಾನು ಮದ್ಯಪಾನ ಮಾಡಲ್ಲ, ಸಿಗರೇಟು ಸೇದಲ್ಲಾ ಆದ್ರೂ ನನಗೆ ಹೃದಯದೌರ್ಬಲ್ಯ ಇದೇಂತ ಹೇಳ್ತಾರೆ; ಸರಿ ಮಾಡ್ಕೋಳ್ಳೋದು ಹೇಗೆ?'

'ನನ್ನ ತಂದೆಗೆ ಹೃದಯಸಂಬಂಧಿ ತೊಂದರೆ, ಬಿ.ಪಿ. ಇತ್ತು; ನನಗೆ ಬರದೇ ಇರೋ ಹಾಗೆ ತಡೆಗಟ್ಟಬಹುದೇ?'

ಹೀಗೆ ಅನೇಕ ಪ್ರಶ್ನೆಗಳನ್ನು ವೈದ್ಯರು ಎದುರಿಸುತ್ತಿರುತ್ತಾರೆ.


ಅತಿಯಾದ ಪಥ್ಯ ಎಂದು ಕೇವಲ ಹಸಿ ತರಕಾರಿ–ಹಣ್ಣುಗಳನ್ನು ಮಾತ್ರ ಸೇವಿಸಿ, ಇತರೆ ಆಹಾರವನ್ನು ಸೇವಿಸದೇ ಇರುವುದೂ, ಅಗತ್ಯವಾದ ಪೌಷ್ಟಿಕಾಂಶಗಳ ಕೊರತೆಯಿಂದ ಹೃದಯದ ಸಾಮರ್ಥ್ಯ ಕಡಿಮೆಯಾಗಬಹುದು. ಕೊಲೆಸ್ಟರಾಲ್ ಹೆಚ್ಚಾಗಬಾರದೆಂದು ಜಿಡ್ಡನ್ನು ಸಂಪೂರ್ಣವಾಗಿ ವರ್ಜ್ಯಮಾಡುವುದೂ, ಅತಿಯಾದ ಉಪವಾಸ, ಕೇವಲ ದ್ರವಾಹಾರವನ್ನು ಮಾತ್ರ ಸೇವಿಸುವುದು – ಇವೆಲ್ಲವೂ ರಕ್ತನಾಳಗಳು ಒಣಗಿ ಸಂಕೋಚವಾಗಿ, ಹೃದಯ ದುರ್ಬಲವಾಗಬಹುದು. ಅತಿಯಾಗಿ ಮಾಂಸಾಹಾರ, ಬಿಸ್ಕತ್ತು, ಚಾಕಲೇಟು, ಐಸ್ಕ್ರೀಂ, ತಂಪುಪಾನೀಯಗಳು, ಕರಿದ ಪದಾರ್ಥಗಳನ್ನು ಸೇವಿಸುವುದು ಸಹ ಹೃದಯದ ರಕ್ತನಾಳಗಳಲ್ಲಿ ಜೀರ್ಣವಾಗದ ಕೊಬ್ಬಿನ ಅಂಶ ಶೇಖರಣೆಯಾಗಿ ಹೃದ್ರೋಗಕ್ಕೆ ಕಾರಣವಾಗಬಹುದು. ಅತಿಯಾದ ವ್ಯಾಯಮ, ಅತಿಯಾದ ನಿದ್ರೆ, ಅನಿಯಮಿತ ಆಹಾರಸೇವನೆ, ರಾತ್ರಿ ನಿದ್ರೆ ಕೆಡುವುದು – ಇವೆಲ್ಲವೂ ಹೃದಯದ ಆರೋಗ್ಯವನ್ನು ಏರುಪೇರು ಮಾಡುತ್ತವೆ. ಅತಿಯಾದ ಚಿಂತೆ, ನಿರಂತರ ಶೋಕ, ಅತಿಯಾದ ಸಿಟ್ಟು, ಅತಿ ಆಸೆ, ಆಲಸ್ಯ, ವ್ಯಾಯಮರಾಹಿತ್ಯವೂ ಹೃದಯದ ಕಾರ್ಯ ವೈಖರಿಯನ್ನು ವ್ಯತ್ಯಾಸ ಮಾಡುತ್ತದೆ. ಹೀಗೆ ಹೃದ್ರೋಗಕ್ಕೆ ಕಾರಣಗಳು ಅನೇಕ. ಒಟ್ಟಾರೆ ಹೇಳುವುದಾದರೆ ಶಿಸ್ತುಬದ್ಧ ದಿನಚರ್ಯೆ, ಆಹಾರ, ವಿಚಾರಗಳ ಕೊರತೆಯೇ ಹೃದ್ರೋಗಕ್ಕೆ ಕಾರಣ.

ಹೃದಯ ಎನ್ನುವುದು ನಮ್ಮ ದೇಹದ ಅತಿ ಸಂಕೀರ್ಣವಾದ ಅಂಗ. ಹೃದಯವು ರಕ್ತಸಂಗ್ರಹಣ, ಶೋಧನ, ವಿತರಣಕಾರ್ಯ ಮಾಡುವ ಮೂಲಕ ದೇಹಧಾರಣೆ ಮಾಡುತ್ತದೆ. ಈ ಮೂರರಲ್ಲಿ ಯಾವುದೇ ಕಾರ್ಯ ಸರಿಯಾಗಿ ನಡೆಯದಿದ್ದರೂ ದೇಹಧಾರಣಕಾರ್ಯವು ವ್ಯತ್ಯಾಸವಾಗಿ ಅನೇಕ ವ್ಯಾಧಿಗಳಿಗೆ ಕಾರಣವಾಗುತ್ತದೆ. ಹೃದಯವು ರಕ್ತವನ್ನು ದೇಹದ ಇತರ ಭಾಗಗಳಿಂದ ಮಾತ್ರವಲ್ಲದೆ, ಯಕೃತ್ತಿನಲ್ಲಿ ಉತ್ಪನ್ನವಾಗುವ ರಕ್ತವನ್ನೂ ಸ್ವೀಕರಿಸಿ ವಿತರಿಸುವ ಕಾರ್ಯವನ್ನೂ ನಿರ್ವಹಿಸುತ್ತದೆ. ಶುದ್ಧರಕ್ತವನ್ನು ಸಂಗ್ರಹಿಸಿ, ವಿತರಿಸಿ, ದೇಹ, ಮನಸ್ಸು ಮತ್ತು ಇಂದ್ರಿಯಗಳನ್ನು ಸುಸ್ಥಿತಿಯಲ್ಲಿಟ್ಟು, ಅವು ತಮ್ಮ ಕಾರ್ಯವನ್ನು ಸಮರ್ಥವಾಗಿ ನಡೆಸಲು ಸಹಾಯ ಮಾಡುತ್ತದೆ. ಹಾಗೆಯೇ ದೇಹದ ಇತರ ಅಂಗಾಂಗಗಳಿಂದ ಅಶುದ್ಧ ರಕ್ತವನ್ನೂ ಸ್ವೀಕರಿಸಿ ಪುಪ್ಪುಸಕ್ಕೆ ಕಳುಹಿಸಿ ಶುದ್ಧವಾದ ರಕ್ತವನ್ನು ಪುನಃ ಸ್ವೀಕರಿಸಿ ಇತರ ಅಂಗಾಂಗಗಳಿಗೆ ವಿತರಿಸುತ್ತದೆ.

ರಕ್ತವು ಸರಿಯಾಗಿ ತಯಾರಾಗದಿದ್ದರೂ, ಸಂಗ್ರಹಣಾದಿ ಕಾರ್ಯಗಳಲ್ಲಿ ವ್ಯತ್ಯಾಸವಾದರೂ, ಹೃದಯಕ್ಕೆ ಪೂರೈಕೆಯಾಗುವ ರಕ್ತದ ಗುಣ, ಪ್ರಮಾಣಾದಿಗಳಲ್ಲಿ ವ್ಯತ್ಯಾಸವಾದರೂ, ರಕ್ತನಾಳಗಳ ರಚನೆಗಳಲ್ಲಾಗುವ ಏರುಪೇರೂ ಹೃದಯದ ತೊಂದರೆಗೆ ಕಾರಣವಾಗಬಹುದು. ರಕ್ತದ ತಯಾರಿಕೆಯಲ್ಲಾಗುವ ಏರುಪೇರುಗಳಿಗೆ ಮುಖ್ಯ ಕಾರಣ ನಮ್ಮ ಆಹಾರದಲ್ಲಾಗುವ ಬದಲಾವಣೆಗಳು. ಅತಿ ತಂಪಿನ ವಾತಾವರಣದಲ್ಲಿರುವುದು, ಅತಿಯಾದ ಹಗಲು ನಿದ್ರೆ, ಚಿಂತಾ ಶೋಕಾದಿಗಳನ್ನು ವೈಭವೀಕರಿಸುವುದು, ಹಸಿವೆ, ಮಲಮೂತ್ರ ಪ್ರವೃತ್ತಿ, ಸೀನು, ಕೆಮ್ಮು, ಆಕಳಿಕೆ ಮುಂತಾದ ಸಹಜವಾದ ಪ್ರಕ್ರಿಯೆಗಳನ್ನು ತಡೆಯುವುದು. ಎಲ್ಲಕ್ಕಿಂತಲೂ ಮುಖ್ಯವಾಗಿ ಸ್ವಯಂ ವೈದ್ಯ, ಇದು ತಾತ್ಕಾಲಿಕ ಉಪಶಮನವಾದರೂ, ವ್ಯಾಧಿಯು ಉತ್ಪತ್ತಿಯಾಗುವವರೆಗೂ ಗೌಣವಾಗಿಯೇ ಉಳಿದು ಹೃದಯ ದೌರ್ಬಲ್ಯ, ಹೃದಯಾಘಾತ, ಹೃತ್ ಸ್ತಂಭನಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಪದೇ ಪದೇ ಆರೋಗ್ಯದಲ್ಲಿ ಏರುಪೇರಾಗುತ್ತಿದ್ದರೆ, ಅಮ್ಲಪಿತ್ತ, ಹೊಟ್ಟೆಯುಬ್ಬರ, ಮಲಬದ್ಧತೆ, ಹೊಟ್ಟೆ ಎದೆಬೆನ್ನಿನ ಭಾಗಗಳಲ್ಲಿ ಆಗಾಗ ನೋವು ಬರುವುದು, ನಿರಂತರ ಕೆಮ್ಮು, ದಮ್ಮು ಇವುಗಳು ಕಂಡುಬಂದರೆ, ಸ್ವಯಂ ವೈದ್ಯ ಮಾಡಿಕೊಳ್ಳದೆ, ಕೂಡಲೇ ವೈದ್ಯರನ್ನು ಕಂಡು ಸೂಕ್ತವಾದ ಚಿಕಿತ್ಸೆ ತೆಗೆದುಕೊಳ್ಳುವುದರಿಂದ ಹೃದ್ರೋಗ ಬಾರದಂತೆ ತಡೆಗಟ್ಟಬಹುದು

ಅಕಾಲದಲ್ಲಿ ಅತಿಯಾಗಿ ನಿದ್ರೆ ಬರುತ್ತಿದ್ದರೆ, ನಿದ್ರೆಯೇ ಬಾರದಿದ್ದರೆ, ವಿಪರೀತ ಕನಸು, ಅಥವಾ ಸ್ವಲ್ಪ ಶಬ್ದವಾದರೂ ಎಚ್ಚರಿಕೆಯಾಗಿ ಮತ್ತೆ ನಿದ್ರೆ ಬರುವುದಿಲ್ಲ ಎಂದಾದರೆ, ವಿನಾಕಾರಣ ವಿಪರೀತ ಆಕಳಿಕೆ ಬರುವುದು, ಬಿಕ್ಕಳಿಕೆ ಬರುವುದು, ಯಾವುದೇ ಇಂದ್ರಿಯಗಳ ವಿಷಯಗ್ರಹಣವು ನಿರೋಗಿಯಾದವನಲ್ಲಿ ಎಚ್ಚರಿಕೆ ಇರುವಾಗಲೂ ಕುಂಠಿತವಾಗುವುದು, ಕೆಲಸ ಮಾಡದಿರುವಾಗಲೂ ಸುಸ್ತಾಗುವುದು, ನಿದ್ರೆಯಿಂದ ಎದ್ದ ನಂತರವೂ ಮೈಭಾರವಿದ್ದು, ಉತ್ಸಾಹ ಇಲ್ಲದಿರುವುದು, ಕೆಲಸಮಾಡುವ ಆಸಕ್ತಿ ಕಡಿಮೆಯಾಗುವುದು, ಆಲಸ್ಯ, ವಿನಾಕಾರಣ ಅಮ್ಲಪಿತ್ತ, ಅಜೀರ್ಣ ಇಲ್ಲದಿರುವಾಗಲೂ ಬಾಯಲ್ಲಿ ನೀರೂರುವುದು, ನಾಲಿಗೆಯಲ್ಲಿ ಸದಾ ಸಿಹಿ ಅಂಟಿಕೊಂಡಿರುವ ಅನುಭವವಾಗಿ, ಬೇರೆ ಯಾವ ರುಚಿಯೂ ಗೊತ್ತಾಗದಿರುವುದು, ವಿನಾ ಕಾರಣ ಚರ್ಮವು ಜಿಡ್ಡಾಗಿರುವ ಅನುಭವವಾಗುವುದು – ಇವೆಲ್ಲವೂ ಹೃದಯದ ರಚನೆ ಮತ್ತು ಕಾರ್ಯಗಳಲ್ಲಿ ಏರುಪೇರಾಗುತ್ತಿರುವ ಲಕ್ಷಣಗಳು, ಹೃದ್ರೋಗದ ಮುನ್ಸೂಚನೆ. ಆಗ ಸೂಕ್ತವೈದ್ಯರನ್ನು ಸಂಪರ್ಕಿಸಿ ಅವರ ಸಲಹೆಯಂತೆ ನಡೆಯುವುದು ಒಳ್ಳೆಯದು.

ಮೇಲೆ ಹೇಳಿದ ಲಕ್ಷಣಗಳು ಕಂಡುಬಂದಲ್ಲಿ ದಿನಚರಿ ಮತ್ತು ಆಹಾರ ಸೇವನಾಕ್ರಮವನ್ನು ಕೂಡಲೇ ಸರಿಪಡಿಸಿಕೊಳ್ಳಬೇಕು. ಹಿತವಾಗಿ, ಮಿತವಾಗಿ, ಅತಿಯಾಗದಂತೆ ದೇಹಬಲಕ್ಕನುಗುಣವಾಗಿ ನಿಯಮಿತವಾಗಿ ವ್ಯಾಯಾಮ ಮಾಡುವುದು, ನಿತ್ಯ ಎಣ್ಣೆ ಹಚ್ಚಿ ಹದವಾದ ಬಿಸಿನೀರಿನಲ್ಲಿ ಸ್ನಾನ ಮಾಡುವುದು, ನೆತ್ತಿಗೆ ನಿತ್ಯವೂ ಎಣ್ಣೆ ಹಚ್ಚುವುದು, ಮೈಗೆ ಮುಲ್ತಾನಿಮಣ್ಣು, ಕಡಲೆಹಿಟ್ಟು, ಕಮಲದ ಚೂರ್ಣ, ಮತ್ತು ಸೀಗೇಕಾಯನ್ನು ಬೆರೆಸಿ ಮೈಗೆ ತಿಕ್ಕಿ ಸ್ನಾನ ಮಾಡುವುದು, ಅರಿಷಡ್ವರ್ಗಗಳನ್ನು ಅತಿ ಪ್ರವೃತ್ತವಾಗದಂತೆ ತಡೆಯುವುದು, ಮನಸ್ಸಿಗೆ ಹಿತವಾಗುವ ವಾತಾವರಣದಲ್ಲಿರುವುದು, ಹಿತವಾಗುವವರೊಡನೆ ಸಂಭಾಷಣೆ ನಡೆಸಿ ಮನಸ್ಸಿನ ದುಗುಡವನ್ನು ಹೋಗಲಾಡಿಸಿಕೊಳ್ಳುವುದು, ಅಕ್ಕಿ, ಗೋಧಿ ಅಥವಾ ಇತರೆ ಹಿಟ್ಟುಗಳಿಂದ ತಯಾರಿಸಿದ ಆಹಾರ ಪದಾರ್ಥಗಳು, ಕಬ್ಬಿನ ಹಾಲು, ಬೆಲ್ಲ, ಸ್ವಲ್ಪ ತುಪ್ಪ, ಮನಸ್ಸಿಗೆ ಹಿತವಾಗುವ, ರುಚಿಯಾದ ಆರೋಗ್ಯಕರವಾದ ಆಹಾರಸೇವನೆ, ಒಣ ಅಥವಾ ಹಸಿ ದ್ರಾಕ್ಷಿ ಮತ್ತು ಅದರಿಂದ ತಯಾರಿಸಿದ ಪಾನಕ, ಲೇಹ್ಯ, ಸಾರು – ಹೀಗೆ ಅನೇಕ ವಿಧದಲ್ಲಿ ದ್ರಾಕ್ಷಿಯ ಉಪಯೋಗ, ರಾತ್ರಿ ಮಲಗುವ ಮೊದಲು ದ್ರಾಕ್ಷಾರಸದ ಸೇವನೆ, ಮಲಗುವಾಗ ಸುಮಧುರ ಸಂಗೀತ ಆಲಿಸುವುದು, ನಿತ್ಯ ಧ್ಯಾನಮಾಡುವುದು – ಇವು ಹೃದ್ರೋಗವನ್ನು ತಡೆಗಟ್ಟಬಹುದಾದ ಸುಲಭೋಪಾಯಗಳು.







ಸ್ವಚ್ಛವಾಗಿರಲಿ ಮನೆ ಮನ

ಲಾವಣ್ಯಗೌರಿ ವೆಂಕಟೇಶ್

ಮನೆಯಾಗಲೀ ಮನಸ್ಸಾಗಲೀ ನಿರ್ಮಲವಾಗಿದ್ದಲ್ಲಿ ಶಾಂತಿ ನೆಮ್ಮದಿ ನೆಲೆಸಲು ಸಾಧ್ಯ. ತಿಳಿಯಾದ ನೀರಿನಲ್ಲಿ ಹೇಗೆ ಪ್ರತಿಬಿಂಬ ಕಾಣುವುದೋ ಅದೇ ರೀತಿ ತಿಳಿಯಾದ ಮನವಿದ್ದಲ್ಲಿ ಏನನ್ನು ಬೇಕಾದರೂ ಸಾಧಿಸಲು ಸಾಧ್ಯ; ಯಾವುದೇ ಸಮಸ್ಯೆಗಾದರೂ ಪರಿಹಾರ ಲಭ್ಯ. ಮನಸ್ಸು ತಿಳಿಯಾಗಲು ನಾವಿರುವ ಜಾಗ ತಿಳಿಯಾಗಿರಬೇಕು. ಅಂದರೆ ಸ್ವಚ್ಛವಾಗಿರಬೇಕು. ವೈಜ್ಞಾನಿಕವಾಗಿಯೂ ಸ್ವಚ್ಛತೆಯಿದ್ದಲ್ಲಿ ರೋಗರಹಿತ ವಾತಾವರಣವಿರುತ್ತದೆ. ಶುಚಿತ್ವದ ತವರೇ ಸಕಾರಾತ್ಮಕತೆ!

ಕಛೇರಿಯಲ್ಲಾಗಲೀ, ಮನೆಯಲ್ಲಾಗಲೀ ಸದಾಕಾಲ ಜಗಳ, ಮನಸ್ಸಿಗೆ ಕಿರಿಕಿರಿ ಎಂದು ಹಲವರು ಹೇಳುವುದನ್ನು ನಾವು ಕೇಳಿದ್ದೇವೆ. ಅದಕ್ಕೆ ಕಾರಣ ಚೊಕ್ಕತನವಿಲ್ಲದ ನಮ್ಮ ಪರಿಸರ. ಇಂತಹ ಪರಿಸ್ಥಿತಿಯಲ್ಲಿ ಒಮ್ಮೆ ಸುತ್ತಲೂ ಕಣ್ಣಾಡಿಸಿ ನೋಡಿ. ಜೋಡಿಸದೇ ಬಿದ್ದಿರುವ ಪತ್ರಿಕೆಗಳು, ಪುಸ್ತಕಗಳು, ಮಡಿಸದೇ ಗುಡ್ಡೆ ಮಾಡಿರುವ ಬಟ್ಟೆಗಳು, ಉಪಯೋಗಕ್ಕೆ ಬಾರದ ಹಲವು ಪದಾರ್ಥಗಳು ಕಣ್ಣಿಗೆ ಕಾಣುತ್ತವೆ. ಓರಣವಿಲ್ಲದ ವಸ್ತುಗಳಿಂದುಂಟಾದ ನಕಾರಾತ್ಮಕ ಶಕ್ತಿಯ ಪ್ರಭಾವ ನಮ್ಮ ಮನಸ್ಸನ್ನು ಅಶಾಂತಿಯ ಗೂಡಾಗಿ ಮಾಡಿಬಿಡುತ್ತದೆ. ಕ್ರಮವಾಗಿ, ವ್ಯವಸ್ಥಿತವಾಗಿ ಇರುವ ಪರಿಸರವು ಮನಸ್ಸಿಗೆ ಮುದವನ್ನು ನೀಡುತ್ತದೆ. ಇದಕ್ಕೆ ಅದ್ಭುತವಾದ ಉದಾಹರಣೆ ಪ್ರಕೃತಿ. ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಯಾವುದೇ ಕಲ್ಮಷಗಳೂ ಇರುವುದಿಲ್ಲ. ನೈಸರ್ಗಿಕವಾಗಿ ಇರುವ ಗಾಳಿ, ಬೆಟ್ಟ, ಗುಡ್ಡ, ನದಿ, ಗಿಡ, ಮರ, ಕಾಡು, ಸಮುದ್ರ ಎಲ್ಲವೂ ಶುಚಿಯಾಗಿರುವುದು ಸೃಷ್ಟಿಯ ಸಹಜಗುಣ. ಅಂತೆಯೇ ಪ್ರಕೃತಿಯಲ್ಲಿ ಸದಾಕಾಲ ಸಕಾರಾತ್ಮಕ ಶಕ್ತಿ ಪ್ರವಹಿಸುತ್ತಿರುತ್ತದೆ. ಆದ್ದರಿಂದಲೇ ನಿಸರ್ಗದ ಮಡಿಲಲ್ಲಿದ್ದಾಗ ಪ್ರತಿಯೊಬ್ಬರೂ ಸಂತೋಷವಾಗೇ ಇರುತ್ತೇವೆ!





ಅಚ್ಚುಕಟ್ಟುತನಕ್ಕೆ ಬಡವ-ಬಲ್ಲಿದರೆಂಬ ಬೇಧವಿಲ್ಲ. ಮನೆ ಚಿಕ್ಕದಿರುವುದರಿಂದ ಸಾಮಾನುಗಳನ್ನು ವ್ಯವಸ್ಥಿತವಾಗಿ ಜೋಡಿಸಲು ಜಾಗವಿಲ್ಲ ಎಂದು ಹಲವರು ಹೇಳುವುದುಂಟು. ಹಾಗೆಯೇ ದೊಡ್ಡ ಮನೆ ಇರುವವರು, ಮನೆ ದೊಡ್ಡದಿರುವುದರಿಂದ ಸ್ವಚ್ಛಗೊಳಿಸಲು ಕಷ್ಟ ಎಂದು ಗೊಣಗುವುದು ಸಾಮಾನ್ಯ. ಮನೆ ಚಿಕ್ಕದಿರಲಿ, ದೊಡ್ಡದಿರಲಿ, ಒಪ್ಪ ಓರಣಕ್ಕೇಕೆ ಕೊರತೆ? ಬಟ್ಟೆ-ಬರೆಗಳನ್ನು ಎಲ್ಲಂದರಲ್ಲಿ ಹಾಕುವ ಬದಲು ಇರುವ ಜಾಗದಲ್ಲೇ ಮಡಿಸಿ ಇಡಿ. ಪುಸ್ತಕಗಳನ್ನಾಗಲೀ ಪತ್ರಿಕೆಗಳನ್ನಾಗಲೀ, ಒಂದರ ಮೇಲೆ ಒಂದನ್ನು ಚೊಕ್ಕವಾಗಿ ಜೋಡಿಸಿ ಇಡಿ.

ಒಮ್ಮೆಲೇ ಎಲ್ಲವನ್ನೂ ಸ್ವಚ್ಛಗೊಳಿಸಲು ಸಾಧ್ಯವಿಲ್ಲ. ಶುಚಿಯಾಗಿಡುವುದು ಯೋಜನೆಯಲ್ಲ, ಅದೊಂದು ಅಭ್ಯಾಸ. ದಿನವೂ ಸ್ವಲ್ಪ ಸ್ವಲ್ಪವೇ ಅಭ್ಯಾಸ ಮಾಡಿಕೊಂಡಲ್ಲಿ ಯಾವುದೂ ಅಸಾಧ್ಯವಲ್ಲ.

ದಿನಕ್ಕೊಂದು ಕಪಾಟನ್ನು ಶುಚಿಗೊಳಿಸುವ ಕಾರ್ಯವನ್ನು ಇಂದಿನಿಂದಲೇ ಪ್ರಾರಂಭಿಸಿ. ಒಂದೊಂದು ಕಪಾಟಿನಲ್ಲೂ ಬೇಡದ, ಉಪಯೋಗಿಸದ ಎಷ್ಟು ವಸ್ತುಗಳಿವೆಯೆಂದು ತಿಳಿದು ನೀವೇ ಅಚ್ಚರಿಗೊಳ್ಳುತ್ತೀರಿ! ಪ್ರತಿ ಬಾರಿಯೂ ಬೇಡದ ವಸ್ತುಗಳು ಮನೆಯಿಂದ ಹೊರ ಹೋದಾಗಲೂ, ನೀವು ಒಂದೊಂದೇ ಋಣಾತ್ಮಕ ಅಂಶಗಳನ್ನು ನಿಮ್ಮ ಜೀವನದಿಂದ ಕಳೆಯುತ್ತಿದ್ದೀರೆಂದು ಅರ್ಥ! ಅಂತೆಯೇ ನಕಾರಾತ್ಮಕ ಶಕ್ತಿ ಕ್ಷೀಣಿಸುತ್ತಿರುವಂತೆಯೇ ಧನಾತ್ಮಕ ಶಕ್ತಿಯ ಪ್ರಭಾವಳಿ ಮನೆಯನ್ನು, ಮನವನ್ನು ತುಂಬಿಕೊಳ್ಳುತ್ತದೆ.

ಒಂದೇ ವೇದಿಕೆಯಡಿ ಎಲ್ಲ ಇಲಾಖೆಗಳಿಗೆ ‘ಗ್ರೇಟರ್ ಬೆಂಗಳೂರು’!

ಬಿಬಿಎಂಪಿ ಪುನರ್ ರಚನೆಗೆ ತಜ್ಞರ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತಾತ್ಮಕ ದೃಷ್ಟಿಯಿಂದ ಬಿಬಿಎಂಪಿ ಪುನರ್ ರಚಿಸಲು ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲ್ ನೇತೃತ್ವದಲ್ಲಿ ಸರ್ಕಾರ ‘ತಜ್ಞರ ಸಮಿತಿ’ ರಚಿಸಿದೆ.

2014ರಲ್ಲಿ ಬಿಬಿಎಂಪಿ ವಿಭಜಿಸಲು ವರದಿ ನೀಡಲು ರಚಿಸಲಾಗಿದ್ದ ‘ತಜ್ಞರ ಸಮಿತಿ’ಯನ್ನೇ ಸರ್ಕಾರ ಪುನರ್-ರಚಿಸಿದೆ. ಬಿ.ಎಸ್. ಪಾಟೀಲ್ ಅಧ್ಯಕ್ಷ-ರಾಗಿರುವ ಸಮಿತಿಯಲ್ಲಿ, ಬಿಬಿಎಂಪಿ-ಬಿಡಿಎ ಆಯುಕ್ತರಾಗಿದ್ದ ಸಿದ್ದಯ್ಯ ಮತ್ತು ಹಿಂದಿನ ಬೆಂಗಳೂರು ಅಜೆಂಡಾ ಕಾರ್ಯಪಡೆಯ ಸದಸ್ಯ ರವಿಚಂದರ್ ಅವರು ಸದಸ್ಯರಾಗಿದ್ದಾರೆ.

ಗ್ರೇಟರ್ ಬೆಂಗಳೂರು ಸ್ಥಾಪನೆಗೆ ಈ ತಜ್ಞರ ಸಮಿತಿ ಹೊಸ ರೂಪುರೇಷೆ ನೀಡಲಿದ್ದು, ಬಿಬಿಎಂಪಿ, ನಗರಾಭಿವೃದ್ಧಿ ಇಲಾಖೆ, ಬಿಡಿಎ, ಬಿಡಬ್ಲ್ಯುಎಸ್ಎಸ್‌ಬಿ, ನಗರ ಭೂಸಾರಿಗೆ ನಿರ್ದೇಶನಾಲಯ (ಡಲ್ಟ್), ಬೆಂಗಳೂರು ಮೆಟ್ರೊಪಾಲಿಟನ್ ಭೂಸಾರಿಗೆ ಪ್ರಾಧಿಕಾರ (ಬಿಎಂಎಲ್‌ಟಿಎ), ನಗರ ಪೊಲೀಸ್, ಅಗ್ನಿಶಾಮಕ ಸೇವೆಗಳು, ಕೊಳೆಗೇರಿ ಮಂಡಳಿ, ಬಿಎಂಟಿಸಿ, ಬೆಸ್ಕಾಂ, ಬಿಎಂಆರ್‌ಸಿಎಲ್ ಮತ್ತು ಉಪ-ನಗರ ರೈಲು ಮಂಡಳಿಗಳು ಸಮನ್ವಯದೊಂದಿಗೆ ಒಂದೇ ವೇದಿಕೆಯಡಿ ಕಾರ್ಯನಿರ್ವಹಿಸುವ ಬಗ್ಗೆ ವರದಿ ನೀಡಲಿದೆ.

ಸರ್ಕಾರದ ಅನುಮೋದನೆ ಪಡೆದ ಕಾಮಗಾರಿಗಳನ್ನು ಅನು-ಷ್ಠಾನಗೊಳಿಸುವುದು, ಬೆಂಗಳೂರು ನಿವಾಸಿಗಳ ಜೀವನ ಗುಣಮಟ್ಟವನ್ನು ವೃದ್ಧಿಸುವ ನಿಟ್ಟಿನಲ್ಲಿ ಕಡ್ಡಾಯವಾಗಿ ಕೈಗೊಳ್ಳಬೇಕಾದ ಕ್ರಮಗಳು; ‘ಬ್ರ್ಯಾಂಡ್ ಬೆಂಗಳೂರು’ ಅನ್ನು ಸದೃಢಗೊಳಿಸುವ ಕ್ರಿಯಾಯೋಜನೆಗಳು; ವಾರ್ಡ್ ಮಟ್ಟದಲ್ಲಿ ಅನುಷ್ಠಾನಗೊಳ್ಳುವ ಕಾಮ-ಗಾರಿಗಳಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆ, ಉನ್ನತ ಮಟ್ಟದಲ್ಲಿ ಕೇಂದ್ರೀಕೃತ ಅನುಷ್ಠಾನಗಳು ಸೇರಿದಂತೆ ನಾಗರಿಕ ಕೇಂದ್ರೀಕೃತ ಆಡಳಿತವನ್ನು ಉತ್ತಮ-ಗೊಳಿಸುವ ಕ್ರಮಗಳು ಸೇರಿದಂತೆ ಐದು ಅಂಶಗಳ ಬಗ್ಗೆ ವರದಿ ಸಲ್ಲಿಸುವಂತೆ ‘ತಜ್ಞರ ಸಮಿತಿಗೆ’ ಸೂಚಿಸಲಾಗಿದೆ. ಬಿಬಿಎಂಪಿಯ ಆಡಳಿತ ವಿಭಾಗದ ವಿಶೇಷ ಆಯುಕ್ತರು ಸಮಿತಿಗೆ ಎಲ್ಲ ಮಾಹಿತಿ ಒದಗಿಸಲು ಹಾಗೂ ಸಭೆಗಳ ಸಮನ್ವಯ ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ.

ಬಿಬಿಎಂಪಿಯನ್ನು ಎರಡು ಅಥವಾ ಮೂರು ಭಾಗವಾಗಿ ವಿಭಜಿಸುವ ಸಂಬಂಧ ಯಾವುದೇ ರೀತಿಯ ಸ್ಪಷ್ಟ ಸೂಚನೆ ಅಥವಾ ಮಾಹಿತಿ ಆದೇಶದಲ್ಲಿ ಇಲ್ಲ. ಆದರೆ, 2014ರಲ್ಲಿ ಬಿಬಿಎಂಪಿಯನ್ನು ವಿಭಜಿಸಲು ಸೂಕ್ತವೆಂದು ಪರಿಗಣಿಸಿ ರಚಿಸಿದ್ದ ಸಮಿತಿಯ ಆದೇಶವನ್ನೇ ಪ್ರಸ್ತಾಪಿಸಲಾಗಿದೆ. ಅದಕ್ಕೆ ಮುಂದುವರಿದಂತೆ, ಸಮಿತಿಯನ್ನು ಪುನರ್-ರಚಿಸಿ ಐದು ಅಂಶಗಳ ಬಗ್ಗೆ ವರದಿ ನೀಡಲು ಸೂಚಿಸಲಾಗಿದೆ. ಆ ಅಂಶಗಳಲ್ಲಿ ವಿಭಜನೆ ಬಗ್ಗೆ ಪ್ರಸ್ತಾಪವಿಲ್ಲ.

ಸದೃಢ ಆಡಳಿತ

‘ಗ್ರೇಟರ್ ಬೆಂಗಳೂರು ಪ್ರಾಧಿ-ಕಾರ’ವನ್ನು ರಚಿಸಿ ಅದರಡಿ ಬೆಂಗಳೂರು ನಗರದ ಸಮಗ್ರ ಆಡಳಿತವನ್ನು ಒಂದೇ ವೇದಿಕೆಯಲ್ಲಿ ತರುವುದು ಈ ಆದೇಶ ಉದ್ದೇಶವಾಗಿದೆ. ಇದರೊಂದಿಗೆ ಆಡಳಿತಾತ್ಮಕ ದೃಷ್ಟಿಯಿಂದ ಎಷ್ಟು ಭಾಗಗಳನ್ನಾಗಿಸಬೇಕು, ಮೂರು ಪಾಲಿಕೆಯನ್ನು ರಚಿಸಬೇಕೇ ಅಥವಾ ಹೆಚ್ಚು ವಲಯಗಳನ್ನು ಸೃಷ್ಟಿ ವಾರ್ಡ್ ಮಟ್ಟದ ಆಡಳಿತವನ್ನು ಸದೃಢ-ಗೊಳಸಬೇಕೇ? ಎಂಬ ಬಗ್ಗೆ ಸಮಿತಿ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ ಎಂದು ಹೇಳಲಾಗಿದೆ.

50ಕ್ಕೂ ಹೆಚ್ಚು ಹೊಸ ಇಂದಿರಾ ಕ್ಯಾಂಟೀನ್

ಆಹಾರ ಕ್ರಮದಲ್ಲಿ ಬದಲಾವಣೆ; ಜನನಿಬಿಡ ಪ್ರದೇಶದಲ್ಲಿ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಜನನಿಬಿಡ ಪ್ರದೇಶಗಳಲ್ಲಿ ಹೊಸದಾಗಿ 50ಕ್ಕೂ ಹೆಚ್ಚು ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಬೇಕು. ಈಗಿರುವ ಕ್ಯಾಂಟೀನ್ ಗಳು ಯಾವುದೇ ಸಮಸ್ಯೆ ಇಲ್ಲದೆ ಕಾರ್ಯ ಗತವಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಇಂದಿರಾ ಕ್ಯಾಂಟೀನ್‌ಗಳ ಮರು ಕಾರ್ಯಾಚರಣೆ ಹಾಗೂ ಅಲ್ಲಿ ಯಾವ ರೀತಿ ಆಹಾರ ನೀಡಬೇಕು ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಅವರು ಸೋಮವಾರ ಸಭೆ ನಡೆಸಿದರು.

ಬೆಂಗಳೂರಿನಲ್ಲಿ ಕನಿಷ್ಠ 250 ಇಂದಿರಾ ಕ್ಯಾಂಟೀನ್‌ಗಳು ಕಾರ್ಯನಿ-ರ್ವಹಿಸಬೇಕು. ಈ ಹಿಂದೆ ಬಿಬಿಎಂಪಿ ವ್ಯಾಪ್ತಿಯ ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ಸರ್ಕಾರದಿಂದ ಶೇ 30ರಷ್ಟು ವೆಚ್ಚ ಭರಿಸಲಾಗುತ್ತಿತ್ತು. ಇನ್ನು ಮುಂದೆ ಶೇ 50ರಷ್ಟು ವೆಚ್ಚವನ್ನು ಸರ್ಕಾರ ಭರಿಸಲಿದೆ. ಕೂಡಲೇ ಎಲ್ಲವೂ ಕಾರ್ಯನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಂದಿರಾ ಕ್ಯಾಂಟೀನ್‌ನಲ್ಲಿ ದೊರೆಯುವ ಆಹಾರದ ಕ್ರಮವನ್ನು ಬದಲಾಯಿಸುತ್ತಿದ್ದು, ಗುಣಮಟ್ಟ, ಪ್ರಮಾಣ ಹಾಗೂ ಶುಚಿತ್ವ ಕಾಪಾಡಲು ಸೂಚಿಸಲಾಗಿದೆ. ದರ ಪರಿಷ್ಕರಣೆ ಮಾಡುವುದಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಕಾಲೇಜು, ಆಸ್ಪತ್ರೆ, ಬಸ್ ನಿಲ್ದಾಣ, ರೈಲು ನಿಲ್ದಾಣ, ತಾಲ್ಲೂಕು ಕಚೇರಿ ಸೇರಿದಂತೆ ಹೆಚ್ಚು ಜನ ಸೇರುವ ಸ್ಥಳಗಳಲ್ಲಿ ಹೊಸ ಇಂದಿರಾ ಕ್ಯಾಂಟೀನ್ ಸ್ಥಾಪಿಸುವ ಕುರಿತು ಪ್ರಸ್ತಾವ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ ಎಂದರು.

ಅಧಿಕಾರಿಗಳಿಗೆ ಸೂಚನೆ:

- ಇಂದಿರಾ ಕ್ಯಾಂಟೀನ್‌ಗಳಿಗೆ ಭೇಟಿ ನೀಡಿ, ಸುಸ್ಥಿತಿ ಮತ್ತು ಕಾರ್ಯನಿರ್ವಹಣೆ ಕುರಿತು ವರದಿ ಸಲ್ಲಿಸಬೇಕು. ದುರಸ್ತಿ ಅಗತ್ಯ ಇರುವಲ್ಲಿ ಕೂಡಲೇ ಕ್ರಮ ಕೈಗೊಂಡು, ಸುಸ್ಥಿತಿಯಲ್ಲಿರಬೇಕು.
- ಆಹಾರದ ಗುಣಮಟ್ಟ ಕಾಯ್ದು-ಕೊಳ್ಳಬೇಕು. ನಿಗದಿ ಪಡಿಸಿದ ಮೆನುವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸ್ವಚ್ಛತೆ, ಗುಣಮಟ್ಟ ಹಾಗೂ ಪ್ರಮಾಣದಲ್ಲಿ ಯಾವುದೇ ರಾಜಿ ಮಾಡಕೊಳ್ಳಬಾರದು.
- ಸಚಿವರು, ಶಾಸಕರನ್ನು ಉಪಾಹಾರಕ್ಕೆ ಆಹ್ವಾನಿಸಬೇಕು. ಅವರು ಆಗಾಗ್ಗೆ ಆಹಾರ ಸೇವಿಸಿದರೆ ಗುಣಮಟ್ಟ ಕಾಪಾಡಿಕೊಳ್ಳಲು ಅನುಕೂಲ.

7 ದಿನದಲ್ಲಿ ಟೆಂಡರ್

ಬಿಬಿಎಂಪಿ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ವಲಯವಾರು ಟೆಂಡರ್‌ಗಳನ್ನು ಏಳು ದಿನಗಳಲ್ಲಿ ಕರೆಯಲಾಗುತ್ತದೆ. ಎಲ್ಲವೂ ನಿಯಮಾನುಸಾರ ಶೀಘ್ರ ಕಾರ್ಯಾರಂಭ ಮಾಡಲಿವೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕಚಂದ್ರ ತಿಳಿಸಿದರು.

177ಕ್ಕೂ ಹೆಚ್ಚು ಇಂದಿರಾ ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿವೆ. ಜೊತೆಗೆ ಮೊಬೈಲ್ ಕ್ಯಾಂಟೀನ್‌ಗಳಿವೆ. ಈ ಮೊದಲು ವಾರ್ಡ್‌ಗೆ ಒಂದರಂತೆ ಆರಂಭಿಸಲಾಗಿತ್ತು. ಹಲವು ಕಾರ್ಯ ನಿರ್ವಹಿಸುತ್ತಿರಲಿಲ್ಲ. ಈಗ ಎಲ್ಲವನ್ನೂ ದುರಸ್ತಿಗೊಳಿಸಿ, ಕಾರ್ಯಾರಂಭ ಮಾಡುತ್ತೇವೆ’ ಎಂದರು.

₹100 ಕೋಟಿ ವೆಚ್ಚ

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಇದೀಗ ಕಾರ್ಯನಿರ್ವಹಿಸುತ್ತಿರುವ ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ₹70 ಕೋಟಿಯಿಂದ ₹80 ಕೋಟಿ ವೆಚ್ಚ-ವಾಗುತ್ತಿದೆ. ಇನ್ನೂ 50 ಕ್ಯಾಂಟೀನ್‌ಗಳು ಹೆಚ್ಚಾಗುವುದರಿಂದ ಸುಮಾರು 250 ಕ್ಯಾಂಟೀನ್‌ಗಳ ನಿರ್ವಹಣೆಗೆ ಸುಮಾರು ₹100 ಕೋಟಿ ವೆಚ್ಚವಾಗ-ಬಹುದು’ ಎಂದು ತ್ರಿಲೋಕಚಂದ್ರ ತಿಳಿಸಿದರು.

‘ಹೊಸದಾಗಿ 50 ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ಮಿಸಲು ಸುಮಾರು ₹20 ಕೋಟಿ ವೆಚ್ಚವಾಗಲಿದೆ. ಇದರನ್ನು ಸರ್ಕಾರ ಭರಿಸಲಿದೆ. ಹೊಸ ಕ್ಯಾಂಟೀನ್‌ಗಳ ನಿರ್ಮಾಣಕ್ಕೂ ಟೆಂಡರ್ ಕರೆಯಲಾಗುತ್ತದೆ ಎಂದರು.

₹7 ಸಾವಿರ ಕೋಟಿ ಅನುದಾನಕ್ಕೆ ಬಿಬಿಎಂಪಿ ಮನವಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯ ಸರ್ಕಾರದ ಬಜೆಟ್ ಜುಲೈ 7ರಂದು ಮಂಡನೆಯಾಗ-ಲಿದ್ದು, ₹7 ಸಾವಿರ ಕೋಟಿ ಅನುದಾನ ನೀಡಬೇಕು ಎಂದು ಬಿಬಿಎಂಪಿ ಮನವಿ ಸಲ್ಲಿಸಲು ನಿರ್ಧರಿಸಿದೆ.

ಅಮೃತ ನಗರೋತ್ಥಾನ, ವೈಟ್‌ಟಾಪಿಂಗ್ ಸೇರಿದಂತೆ ಹಲವು ಯೋಜನೆಗಳಲ್ಲಿ ಕ್ರಿಯಾಯೋಜನೆಯಾ-ಗಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಅವುಗಳು ಬಿಲ್ ಸದ್ಯದಲ್ಲಿಯೇ ಬರಲಿವೆ. ಅವುಗಳನ್ನು ಪಾವತಿಸಲು ಬಜೆಟ್‌ನಲ್ಲಿ ₹7 ಸಾವಿರ ಕೋಟಿ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುತ್ತದೆ ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಈಗಾಗಲೇ ಪೂರ್ಣಗೊಂಡಿರುವ ಹಾಗೂ ಶೀಘ್ರ ಮುಗಿಯುತ್ತಿರುವ ಕಾಮಗಾರಿಗಳಿಗೆ ಬಿಲ್ ಪಾವತಿಸಬೇಕಾಗಿದೆ. ಹಿಂದಿನ ಸರ್ಕಾರದ ಘೋಷಿಸಿದ್ದ ಅನುದಾನದಲ್ಲಿ ಈ ಕಾಮಗಾರಿಗಳನ್ನು ಮುಗಿಸಲಾಗಿದೆ. ಹೀಗಾಗಿ ಆ ಮೊತ್ತವನ್ನು ಬಿಡುಗಡೆ ಮಾಡಬೇಕೆಂದೂ ಮನವಿ ಮಾಡಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಹೊಸ ಯೋಜನೆಗಳು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿಜೆಪಿ ಸರ್ಕಾರ ಕೆಲ ಯೋಜನೆಗಳನ್ನು ಬಜೆಟ್‌ನಲ್ಲಿ ಘೋಷಿಸಿತ್ತು. ಆದರೆ, ಹೈ ಡೆನ್ಸಿಟಿ ಸೇರಿದಂತೆ ಕೆಲವು ಅನಗತ್ಯ ಯೋಜನೆಗಳಿವೆ. ಅವುಗಳ ಬದಲಿಗೆ ಹೊಸ ಯೋಜನೆಗಳನ್ನು ಸೇರಿಸಬಹುದು’ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಗರದಾದ್ಯಂತ ಪರಿಶೀಲನೆ ನಡೆಸುತ್ತಿದ್ದು, ಅವರು ಕೆಲವು ಯೋಜನೆಗಳನ್ನು ರೂಪಿ-ಸುತ್ತಿದ್ದಾರೆ. ಅಲ್ಲದೆ, ಚುನಾವಣೆ ಸಂದರ್ಭದಲ್ಲಿ ಕನಕಪುರ ರಸ್ತೆ, ಜೆ.ಸಿ. ರಸ್ತೆ ಸೇರಿದಂತೆ ಕೆಲವು ಮೇಲ್ಸೇತುವೆ ನಿರ್ಮಿಸುವುದಾಗಿ ಭರವಸೆ ನೀಡಿದ್ದರು. ಅವುಗಳೂ ಬಜೆಟ್‌ನಲ್ಲಿ ಸೇರಿಕೊಳ್ಳುವ ಸಾಧ್ಯತೆ ಇದೆ’ ಎನ್ನಲಾಗಿದೆ.

ಮಾಯಣ್ಣ ಮತ್ತೆ ಅಮಾನತು

ಬೆಂಗಳೂರು: ಬಿಬಿಎಂಪಿ ಪಶುಪಾಲನೆ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕ ಮಾಯಣ್ಣ ಅವರನ್ನು ಮತ್ತೆ ಅಮಾನತು ಮಾಡಲಾಗಿದೆ.

ಈ ಹಿಂದೆ ಅಮಾನತು ಮಾಡಿದ್ದನ್ನು ತೆರವುಗೊಳಿಸಿ ಕೆಲಸಕ್ಕೆ ನಿಯೋಜಿಸಿದ್ದರೂ ಕಚೇರಿಗೆ ಹಾಜ-ರಾಗದ್ದರಿಂದ ಬಿಬಿಎಂಪಿ ಮುಖ್ಯ ಆಯುಕ್ತರ ಸೂಚನೆ ಮೇರೆಗೆ ಆಡಳಿತದ ಉಪ ಆಯುಕ್ತರು ಸೋಮವಾರ ಅಮಾನತಿನ ಆದೇಶ ಹೊರಡಿಸಿದ್ದಾರೆ.

ಮಾಯಣ್ಣ ಅವರನ್ನು ಭ್ರಷ್ಟಾಚಾರ ನಿಗ್ರಹದಳ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮಾನತುಗೊಳಿಸಲಾಗಿತ್ತು. ನಂತರ ಅಮಾನತು ತೆರವುಗೊಳಿಸಿ, 2022 ಜುಲೈ 19ರಂದು ಪಶುಪಾಲನೆ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ನಿಯೋಜಿಸಲಾಗಿತ್ತು. ಅಂದಿನಿಂದ ಕರ್ತವ್ಯಕ್ಕೆ ಹಾಜರಾಗಿಲ್ಲ. ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ನಗರದ ಕಬ್ಬನ್ ಉದ್ಯಾನದಲ್ಲಿರುವ ಬಾಲಭವನಕ್ಕೆ ಭೇಟಿ ನೀಡಿ ಪುಟಾಣಿ ರೈಲು ವೀಕ್ಷಿಸಿದರು. ಬಾಲಭವನದ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಅಧಿಕಾರಿಗಳಿಗೆ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ವಿದ್ಯಾರ್ಥಿ ಪಾಸ್: ಅರ್ಜಿ ಸಲ್ಲಿಸಲು ಸೂಚನೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ವಿದ್ಯಾರ್ಥಿ ಬಸ್ ಪಾಸ್ ಪಡೆಯಲು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕು ಎಂದು ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿ ತಿಳಿಸಿದೆ.

https://sevasindhu services.karnataka.gov.in ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಆನ್‌ಲೈನ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಯಾವುದೇ ಶುಲ್ಕ ಇರುವುದಿಲ್ಲ. ಕರ್ನಾಟಕ-ಒನ್, ಗ್ರಾಮ-ಒನ್, ಬೆಂಗಳೂರು-ಒನ್‌ಗಳಲ್ಲಿಯೂ ಅರ್ಜಿ ಸಲ್ಲಿಸಬಹುದು. ಆದರೆ, ಈ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ₹30 ಸೇವಾ ಶುಲ್ಕ ಪಾವತಿಸಬೇಕು.

ರಾಜ್ಯದ ವಿದ್ಯಾರ್ಥಿನಿಯರಿಗೆ ಶಕ್ತಿ ಯೋಜನೆಯಡಿ ಉಚಿತವಾಗಿ ಪ್ರಯಾಣಿಸುವ ಸೌಲಭ್ಯ ಒದಗಿಸಲಾಗಿದೆ. ನೆರೆ ರಾಜ್ಯದಲ್ಲಿ ವಾಸವಿದ್ದು, ಕರ್ನಾ-ಟಕದಲ್ಲಿ ವಿದ್ಯಾಭ್ಯಾಸ ಮಾಡುವ ಗಡಿಭಾಗದ ವಿದ್ಯಾರ್ಥಿನಿಯರು ಪಾಸ್ ಪಡೆದುಕೊಳ್ಳಬೇಕು. ವಿತರಣಾ ಕೌಂಟರ್, ಇತರ ಮಾಹಿತಿಗಳನ್ನು-https://ksrtc.karnataka.gov.in/student pass ಇಲ್ಲಿ ನೋಡಬಹುದು.

ಜೀವಗಳ ಜತೆ ಆಟವಾಡಿದರೆ ಹುಷಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಪ್ಪಳ ಜಿಲ್ಲೆಯಲ್ಲಿ ಕಲುಷಿತ ನೀರಿನ ಪೂರೈಕೆಯಿಂದ ಆದ ಅನಾಹುತ ಮರುಕಳಿಸಿದರೆ ನೇರವಾಗಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾ-ರಿಗಳನ್ನೇ ಹೊಣೆ ಮಾಡಿ ಅಮಾ-ನತುಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ಕುಡಿಯುವ ನೀರಿನ ಸಮಸ್ಯೆ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ವಿಡಿಯೊ ಸಂವಾದ ನಡೆಸಿದ ವೇಳೆ ಈ ಎಚ್ಚರಿಕೆ ನೀಡಿದರು.

‘ಮೊದಲ ಅನಾಹುತ ಸಂಭವಿಸಿದಾಗಲೇ ಏಕೆ ಎಚ್ಚೆತ್ತುಕೊಳ್ಳಲಿಲ್ಲ? ಮತ್ತೆ ಘಟನೆ ಮರುಕಳಿಸಿದೆ. ನೀವು ಏನ್ ಮಾಡ್ತಾ ಇದೀರಿ? ಕಚೇರಿಯಲ್ಲಿ ಕುಳಿತು ಕೆಲಸ ಮಾಡಬಾರದು. ಜೀವಗಳ ಜತೆ ಆಟ ಆಡಬೇಡಿ. ಸ್ಥಳಕ್ಕೆ ಭೇಟಿ ನೀಡಿ ಸಮಗ್ರವಾಗಿ ಅಧ್ಯಯನ ನಡೆಸಿ. ಪುನಃ ಕಲುಷಿತ ನೀರಿನ ಅನಾಹುತ ಆಗಬಾರದು. ಮತ್ತೆ ಮರುಕಳಿಸಿದರೆ ನೀವೇ ಹೊಣೆ ಆಗುತ್ತೀರಿ. ಕ್ರಮ ಎದುರಿಸಬೇಕಾಗುತ್ತದೆ’ ಎಂದು ಚಾಟಿ ಬೀಸಿದರು.

ತನಿಖೆಗೆ ಆದೇಶ: ಕೊಪ್ಪಳ ಜಿಲ್ಲೆ ಸೇರಿ ಎಲ್ಲೆಲ್ಲಿ ಕಲುಷಿತ ನೀರು ಕುಡಿದು ಜನರ ಆರೋಗ್ಯ ಮತ್ತು ಜೀವಕ್ಕೆ ಸಮಸ್ಯೆ ಆಗಿದೆಯೊ ಆ ಬಗ್ಗೆ ತನಿಖೆ ನಡೆಸಬೇಕು ಎಂದು ಸಿದ್ದರಾಮಯ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರಿಗೆ ಸೂಚಿಸಿದರು.

‘ಈಗಾಗಲೇ ಸ್ಥಳೀಯವಾಗಿ ತನಿಖೆ ನಡೆಯುತ್ತಿದೆ. ಬೆಂಗಳೂರು ಕೇಂದ್ರದಿಂದಲೂ ತಂಡವನ್ನು ಕಳುಹಿಸಿ ತನಿಖೆ ನಡೆಸಲಾಗುವುದು. ಎರಡೂ ವರದಿಗಳು ಬಂದ ಬಳಿಕ ತಪ್ಪಿತಸ್ಥರನ್ನು ಹೊಣೆ ಮಾಡಿ ಕ್ರಮ ಕೈಗೊಳ್ಳಲಾಗುವುದು’ ಎಂದು ವಂದಿತಾ ಶರ್ಮ ಸಭೆಯಲ್ಲಿ ತಿಳಿಸಿದರು.

ಹೆಬ್ಬಾಳ್ಕರ್ ಇಲಾಖೆಯಲ್ಲಿ ತಮ್ಮನ ಹಸ್ತಕ್ಷೇಪ?

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಇಲಾಖೆಯ ಕೆಲಸಗಳಲ್ಲಿ ಅವರ ತಮ್ಮ, ವಿಧಾನಪರಿಷತ್ ಸದಸ್ಯ ಚನ್ನರಾಜ್ ಹಟ್ಟಿಹೊಳಿ ಮೂಗು ತೂರಿಸುತ್ತಿರುವ ಆರೋಪ ಕೇಳಿಬಂದಿದೆ.

ಕಾಂಗ್ರೆಸ್ ಘೋಷಿಸಿದ ಐದು ‘ಗ್ಯಾರಂಟಿ’ಗಳಲ್ಲಿ ಒಂದಾದ ‘ಗೃಹ ಲಕ್ಷ್ಮಿ’ ಯೋಜನೆಯ ಅನುಷ್ಠಾನದ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸೌಧದಲ್ಲಿ ಅಧಿಕಾರಿಗಳ ಸಭೆ ಸೋಮವಾರ ನಡೆಸಿದರು.

ಈ ಸಭೆಯಲ್ಲಿ ಲಕ್ಷ್ಮೀ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಎನ್. ಮಂಜುಳಾ, ಇ- ಆಡಳಿತ ಇಲಾಖೆಯ ಕಾರ್ಯದರ್ಶಿ ವಿ. ಪೊನ್ನುರಾಜ್ ಭಾಗವಹಿಸಿದ್ದರು. ಸಭೆಯಲ್ಲಿ ಚನ್ನರಾಜ್ ಹಟ್ಟಿಹೊಳಿ ಕೂಡಾ ಇದ್ದರು.

ಸಭೆಗೂ ತಮಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ, ಅಕ್ಕ ಸಚಿವೆ ಎಂಬ ಕಾರಣಕ್ಕೆ ಹಟ್ಟಿಹೊಳಿ ಕೂಡಾ ಉಪಸ್ಥಿತರಿದ್ದರು.

ಲಕ್ಷ್ಮೀ ಹೆಬ್ಬಾಳಕರ ಅವರ ನಡೆಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

‘ನಮ್ಮ ಪಕ್ಷ ಈಗಷ್ಟೇ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಬಿಜೆಪಿ ವಿರುದ್ಧ ಭ್ರಷ್ಟಾಚಾರದ ಆರೋಪದಲ್ಲಿ ಹೋರಾಟ ಮಾಡಿ ಅಧಿಕಾರಕ್ಕೆ ಬಂದಿದ್ದೇವೆ. ಹೀಗಿರುವಾಗ ಕುಟುಂಬ ಸದಸ್ಯರು ಅನಗತ್ಯವಾಗಿ ಇಲಾಖೆಯ ವಿಚಾರಗಳಲ್ಲಿ ಮೂಗುತೂರಿಸದಂತೆ ನೋಡಿಕೊಳ್ಳಬೇಕು’ ಎಂದು ಎಚ್ಚರಿಕೆ ನೀಡಿದ್ದಾರೆ ಎಂದೂ ಗೊತ್ತಾಗಿದೆ.

ಕಸಾಪ ದುರಾಡಳಿತ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಹೇಶ್ ಜೋಶಿ ದುರಾಡಳಿತ ನಡೆಸುತ್ತಿದ್ದಾರೆ. ಕಸಾಪ ಕಾಮಗಾರಿಗಳಲ್ಲಿ ಅಕ್ರಮ ನಡೆದಿರುವ ಅನುಮಾನವಿದ್ದು, ಹಣಕಾಸಿನ ಬಗ್ಗೆ ಶ್ವೇತಪತ್ರ ಹೊರಡಿಸಬೇಕು' ಎಂದು ಆಗ್ರಹಿಸಿ ಸಮಾನ ಮನಸ್ಕರ ವೇದಿಕೆ ಪದಾಧಿಕಾರಿಗಳು ಸೋಮವಾರ ಪ್ರತಿಭಟನೆ ನಡೆಸಿದರು.



ಸಮಾನ ಮನಸ್ಕರ ವೇದಿಕೆ ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, ಕಸಾಪ ಅಧ್ಯಕ್ಷರ ದುರಾಡಳಿತದ ವಿರುದ್ಧ ಘೋಷಣೆ ಕೂಗಿದರು.

'ಮಹೇಶ್ ಜೋಶಿ ಅವರು ಅಧ್ಯಕ್ಷರಾದ ಬಳಿಕ, ಕಸಾಪ ಅಧಿಕಾರಶಾಹಿ ಸಂಸ್ಥೆಯಾಗಿ ಮಾರ್ಪಟ್ಟಿದೆ. ಇದರಿಂದ ಕವಿಗಳು, ಸಾಹಿತಿಗಳು, ಲೇಖಕರು ಹಾಗೂ ಕನ್ನಡ ಅಭಿಮಾನಿಗಳಿಗೆ ನೋವು ತಂದಿದೆ. ನವೀಕರಣ ನೆಪದಲ್ಲಿ ಕಸಾಪ ಸಭಾಂಗಣದ ಬಾಡಿಗೆ ಹೆಚ್ಚಳ ಮಾಡಲಾಗಿದ್ದು, ಇದರಿಂದ ಕನ್ನಡ ಕಾರ್ಯಕ್ರಮ ಆಯೋಜಿಸಲು ಹೊರೆಯಾಗುತ್ತಿದೆ' ಎಂದು ಪ್ರತಿಭಟನಕಾರರು ದೂರಿದರು.

'ಕಸಾಪ ಕಟ್ಟಡದ ಮೂರನೇ ಮಹಡಿಯಲ್ಲಿರುವ ಕುವೆಂಪು ಸಭಾಂಗಣದ ಬಾಗಿಲು ಮುಚ್ಚಲಾಗಿದೆ. ಸಾಹಿತ್ಯ ಕಾರ್ಯಕ್ರಮಗಳಿಗೆ ಅವಕಾಶವಿಲ್ಲದಂತಾಗಿದೆ. ಕಸಾಪ ಸ್ಥಾಪಕರಾದ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಯನ್ನು ತೆಗೆದು ಹಾಕಲಾಗಿದೆ. ಹಲವು ದತ್ತಿ ಪ್ರಶಸ್ತಿಗಳನ್ನು ಸ್ಥಗಿತಗೊಳಿಸಲಾಗಿದೆ. ಕನ್ನಡ ನುಡಿ ಪತ್ರಿಕೆಪ್ರಕಟಣೆಯೂ ನಿಂತಿದೆ. ಇದೆಲ್ಲವೂ ಅಧ್ಯಕ್ಷರ ದುರಾಡಳಿತದ ಸಂಕೇತ' ಎಂದು ಪ್ರತಿಭಟನಕಾರರು ಕಿಡಿಕಾರಿದರು.

'ಕಸಾಪಸಭಾಂಗಣ,ಆಡಳಿತಕಚೇರಿ ಹಾಗೂ ಮುದ್ರಣಾಲಯ ಕಟ್ಟಡಗಳ ಕಾಮಗಾರಿ ನಡೆಯುತ್ತಿದೆ. ಈ ಕಾಮಗಾರಿಗಳ ಕುರಿತು ಪೂರ್ಣ ಹಣಕಾಸಿನ ಶ್ವೇತಪತ್ರ ಹೊರಡಿಸಬೇಕು. ಇಲ್ಲದಿದ್ದರೆ, ತೀವ್ರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದರು.

'ಚಾಮರಾಜಪೇಟೆಯಲ್ಲಿರುವ ಕಸಾಪ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲು ಉದ್ದೇಶಿಸಲಾಗಿತ್ತು. ಆದರೆ, ಅದಕ್ಕೆ ಅನುಮತಿ ಸಿಗದಂತೆ ಮಾಡಲಾಗಿದೆ. ಹೀಗಾಗಿ, ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ಲೇಖಕಿ ಬಿ.ಟಿ. ಲಲಿತಾ ನಾಯಕ್, ಕನ್ನಡಪರ ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ, ಲೇಖಕಿ ಡಾ. ವಸುಂಧರಾ ಭೂಪತಿ, ಪ್ರೊ. ಎಲ್.ಎನ್. ಮುಕುಂದರಾಜ್, ಕೋ.ನ. ನಾಗರಾಜ್, ಶಂಕರ್ ಹೂಗಾರ, ಸಿ.ಕೆ. ರಾಮೇಗೌಡ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗ್ಯಾಸ್ ಗೀಸರ್ ಸೋರಿಕೆ: ಭಾವಿ ದಂಪತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾನ ಮಾಡುತ್ತಿದ್ದ ವೇಳೆ ಗ್ಯಾಸ್ ಗೀಸರ್‌ನಿಂದ ಅನಿಲ ಸೋರಿಕೆಯಾಗಿ ಭಾವಿ ದಂಪತಿ ಮೃತಪಟ್ಟಿದ್ದು, ಈ ಸಂಬಂಧ ಚಿಕ್ಕಜಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸುಧಾರಾಣಿ



ಚಂದ್ರಶೇಖರ್

ಅಪರಾಧ ಸುದ್ದಿ

'ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಚಂದ್ರಶೇಖರ್ (30) ಹಾಗೂ ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಸುಧಾರಾಣಿ (22) ಮೃತರು. ಒಂದೇ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಪರಸ್ಪರ ಪ್ರೀತಿಸಿ, ಒಂದೇ ಮನೆಯಲ್ಲಿ ಸಹಜೀವನ ನಡೆಸುತ್ತಿದ್ದರು. ಇತ್ತೀಚೆಗಷ್ಟೇ ನಿಶ್ಚಿತಾರ್ಥ ಆಗಿತ್ತು' ಎಂದು ಪೊಲೀಸರು ಹೇಳಿದರು.

'ಜೂನ್ 10ರಂದು ಸಂಜೆ ಕೆಲಸ ಮುಗಿಸಿ ಮನೆಗೆ ಬಂದಿದ್ದ ಇಬ್ಬರು, ರಾತ್ರಿ ಒಟ್ಟಿಗೆ ಸ್ನಾನಕ್ಕೆ ಹೋಗಿದ್ದರು. ಸ್ನಾನ ಮಾಡುವಾಗ ಗ್ಯಾಸ್ ಗೀಸರ್‌ನಿಂದ ಅನಿಲ ಸೋರಿಕೆಯಾಗಿದೆ. ಆಮ್ಲಜನಕದ ಕೊರತೆಯಿಂದಾಗಿ ಇಬ್ಬರೂ ಉಸಿರುಗಟ್ಟಿ ಮೃತಪಟ್ಟಿದ್ದಾರೆ.'

'ಮನೆ ಮಾಲೀಕ ಹಾಗೂ ಸ್ನೇಹಿತರು ನೀಡಿರುವ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆಂದು ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕರೆ ಸ್ವೀಕರಿಸದಿದ್ದರಿಂದ ಅನುಮಾನ: 'ಚಂದ್ರಶೇಖರ್ ಹಾಗೂ ಸುಧಾರಾಣಿ, ಭಾನುವಾರವೂ ಹೋಟೆಲ್ ಕೆಲಸಕ್ಕೆ ಹೋಗಬೇಕಿತ್ತು. ಆದರೆ, ನಿಗದಿತ ಸಮಯಕ್ಕೆ ಹೋಟೆಲ್‌ಗೆ ಹೋಗಿರಲಿಲ್ಲ. ಅನುಮಾನಗೊಂಡಿದ್ದ ಸಹೋದ್ಯೋಗಿಗಳು, ಚಂದ್ರಶೇಖರ್-ಸುಧಾರಾಣಿ ಮೊಬೈಲ್‌ಗಳಿಗೆ ಕರೆ ಮಾಡಿದ್ದರು. ಆದರೆ, ಕರೆ ಸ್ವೀಕರಿಸಿರಲಿಲ್ಲ' ಎಂದು ಪೊಲೀಸರು ಹೇಳಿದರು.

'ಗಾಬರಿಗೊಂಡ ಸಹೋದ್ಯೋಗಿಗಳು, ಮನೆ ಬಳಿ ಹೋಗಿ ಬಾಗಿಲು ಬಡಿದಿದ್ದರು. ಅವರಿಬ್ಬರ ಮೊಬೈಲ್‌ಗಳು ಒಳಗಡೆ ರಿಂಗ್ ಆಗುತ್ತಿದ್ದವು. ಸಹೋದ್ಯೋಗಿಗಳು, ಮನೆ ಮಾಲೀಕರು ಹಾಗೂ ಠಾಣೆಗೆ ವಿಷಯ ತಿಳಿಸಿದ್ದರು. ಸಿಬ್ಬಂದಿ, ಬಾಗಿಲು ಒಡೆದು ಮನೆಯೊಳಗೆ ಪ್ರವೇಶಿಸಿದ್ದರು. ಸ್ನಾನದ ಕೊಠಡಿಯಲ್ಲಿ ಚಂದ್ರಶೇಖರ್, ಸುಧಾರಾಣಿ ಮೃತದೇಹಗಳು ಬೆತ್ತಲೆ ಸ್ಥಿತಿಯಲ್ಲಿ ಕಂಡು ಬಂದವು' ಎಂದು ಪೊಲೀಸರು ತಿಳಿಸಿದರು.

ಸ್ನಾನದ ಕೊಠಡಿಯಲ್ಲಿ ಸಿಲಿಂಡರ್: 'ಸ್ನಾನದ ಕೊಠಡಿಯಲ್ಲಿ ಅಡುಗೆ ಅನಿಲ ಸಿಲಿಂಡರ್ ಇರಿಸಲಾಗಿದೆ. ಗ್ಯಾಸ್ ಗೀಸರ್‌ನಿಂದ ಕಾರ್ಬನ್ ಮೊನಾಕ್ಸೈಡ್ ಸೋರಿಕೆಯಾಗಿದೆ. ಉಸಿರಾಟಕ್ಕೆ ತೊಂದರೆಯಾಗಿ ಭಾವಿ ದಂಪತಿ ಮೃತಪಟ್ಟಿರುವ ಸಾಧ್ಯತೆ ಇದೆ' ಎಂದು ಪೊಲೀಸರು ಹೇಳಿದರು.

ಕಾರು-ಲಾರಿ ಡಿಕ್ಕಿ- ಮೂವರ ಸಾವು

ಚಿತ್ರದುರ್ಗ: ತಾಲ್ಲೂಕಿನ ವಿಜಯಪುರ ಗ್ರಾಮದ ಸಮೀಪದ ರಾಷ್ಟ್ರೀಯ ಹೆದ್ದಾರಿ- 48ರಲ್ಲಿ ಕಾರು ಮತ್ತು ಲಾರಿ ನಡುವೆ ಸೋಮವಾರ ಸಂಭವಿಸಿದ ಅಪಘಾತದಲ್ಲಿ ಮೂರು ತಿಂಗಳ ಶಿಶು ಸೇರಿ ಮೂವರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಎಚ್‌ಎಸ್‌ಆರ್ ಬಡಾವಣೆ ನಿವಾಸಿಗಳಾದ ಜಾಕೀರ್ ಅಹಮ್ಮದ್ (60), ತಬಸ್ಸುಮ್ (28) ಹಾಗೂ ಮೂರು ತಿಂಗಳ ಮಗು ಹಯಾತ್ ಫಾತಿಮಾ ಮೃತಪಟ್ಟವರು. ನಯಾಜ್ (22), ಇಮ್ರಾನ್ ಖಾನ್ (32), ತಬ್ರೇಜ್ ಅಹಮ್ಮದ್ (27), ಸಬಾ (26) ಗಾಯಗೊಂಡಿದ್ದು, ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗೋವಾ ಪ್ರವಾಸ ಮುಗಿಸಿಕೊಂಡು ಬೆಂಗಳೂರಿಗೆ ಮರಳುತ್ತಿದ್ದಾಗ ಈ ಘಟನೆ ನಡೆದಿದೆ. ಭಾನುವಾರ ತಡರಾತ್ರಿ ಗೋವಾದಿಂದ ಕಾರಿನಲ್ಲಿ ಬೆಂಗಳೂರಿಗೆ ಹೊರಟಿದ್ದರು. ಸೋಮವಾರ ಬೆಳಿಗ್ಗೆ 7 ಗಂಟೆಯ ಸುಮಾರಿಗೆ ತಾಲ್ಲೂಕಿನ ವಿಜಯಪುರದ ಬಳಿ ಲಾರಿಗೆ ಕಾರು ಡಿಕ್ಕಿ ಹೊಡೆದಿದೆ.

ಹೆದ್ದಾರಿಯ ಮಧ್ಯದ ಪಥದಲ್ಲಿ ಸಂಚರಿಸುತ್ತಿದ್ದ ಲಾರಿಯ ಹಿಂಭಾಗದಲ್ಲಿ ಕಾರು ಸಾಗುತ್ತಿತ್ತು. ಮುನ್ಸೂಚನೆ ನೀಡದೆ ಲಾರಿಯು ಬಲಬದಿಗೆ ತಿರುಗಿದ್ದರಿಂದ, ಕಾರು ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ಪಲ್ಟಿಯಾಗಿದೆ ಎಂದು ಭರಮಸಾಗರ ಠಾಣೆಯ ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರತ್ಯೇಕ ಅಪಘಾತ: ಇಬ್ಬರು ಸಾವು

ಬೆಂಗಳೂರು: ನಗರದ ಚಿಕ್ಕಪೇಟೆ ಹಾಗೂ ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಜೇಸುದಾಸ್ (78) ಹಾಗೂ ಲೋಕೇಶ್ (36) ಮೃತಪಟ್ಟಿದ್ದಾರೆ.

'ಮೃತ ಜೇಸುದಾಸ್, ಭಾನುವಾರ ಬೆಳಿಗ್ಗೆ ರಸ್ತೆ ದಾಟುತ್ತಿದ್ದಾಗ ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡಿದ್ದ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದು ಚಿಕ್ಕಪೇಟೆ ಸಂಚಾರ ಪೊಲೀಸರು ಹೇಳಿದರು.

'ಅಪಘಾತದ ಬಳಿಕ, ಬೈಕ್ ಸಮೇತ ಸವಾರ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದರು.

ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ: 'ಲೋಕೇಶ್ ಅವರು ಜೂನ್ 9ರಂದು ರಾತ್ರಿ ಮಾಗಡಿ ಮುಖ್ಯರಸ್ತೆಯಲ್ಲಿ ಬೈಕ್‌ನಲ್ಲಿ ಹೊರಟಿದ್ದರು. ಕಾಮಾಕ್ಷಿಪಾಳ್ಯದ ಧನಂಜಯ ಪ್ಯಾಲೇಸ್ ಬಳಿ ನಿರ್ಲಕ್ಷ್ಯ ಹಾಗೂ ಅತೀವೇಗವಾಗಿ ಬೈಕ್ ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ್ದ ಬೈಕ್, ರಸ್ತೆ ವಿಭಜಕ್ಕೆ ಡಿಕ್ಕಿ ಹೊಡೆದು ಉರುಳಿಬಿದ್ದಿತ್ತು' ಎಂದು ಪೊಲೀಸರು ಹೇಳಿದರು.

'ಗಾಯಗೊಂಡಿದ್ದ ಲೋಕೇಶ್ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಇದೇ 13ರಿಂದ 17ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

13ಕ್ಕೆ: ಸರ್ಜಾಪುರ, ಸೆಸ್ನಾನ ಗಾರ್ಡನ್, ಸೆಂಟ್ರಲ್ ಮಾಲ್, ಶೋಭಾ ಅಪಾರ್ಟ್‌ಮೆಂಟ್ಸ್, ತಕ್ಷಶೀಲಾ ಹೆಲ್ತ್ ಕೇರ್ ಸುತ್ತಮುತ್ತ ಪ್ರದೇಶಗಳು.

14ಕ್ಕೆ: ಗೌತಮ್ ನಗರ, ಆರ್‌ಎಂಸಿ ಯಾರ್ಡ್, ಜೈಮಾರುತಿ ನಗರ, ನಂದಿನಿ ಬಡಾವಣೆ 4ನೇ ಬ್ಲಾಕ್ ಸುತ್ತಮುತ್ತ ಪ್ರದೇಶಗಳು

15ಕ್ಕೆ: ಡಿಎಲ್‌ಎಫ್ ಅಪಾರ್ಟ್‌ಮೆಂಟ್, ಬೇಗೂರು

17ಕ್ಕೆ: ಹೊಸೂರು ಮುಖ್ಯರಸ್ತೆ, ಬಂಡೆಪಾಳ್ಯ, ಸಿಂಗಸಂದ್ರ, ಜಿ.ಬಿ. ಪಾಳ್ಯ, ಕುಡ್ಲು ಗೇಟ್, ಎಇಸಿಎಸ್ ಲೇಔಟ್‌ನ ಎ ಮತ್ತು ಬಿ ಬ್ಲಾಕ್, ಹೊಂಗಸಂದ್ರ, ಓಂಶಕ್ತಿ ಲೇಔಟ್, ಬೊಮ್ಮನಹಳ್ಳಿ, ಚಿಕ್ಕಬೇಗೂರು ಗೇಟ್, ಬಿಟಿಆರ್ ಗಾರ್ಡನ್, ಕಾನ್‌ಕಾರ್ಡ್ ಲೇಔಟ್, ಮುನೇಶ್ವರ ಲೇಔಟ್, ಹೊಸಪಾಳ್ಯ, ಯಲ್ಲುಕುಂಟೆ, ಓರ್ಝೋನ್ ಟೆಕ್ ಪಾರ್ಕ್

ಜಿ.ಎಸ್. ಪಾಳ್ಯ ಮುಖ್ಯರಸ್ತೆ, ಬಸವನಗರ, ಕೃಷ್ಣರೆಡ್ಡಿ ಲೇಔಟ್, ಬಯೋಕಾನ್, ಕೆಐಎಬಿಡಿ ಲೇಔಟ್, ಟಾಟಾ ಕನ್ಸ್‌ಲಟೆನ್ಸಿ ಸರ್ವೀಸ್, ಆನಂದ ರೆಡ್ಡಿ ಲೇಔಟ್, ಪಿಕ್ಸಲ್ ಸಾಫ್ಟ್‌ವೇರ್, ಗ್ಲೋಬಲ್ ಟೆಕ್ ಪಾರ್ಕ್, ಸುತ್ತಮುತ್ತ ಪ್ರದೇಶಗಳು.

ಸಲಾರಪುರಿ, ತಿಮಕಿನ್, ಕೋನಾರ್, ಎಚ್.ಪಿ. ಕಾರ್ ಪಾರ್ಕಿಂಗ್, ಲಕ್ಷ್ಮಿ ಲೇಔಟ್, ಮೈಕೋ ಲೇಔಟ್, ವಾಜಪೇಯಿ ನಗರ, ಶ್ರೀರಾಮನಗರ, ವಿನಾಯಕ ಲೇಔಟ್, ಸೆಲೆಬ್ರೆಟಿ ಹೌಸಿಂಗ್ ಲೇಔಟ್, ಎನ್‌ಜಿಆರ್ ಲೇಔಟ್, ಗುಲಬರ್ಗಾ ಕಾಲೊನಿ, ಸಿಲ್ಕ್ ಬೋರ್ಡ್ ಜಂಕ್ಷನ್, ಆಕ್ಸ್‌ಫರ್ಡ್ ಡೆಂಟಲ್ ಕಾಲೇಜು, ಟೆಲಿಫೋನ್ ಎಕ್ಸ್‌ಚೇಂಜ್‌ನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ.

ಆಟೊ ಪ್ರಯಾಣಿಕನ ಹತ್ಯೆ

ಬೆಂಗಳೂರು: ಸುಬ್ರಹ್ಮಣ್ಯನಗರ ಠಾಣೆ ವ್ಯಾಪ್ತಿಯಲ್ಲಿ ಆಟೊ ಪ್ರಯಾಣಿಕ ಅಮೋದ್ ಕರರ್ದೊ ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ ಆರೋಪದಡಿ ಆಟೊ ಚಾಲಕ ಎಸ್.ಆರ್. ಅಶ್ವಥ್‌ನನ್ನು (27) ಪೊಲೀಸರು ಬಂಧಿಸಿದ್ದಾರೆ.



ಅಶ್ವಥ್

'ಹೊಳೇನರಸೀಪುರ ತಾಲ್ಲೂಕಿನ ಜಿ. ಸೋಮನಹಳ್ಳಿಯ ಅಶ್ವಥ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಹೆಗ್ಗನಹಳ್ಳಿಯಲ್ಲಿ ನೆಲೆಸಿದ್ದ. ಆಟೊ ಚಾಲಕನಾಗಿ ಕೆಲಸ ಆರಂಭಿಸಿದ್ದ. ಭಾನುವಾರ ರಾತ್ರಿ ನಡೆದಿದ್ದ ಅಮೋದ್ ಕೊಲೆ ಪ್ರಕರಣದಲ್ಲಿ ಅಶ್ವಥ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಒಡಿಶಾದ ಅಮೋದ್ ಹಾಗೂ ಅವರ ತಮ್ಮ ಅಯೋಬ್, ಚಂದಾಪುರದಲ್ಲಿರುವ ಸಂಬಂಧಿಕರನ್ನು ಭೇಟಿಯಾಗಲು ಇತ್ತೀಚೆಗೆ ನಗರಕ್ಕೆ ಬಂದಿದ್ದರು. ಭಾನುವಾರ ತಮ್ಮೂರಿಗೆ ಹೋಗಲು ಮೆಜೆಸ್ಟಿಕ್ ನಿಲ್ದಾಣದಿಂದ ಯಶವಂತಪುರ ನಿಲ್ದಾಣದತ್ತ ತೆರಳುತ್ತಿದ್ದರು' ಎಂದು ಹೇಳಿದರು.

₹ 3,000 ಹೆಚ್ಚುವರಿ ಬಾಡಿಗೆಗೆ ಒತ್ತಾಯ: 'ಮೆಜೆಸ್ಟಿಕ್ ಬಳಿ ಹೊರಟಿದ್ದ ಆರೋಪಿ ಅಶ್ವಥ್‌ನ ಆಟೊಗೆ (ಕೆಎ 01 ಎಎಲ್ 6094) ಅಮೋದ್ ಕೈ ಮಾಡಿದ್ದರು. ಯಶವಂತಪುರ ರೈಲು ನಿಲ್ದಾಣಕ್ಕೆ ಬಾಡಿಗೆಗೆ ಕರೆದಿದ್ದರು. ₹ 100 ನೀಡುವುದಾಗಿ ಹೇಳಿ ಹೊರಟಿದ್ದರು' ಎಂದು ಪೊಲೀಸರು ತಿಳಿಸಿದರು.

ಮಾರ್ಗಮಧ್ಯೆ ಆಟೊ ನಿಲ್ಲಿಸಿದ್ದ ಅಶ್ವಥ್,₹ 3,000ಕ್ಕೆ ಬೇಡಿಕೆ ಇಟ್ಟಿದ್ದ ಅಮೋದ್ ಒಪ್ಪಿರಲಿಲ್ಲ. ಅಶ್ವಥ್, ಅಮೋದ್ ಅವರ ಹೊಟ್ಟೆ ಹಾಗೂ ಎದೆಗೆ ಗುದ್ದಿದ್ದ. ಮುಖಕ್ಕೆ ಹೊಡೆದಿದ್ದ. ಜಗಳ ಬಿಡಿಸಲು ಹೋದ ಅಯೋಬ್ ಮೇಲೂ ಹಲ್ಲೆ ಮಾಡಿದ್ದ. ಅಮೋದ್ ಹಾಗೂ ಅಯೋಬ್ ಓಡಿ ಹೋಗಲು ಯತ್ನಿಸಿದರು. ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ಅಮೋದ್ ಕುಸಿದು ಬಿದ್ದಿದ್ದರು. ಗಸ್ತಿನಲ್ಲಿದ್ದ ಸಿಬ್ಬಂದಿ ಅವರನ್ನು ಕೆ.ಸಿ. ಜನರಲ್ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಮೋದ್ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದು ಪೊಲೀಸರು ತಿಳಿಸಿದರು.

ಶಶಿಕಲಾ, ಇಳವರಸಿ ಅರ್ಜಿ: ಲೋಕಾಯುಕ್ತಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ನನಗೆ ವಿಶೇಷ ಆತಿಥ್ಯ ನೀಡಲಾಗಿದೆ ಎಂಬ ಆರೋಪದಡಿ ನಮ್ಮ ವಿರುದ್ಧ ದಾಖಲಿಸಿರುವ ಪ್ರಕರಣ ವಜಾ ಮಾಡಿ' ಎಂದು ಕೋರಿ ತಮಿಳುನಾಡು ಮಾಜಿ ಮುಖ್ಯಮಂತ್ರಿ ದಿವಂಗತ ಜೆ. ಜಯಲಲಿತಾ ಆಪ್ತೆ ವಿ.ಕೆ. ಶಶಿಕಲಾ ಮತ್ತು ಜೆ. ಇಳವರಸಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಶಶಿಕಲಾ ಮತ್ತು ಇಳವರಸಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ಪ್ರತಿವಾದಿ ಲೋಕಾಯುಕ್ತ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು 28ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ಹಿರಿಯ ಐಪಿಎಸ್ ಅಧಿಕಾರಿಗಳಾದ ಸತ್ಯನಾರಾಯಣ ರಾವ್ ಮತ್ತು ಡಿ. ರೂಪಾ ಮೌದ್ಗಿಲ್ ಪ್ರತಿಷ್ಠೆಗಾಗಿ ನಡೆಯುತ್ತಿರುವ ಸಂಘರ್ಷದಲ್ಲಿ ನಮ್ಮನ್ನೂ ಸಿಲುಕಿಸಲಾಗಿದೆ. ಪ್ರಕರಣದಲ್ಲಿ ಇತರೆ ಆರೋಪಿಗಳಾಗಿರುವ ಸರ್ಕಾರಿ ಅಧಿಕಾರಿಗಳಾದ ಕೃಷ್ಣಕುಮಾರ್, ಬಿ. ಸುರೇಶ್ ಮತ್ತು ಗಜರಾಜ ಮಾಕನೂರು ವಿರುದ್ಧದ ಪ್ರಕರಣವನ್ನು ಹೈಕೋರ್ಟ್ ಈಗಾಗಲೇ ವಜಾಗೊಳಿಸಿದೆ. ಆದ್ದರಿಂದ, ನಮ್ಮ ವಿರುದ್ಧ ಲೋಕಾಯುಕ್ತ ವಿಶೇಷ ನ್ಯಾಯಾಲಯದ ಮುಂದಿರುವ ಪ್ರಕರಣವನ್ನು ವಜಾ ಮಾಡಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ವಿದೇಶಿ ಯೂಟ್ಯೂಬರ್ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆ ಹಾಗೂ ಸುತ್ತಮುತ್ತಲಿನ ಮಾರುಕಟ್ಟೆಯಲ್ಲಿ ಸುತ್ತಾಡಿ ವಿಡಿಯೊ ಚಿತ್ರೀಕರಣ ಮಾಡುತ್ತಿದ್ದ ವಿದೇಶಿ ಯೂಟ್ಯೂಬರ್ ಮೇಲೆ ಹಲ್ಲೆ ನಡೆದಿದ್ದು, ಕೃತ್ಯ ಎಸಗಿರುವ ಆರೋಪದಡಿ ಬಟ್ಟೆ ವ್ಯಾಪಾರಿ ನವಾಬ್‌ನನ್ನು (58) ಕಾಟನ್‌ಪೇಟೆ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಆರೋಪಿ ನವಾಬ್, ಹಳೇ ಗುಡ್ಡದಹಳ್ಳಿ ನಿವಾಸಿ. ವೃತ್ತಿಯಲ್ಲಿ ಆಟೊ ಚಾಲಕ. ಪ್ರತಿ ಭಾನುವಾರ ಚಿಕ್ಕಪೇಟೆಯ ಮಾರುಕಟ್ಟೆಯಲ್ಲಿ ಹಳೇ ಬಟ್ಟೆ ಮಾರಾಟ ಮಾಡುತ್ತಿದ್ದ. ವಿದೇಶಿ ಪ್ರಜೆ ಮೇಲೆ ಹಲ್ಲೆ ನಡೆಸಿದ್ದ ವಿಡಿಯೊ ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

'ನೆದರ್ಲೆಂಡ್‌ನ ಯೂಟ್ಯೂಬರ್ ಪೆಡ್ರೊ ಮೊಟಾ ಅವರು ಇತ್ತೀಚೆಗೆ ನಗರಕ್ಕೆ ಬಂದಿದ್ದರು. ಹಲವು ಪ್ರದೇಶಗಳಲ್ಲಿ ಸುತ್ತಾಡಿ ವಿಡಿಯೊ ಚಿತ್ರೀಕರಿಸಿ, ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದರು. ಭಾನುವಾರದ ಮಾರುಕಟ್ಟೆ ದೃಶ್ಯಗಳನ್ನು ಚಿತ್ರೀಕರಿಸಲು ಸುಲ್ತಾನ್ ಪೇಟೆಯಲ್ಲಿ ಸುತ್ತಾಡುತ್ತಿದ್ದರು. ಇದೇ ವೇಳೆ ಅವರನ್ನು ಅಡ್ಡಗಟ್ಟಿದ್ದ ನವಾಬ್, ಕ್ಯಾಮೆರಾ ಕಸಿದುಕೊಳ್ಳಲು ಯತ್ನಿಸಿ ಹಲ್ಲೆ ಮಾಡಿದ್ದ. ಕರ್ನಾಟಕ ಪೊಲೀಸ್ ಕಾಯ್ದೆಯಡಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

'ತನ್ನ ವ್ಯಾಪಾರದ ವಿಡಿಯೊ ಚಿತ್ರೀಕರಿಸಿ, ಪೊಲೀಸರಿಗೆ ಮಾಹಿತಿ ನೀಡಬಹುದೆಂದು ಭಾವಿಸಿ ಆರೋಪಿ ಹಲ್ಲೆ ಮಾಡಿದ್ದ. ಈ ಬಗ್ಗೆ ಆತ ಹೇಳಿಕೆ ನೀಡಿದ್ದಾನೆ. ಈತನ ಬಟ್ಟೆ ವ್ಯಾಪಾರ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

ಕದ್ದ ವಸ್ತುಗಳ ಮಾರಾಟ: 'ಭಾರತದ ಕಳ್ಳ ಮಾರುಕಟ್ಟೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿದೆ' ಎಂಬುದಾಗಿ ಹೇಳಿ ವಿದೇಶಿ ಪ್ರಜೆ ಪೆಡ್ರೊ ಮೊಟಾ, ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿದ್ದಾರೆ. 'ಕಳ್ಳ ಮಾರುಕಟ್ಟೆಯಲ್ಲಿ ನನ್ನ ಮೇಲೆ ಹಲ್ಲೆ ಆಗಿದೆ' ಎಂದು ಅವರು ಬರೆದುಕೊಂಡಿದ್ದಾರೆ. ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ದರ ತಗ್ಗಿಸದಿದ್ದರೆ ಮಹಾರಾಷ್ಟ್ರಕ್ಕೆ ವಲಸೆ: ಬೆಳಗಾವಿ ಕೈಗಾರಿಕಾ, ವಾಣಿಜ್ಯೋದ್ಯಮ ಸಂಸ್ಥೆ ಎಚ್ಚರಿಕೆ

ವಿದ್ಯುತ್ ಶಾಕ್‌ಗೆ ಜನರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿದ್ಯುತ್ ಶುಲ್ಕ ಏರಿಕೆಗೆ ಬೆಳಗಾವಿ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಸಂಸ್ಥೆ ಹಾಗೂ ಸಣ್ಣ ಕೈಗಾರಿಕೆಗಳ ಸಂಘ ಆಕ್ಷೇಪಿಸಿದ್ದು, ಇದನ್ನು ಹಿಂಪಡೆಯಲು ರಾಜ್ಯ ಸರ್ಕಾರಕ್ಕೆ ಒಂದು ವಾರದ ಗಡುವು ಕೊಟ್ಟಿವೆ. ಮಂಗಳವಾರ (ಜೂನ್ 13) ಮೌನ ಪ್ರತಿಭಟನೆ ಹಮ್ಮಿಕೊಂಡಿವೆ.

‘ವಿದ್ಯುತ್ ದರ ಏರಿಕೆ ತಕ್ಷಣ ಹಿಂಪಡೆಯದಿದ್ದರೆ, ಕೈಗಾರಿಕೆಗಳನ್ನು ಮಹಾರಾಷ್ಟ್ರಕ್ಕೆ ಸ್ಥಳಾಂತರಿಸುವುದು ಅನಿವಾರ್ಯವಾಗುತ್ತದೆ. ವಿದ್ಯುತ್ ಶುಲ್ಕ ಪಾವತಿಸಲಾಗದೆ ಕೈಗಾರಿಕೆಗಳನ್ನು ಮುಚ್ಚಬೇಕಾಗುತ್ತದೆ’ ಎಂದು ಸಂಸ್ಥೆಯ ಅಧ್ಯಕ್ಷ ಹೇಮೇಂದ್ರ ಪೋರವಾಲ್ ಸೋಮವಾರ ಮಾಧ್ಯಮಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.



‘ಮಹಾರಾಷ್ಟ್ರ ಸರ್ಕಾರವು ತೆರಿಗೆ ಮತ್ತು ವಿದ್ಯುತ್ ಶುಲ್ಕದಲ್ಲಿ ವಿನಾಯಿತಿ ನೀಡಿ ಇಲ್ಲಿನ ಕೈಗಾರಿಕೆಗಳನ್ನು ಆಹ್ವಾನಿಸುತ್ತಿದೆ. ಕೊಲ್ಹಾಪುರ ಜಿಲ್ಲೆಯ ಚಂದಗಡ ತಾಲ್ಲೂಕಿನ ಶಿನೋಳಿ ಬೆಳಗಾವಿಯಿಂದ 13 ಕಿ.ಮೀ ಅಂತರದಲ್ಲಿದೆ. ಅಲ್ಲಿಗೆ ಕೈಗಾರಿಕೆಗಳನ್ನು ಸ್ಥಳಾಂತರಿಸಿದರೆ ಹೆಚ್ಚಿನ ಲಾಭ ಸಿಗುತ್ತದೆ’ ಎಂದರು.

‘ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಶಿಫಾರಸಿನ ಮೇರೆಗೆ, ವಿದ್ಯುತ್ ಸರಬರಾಜು ಕಂಪನಿಗಳು ಶುಲ್ಕ ಹೆಚ್ಚಿಸಿವೆ. ಆದರೆ, ಕೆಇಆರ್‌ಸಿ ನಮ್ಮೊಂದಿಗೆ ಸಮಾಲೋಚನಾ ಸಭೆ ನಡೆಸಿಲ್ಲ. ವಿದ್ಯುತ್ ಸರಬರಾಜು ಕಂಪನಿಗಳ ಅಧಿಕಾರಿಗಳೂ ಮಾಹಿತಿಯನ್ನೂ ಕೊಟ್ಟಿಲ್ಲ’ ಎಂದು ದೂರಿದರು.

ಬೆಳಗಾವಿ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ರೋಹನ ಜುವಳಿ ಮಾತನಾಡಿ, ‘ಜಿಲ್ಲೆಯಲ್ಲಿ 32 ಸಾವಿರ ಸಣ್ಣ ಹಾಗೂ ಸೂಕ್ಷ್ಮ ಕೈಗಾರಿಕೆಗಳು ಮತ್ತು 1 ಸಾವಿರ ಮಧ್ಯಮ ಮತ್ತು ಬೃಹತ್ ಕಾರ್ಖಾನೆಗಳಿವೆ. ಇಲ್ಲಿಯೇ 40 ಸಾವಿರ ಮಂದಿಗೆ ಕೆಲಸ ಸಿಕ್ಕಿದೆ’ ಎಂದು ಮಾಹಿತಿ ನೀಡಿದರು.

ನೇಕಾರರ ಪ್ರತಿಭಟನೆ: ವಿದ್ಯುತ್ ಮಗ್ಗಗಳ ನೇಕಾರರು ಮತ್ತು ಗೃಹ ಬಳಕೆದಾರರು ವಿದ್ಯುತ್ ದರ ಏರಿಕೆ ಖಂಡಿಸಿ ಸೋಮವಾರ ಪ್ರತಿಭಟನೆ ನಡೆಸಿದ್ದಾರೆ. ಬೆಳಗಾವಿ ತಾಲ್ಲೂಕಿನ ಸುಳೇಭಾವಿ, ಮಾರಿಹಾಳ, ಮೋದಗಾ, ಸಾಂಬ್ರಾ ಮತ್ತು ಸುತ್ತಮುತ್ತಲಿನ ಗ್ರಾಮಗಳ ನೇಕಾರರು ಪ್ರತಿಭಟಿಸಿದರು.

ರಾಣಿ ಚನ್ನಮ್ಮ ವೃತ್ತದಿಂದ ಮೆರವಣಿಗೆ ಆರಂಭಿಸಿದ ಪ್ರತಿಭಟನಕಾರರು, ಜಿಲ್ಲಾಧಿಕಾರಿ ಕಚೇರಿ ಎದುರು ಸಮಾವೇಶಗೊಂಡರು. ರಾಜ್ಯ ಸರ್ಕಾರದ ನಡೆಯ ವಿರುದ್ಧ ಘೋಷಣೆ ಕೂಗಿದರು.

‘ತ್ರೀ ಫೇಸ್, ಸಿಂಗಲ್ ಫೇಸ್ ಹಾಗೂ ವಾಣಿಜ್ಯ ಬಳಕೆಯ ವಿದ್ಯುತ್ ದರಗಳನ್ನು ಏಕಾಏಕಿ ಏರಿಸಲಾಗಿದೆ. ಇದು ನೇಕಾರಿಕೆ ನಂಬಿದ ಕುಟುಂಬಗಳಿಗೆ ಉರುಳಾಗಿದೆ. ಈಗಾಗಲೇ ಚಿಂತಾಜನಕ ಸ್ಥಿತಿಯಲ್ಲಿರುವ ನೇಕಾರ ಸಮುದಾಯಕ್ಕೆ ಗಾಯದ ಮೇಲೆ ಬರೆ ಎಳೆದಂತಾಗಿದೆ’ ಎಂದು ಅವರು ತಿಳಿಸಿದರು.

‘ಅಧಿಕಾರಿಗಳು ನಮ್ಮ ಸ್ಥಿತಿಯನ್ನು ರಾಜ್ಯ ಸರ್ಕಾರಕ್ಕೆ ಮನವರಿಕೆ ಮಾಡಬೇಕು. ಒಂದು ವಾರದೊಳಗೆ ಪರಿಷ್ಕೃತ ದರ ಹಿಂಪಡೆಯಬೇಕು. ನೇಕಾರರಿಗೆ ಮೊದಲಿನಂತೆಯೇ ವಿದ್ಯುತ್ ಪೂರೈಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

ಬಿಲ್ ಪಾವತಿಸಲ್ಲ: ನೇಕಾರರ ಎಚ್ಚರಿಕೆ

ಕೆರೂರ (ಬಾಗಲಕೋಟೆ ಜಿಲ್ಲೆ): ಸಾಮಾಜಿಕ ಕಾರ್ಯಕರ್ತ ರಾಚೋಟೇಶ್ವರ ಕುದರಿ ನೇತೃತ್ವದಲ್ಲಿ ಬಾಗಲಕೋಟೆ ಜಿಲ್ಲೆಯ ಕೆರೂರದಲ್ಲಿಯೂ ವಿದ್ಯುತ್ ಮಗ್ಗಗಳ ನೇಕಾರರು ಹಾಗೂ ಗೃಹ ಬಳಕೆದಾರರು ಪ್ರತಿಭಟನೆ ನಡೆಸಿದ್ದಾರೆ.

‘ಸಿದ್ದರಾಮಯ್ಯನವರು ಈ ಹಿಂದೆ, ನಮ್ಮ ಸರ್ಕಾರ ಬಂದರೆ ನೇಕಾರರಿಗೆ 10 ಎಚ್‌ಪಿ ವರೆಗೆ ಉಚಿತ್ ವಿದ್ಯುತ್ ಕೊಡುವುದಾಗಿ ತಿಳಿಸಿದ್ದರು. ಈಗ ಯೂನಿಟ್‌ಗೆ ಶೇ 3ರಷ್ಟು ಹೆಚ್ಚಳ ಮಾಡಿದ್ದಾರೆ. ಮೋಟಾರ್‌ಗಳಿಗೆ ಅಳವಡಿಸಲಾದ ನಿಗದಿತ ಸೇವಾ ಶುಲ್ಕ ಮೊದಲು ₹80 ಇತ್ತು. ಅದೀಗ ₹140ಕ್ಕೆ ಏರಿಕೆ ಆಗಿದೆ. ಗೃಹ ಬಳಕೆ ಸೇವಾ ಶುಲ್ಕ ₹110 ಹೆಚ್ಚಳ ಮಾಡಿದ್ದು ಗ್ರಾಹಕರಿಗೆ ಹೊರೆಯಾಗಿದೆ. ಮೊದಲಿನಂತೆ ದರ ನಿಗದಿ ಮಾಡುವವರೆಗೂ ಬಿಲ್ ಪಾವತಿಸದಿರಲು ತೀರ್ಮಾನಿಸಲಾಗಿದೆ’ ಎಂದು ರಾಚೋಟೇಶ್ವರ ಕುದರಿ ಹೇಳಿದರು.

‘ದರ ಇಳಿಕೆ ಆಗುವ ತನಕ ತ್ರೀ ಫೇಸ್ ವಿದ್ಯುತ್ ಬಳಕೆದಾರರು ಯಾವುದೇ ಕಾರಣಕ್ಕೂ ಬಿಲ್ ಭರಿಸುವುದಿಲ್ಲ’ ಎಂದು ಬೆಳಗಾವಿ ತಾಲ್ಲೂಕಿನ ಪ್ರತಿಭಟನಕಾರರು ಕೂಡ ಎಚ್ಚರಿಕೆ ನೀಡಿದ್ದಾರೆ.

ಹಿಟ್ಟಿನ ಗಿರಣಿ ಶುಲ್ಕವೂ ಏರಿಕೆ: ‘ವಿದ್ಯುತ್ ದರ ಏರಿಕೆ ಪರಿಣಾಮ ಗಿರಣಿ ಮಾಲೀಕರು ಕೂಡ ಏಕಾಏಕಿ ದರವನ್ನು ದುಪ್ಪಟ್ಟು ಮಾಡಿದ್ದಾರೆ. ಮೊದಲು 1 ಸೇರು ಜೋಳ ಬೀಸಲು ₹5 ಇತ್ತು. ಈಗ ₹10ಕ್ಕೆ ಏರಿಕೆ ಆಗಿದೆ’ ಎಂದರು.

ನೇಕಾರರ ಮುಖಂಡರಾದ ಶಿವಪ್ಪ ಹೆಬ್ಬಳ್ಳಿ,ತಿಪ್ಪಣ್ಣ ಕುದರಿ, ವಿರೂಪಾಕ್ಷಪ್ಪ ಮುಂಡಾಸದ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಏರಿಕೆ ರದ್ದು ಮಾಡಲಾಗದು: ಜಾರ್ಜ್

ಬೆಂಗಳೂರು: ‘ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) ಆದೇಶದ ಅನ್ವಯ ವಿದ್ಯುತ್ ದರ ಏರಿಕೆ ಆಗಿದೆ. ಇದರಲ್ಲಿ ನಮ್ಮ ಪಾತ್ರ ಏನೂ ಇಲ್ಲ. ಸರ್ಕಾರಕ್ಕೂ ದರ ಇಳಿಕೆ ಮಾಡಲು ಸಾಧ್ಯವಾಗುವುದಿಲ್ಲ. ಆದೇಶ ರದ್ದು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

‘ಕೆಇಆರ್‌ಸಿ ಒಮ್ಮೆ ದರವನ್ನು ಪರಿಷ್ಕರಣೆ ಮಾಡಿದ ಬಳಿಕ ಸರ್ಕಾರ ಪುನರ್ ಪರಿಶೀಲನೆಗೆ ಮನವಿ ಮಾಡಬಹುದು. ಹಿಂದಿನ ಸರ್ಕಾರ ಆ ಕೆಲಸವನ್ನು ಮಾಡಿಲ್ಲ. ಈಗ ಪರಿಷ್ಕೃತ ದರ ಜಾರಿ ಆಗಿರುವುದರಿಂದ ನಾವೂ ಏನು ಮಾಡಲಿಕ್ಕೂ ಸಾಧ್ಯವಿಲ್ಲ. ಒಮ್ಮೆ ಮನವಿ ಮಾಡಬಹುದು ಅಷ್ಟೇ’ ಎಂದು ಹೇಳಿದರು.

ಕೆಇಆರ್‌ಸಿ ಮೇ 1ಕ್ಕೇ ಪರಿಷ್ಕೃತ ಆದೇಶ ನೀಡಿದೆ. ಅದರ ಪ್ರಕಾರ ಪ್ರತಿ ಯೂನಿಟಗೆ 70 ಪೈಸೆ ಹೆಚ್ಚಿಸಿತ್ತು. ಏಪ್ರಿಲ್‌ನಿಂದಲೇ ಅನ್ವಯ ಮಾಡುವಂತೆ ಸೂಚಿಸಿತ್ತು. ಆದೇಶ ಜಾರಿಗೆ ಹಿಂದಿನ ಸರ್ಕಾರವೇ ಅನುಮತಿ ನೀಡಿತ್ತು. ಇದಕ್ಕೆ ಸಮರ್ಥನೆ ಏನು ನೀಡಿದೆ ಎಂಬುದನ್ನು ಪರಿಶೀಲಿಸಲು ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದರು.

ಯಾರೂ ವಿದ್ಯುತ್ ಬಿಲ್ ಕಟ್ಟದಂತೆ ಮನೆಮನೆಗೆ ತೆರಳಿ ಜನಜಾಗೃತಿ ಮೂಡಿಸಲು ಬಿಜೆಪಿಯಿಂದ ಅಭಿಯಾನ ಆರಂಭಿಸಲಾಗುವುದು

ಎಂ.ಪಿ. ರೇಣುಕಾಚಾರ್ಯ, ಮಾಜಿ ಸಚಿವ



ಜಲಾವೃತ... ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ಸೋಮವಾರ ಸುರಿದ ಭಾರಿ ಮಳೆಯ ನಂತರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನೀರು ನಿಂತಿತ್ತು. ಬೆಂಗಳೂರು, ದಕ್ಷಿಣ ಕನ್ನಡ, ಯಾದಗಿರಿ, ವಿಜಯನಗರ ಜಿಲ್ಲೆ ಸೇರಿದಂತೆ ಇತರೆಡೆ ಮಳೆಯಾಗಿದೆ

ಕೆಕೆಆರ್‌ಡಿಬಿ ಅನುದಾನ ದುರ್ಬಳಕೆ ಆರೋಪ ಪ್ರಕರಣ

ತನಿಖಾ ತಂಡದಿಂದ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಮತ್ತು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಅನುದಾನ ದುರ್ಬಳಕೆ ಆರೋಪಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಬೆಂಗಳೂರಿನಿಂದ ಬಂದಿರುವ ಯೋಜನಾ ಇಲಾಖೆಯ ಎಡಿಬಿ ವಿಭಾಗದ ನಿರ್ದೇಶಕ ಡಿ.ಚಂದ್ರಶೇಖರಯ್ಯ ನೇತೃತ್ವದ ತಂಡ ಸೋಮವಾರ ಇಲ್ಲಿನ ಕೆಕೆಆರ್‌ಡಿಬಿ ಕಚೇರಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿತು.

ಯೋಜನಾ ಇಲಾಖೆಯ ಉಪನಿರ್ದೇಶಕಿ ಶಿವರೂಪಾ, ಸಹಾಯಕ ನಿರ್ದೇಶಕ ಗಿರೀಶ, ಸೆಕ್ಷನ್ ಅಧಿಕಾರಿ ದಿಲೀಪ್ ಹಾಗೂ ಡಾಟಾ ಆಪರೇಟರ್ (ಡಿಒ) ವರಲಕ್ಷ್ಮಿ ತಂಡದಲ್ಲಿದ್ದಾರೆ. ಈ ತಂಡ ಗುರುವಾರದವರೆಗೆ ಮಂಡಳಿ ಮತ್ತು ಸಂಘದ ದಾಖಲೆಗಳ ಪರಿಶೀಲನೆ ನಡೆಸಲಿದೆ. ಜೊತೆಗೆ ಮಂಡಳಿ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕಾಮಗಾರಿ ಅಥವಾ ಯೋಜನೆ ಅನುಷ್ಠಾನಗೊಳಿಸಿದ ಸ್ಥಳಕ್ಕೂ ಭೇಟಿ ನೀಡಿ ತನಿಖೆ ನಡೆಸಲಿದೆ. ಹಸು, ಯಂತ್ರೋಪಕರಣ ಸೇರಿದಂತೆ ವಿವಿಧ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿದೆಯೇ ಇಲ್ಲವೇ ಎಂಬುದನ್ನೂ ಪರಿಶೀಲಿಸಲಿದೆ.

‘ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕಚೇರಿಗೆ ಭೇಟಿ ನೀಡಿ ಆರೋಪಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿದೆ. ದಾಖಲೆಯ ನಕಲು ಪ್ರತಿಗಳನ್ನು ನೀಡಲು ಸೂಚಿಸಲಾಗಿದೆ. ಅವರು ಕೊಡುವ ಮಾಹಿತಿಯ ಆಧಾರದಲ್ಲಿ ತನಿಖೆ ನಡೆಸಲಾಗುವುದು. ಅಲ್ಲದೇ, ಯೋಜನೆ ಅನುಷ್ಠಾನಗೊಳಿಸಿದ ಸ್ಥಳಕ್ಕೂ ಭೇಟಿ ನೀಡಲಾಗುವುದು’ ಎಂದು ಡಿ.ಚಂದ್ರಶೇಖರಯ್ಯ ಮಾಹಿತಿ ನೀಡಿದರು.

‘ಕೆಕೆಆರ್‌ಡಿಬಿ ಅನುದಾನ ಬಳಕೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ. ಅವಶ್ಯಕತೆ ಬಿದ್ದರೆ ಗುರುವಾರದ ನಂತರವೂ ತನಿಖೆ ಮುಂದುವರಿಸಲಾಗುವುದು. ವರದಿ ಸಿದ್ಧಪಡಿಸಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ ಅವರಿಗೆ ಸಲ್ಲಿಸಲಾಗುವುದು. ಅವರು ವರದಿ ಪರಾಮರ್ಶಿಸಿ ಇಲಾಖೆಯ ಸಚಿವರು ಮತ್ತು ಮುಖ್ಯಮಂತ್ರಿಗೆ ಸಲ್ಲಿಸಲಿದ್ದಾರೆ’ ಎಂದು ಹೇಳಿದರು.

ಮುಖ್ಯ ಕಾರ್ಯದರ್ಶಿಗಿಂತ 3 ಪಟ್ಟು ವೇತನ ನೀಡಿದ್ದು ಹೇಗೆ– ಜಮೀರ್

ಹೆಲ್ಪ್ ಲೈನ್ ನಿರ್ವಾಹಕನಿಗೆ ₹4 ಲಕ್ಷ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಲ್ಪಸಂಖ್ಯಾತರ ಇಲಾಖೆಯಲ್ಲಿ ಯೋಜನೆಗಳ ಕುರಿತು ಮಾಹಿತಿ ನೀಡಲು ಸ್ಥಾಪಿಸಿದ ಸಹಾಯವಾಣಿ ನಿರ್ವಹಿಸಿದ ಒಬ್ಬರಿಗೆ ತಿಂಗಳಿಗೆ ₹ 4 ಲಕ್ಷ ವೇತನ ನೀಡಿದ ಮತ್ತು ಅದರಿಂದ ಪ್ರಯೋಜನ ಆಗದಿದ್ದರೂ ಮುಂದುವರಿಸಿದ ಬಗ್ಗೆ ತನಿಖೆ ನಡೆಸಿ ವರದಿ ನೀಡಬೇಕು’ ಎಂದು ಅಧಿಕಾರಿಗಳಿಗೆ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಬಿ.ಜೆಡ್. ಜಮೀರ್ ಅಹಮದ್ ಸೂಚನೆ ನೀಡಿದರು.

ಸೋಮವಾರ ಅವರು ಇಲಾಖೆ ಪ್ರಗತಿ ಪರಿಶೀಲನೆ ಸಭೆ ನಡೆಸಿದರು.

‘ರಾಜ್ಯದ ಮುಖ್ಯ ಕಾರ್ಯದರ್ಶಿಗೆ ನೀಡುವುದಕ್ಕಿಂತ ಮೂರು ಪಟ್ಟು ವೇತನ ನೀಡಿದ್ದು ಹೇಗೆ? ಸಹಾಯವಾಣಿ ಕೇಂದ್ರಕ್ಕೆ ವಾರ್ಷಿಕ ₹ 2.5 ಕೋಟಿ ವೆಚ್ಚ ಮಾಡುತ್ತಿದ್ದರೂ ಪ್ರತ್ಯೇಕವಾಗಿ ಸಹಾಯವಾಣಿ ವ್ಯವಸ್ಥೆಯ ಅಗತ್ಯವೇನಿತ್ತು? ಈ ಕುರಿತು ತನಿಖೆ ಮಾಡಬೇಕು’ ಎಂದೂ ಸಚಿವರು ತಿಳಿಸಿದರು.

ಅಲ್ಪಸಂಖ್ಯಾತ ಕಾಲೊನಿ ಅಭಿವೃದ್ಧಿ ಯೋಜನೆಯಲ್ಲಿ ಐದು ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ಗುತ್ತಿಗೆದಾರರಿಗೆ ಪಾವತಿಸಿದ ಮೊತ್ತದ ಮಾಹಿತಿ ನೀಡುವಂತೆ ಸೂಚಿಸಿದ ಸಚಿವರು, ಕಾಲೊನಿಗಳ ಅಭಿವೃದ್ಧಿ ಪ್ರಸ್ತಾವನೆ ಬಂದರೆ ಸ್ಥಳಕ್ಕೆ ತೆರಳಿ ವರದಿ ಕೊಡಲು ತಜ್ಞರ ತಂಡ ರಚಿಸುವಂತೆ ಸೂಚಿಸಿದರು.

ಬಾಡಿಗೆ ಕಟ್ಟಡದಲ್ಲಿರುವ 29 ಅಲ್ಪಸಂಖ್ಯಾತ ವಸತಿ ಶಾಲಾ ಕಾಲೇಜುಗಳು ಒಂದು ವರ್ಷದಲ್ಲಿ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸಬೇಕು. ವಿದ್ಯಾಸಿರಿ ಯೋಜನೆಯಡಿಯಲ್ಲಿ ಹಾಸ್ಟೆಲ್ ವ್ಯವಸ್ಥೆ ಸಿಗದ 18,800 ವಿದ್ಯಾರ್ಥಿಗಳಿಗೆ ವಾರ್ಷಿಕ ₹ 27 ಕೋಟಿ ಪಾವತಿಸುತ್ತಿದ್ದು, ಅದನ್ನು ತಪ್ಪಿಸಲು ಹೊಸ ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕೆ ಜಮೀನು ಗುರುತಿಸಬೇಕು ಎಂದೂ ನಿರ್ದೇಶನ ನೀಡಿದರು.

‘ಸಮುದಾಯ ಭವನ ನವೀಕರಣ, ಹೊಸ ಸಮುದಾಯ ಭವನ ನಿರ್ಮಾಣ ಸೇರಿ ಯಾವುದೇ ಕಾಮಗಾರಿಗಳಲ್ಲಿ ದುರುಪಯೋಗ, ಲೋಪ ಕಂಡುಬಂದರೆ ಕ್ರಮ ಖಚಿತ’ ಎಂದು ಎಚ್ಚರಿಕೆ ನೀಡಿದರು.

ಅಪೂರ್ಣಗೊಂಡಿರುವ 126 ಶಾದಿ ಮಹಲ್‌ಗಳ ಕಾಮಗಾರಿ ಪೂರ್ಣಗೊಳಿಸಲು ₹ 56 ಕೋಟಿ ಅಗತ್ಯವಿದ್ದು, ಹೊಸದಾಗಿ ಶಾದಿ ಮಹಲ್ ನಿರ್ಮಾಣಕ್ಕೂ ಬೇಡಿಕೆಯಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಇಲಾಖೆಯ ಕಾರ್ಯದರ್ಶಿ ಮನೋಜ್ ಜೈನ್, ನಿರ್ದೇಶಕ ರಾಘವೇಂದ್ರ ಇದ್ದರು.

ಹಜ್ ಭವನದಲ್ಲಿ ಐಎಎಸ್ ತರಬೇತಿ

ವರ್ಷದ ಹತ್ತು ತಿಂಗಳು ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಗಳಿಗೆ ಐಎಎಸ್ ಹಾಗೂ ಐಪಿಎಸ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಕೇಂದ್ರವನ್ನಾಗಿ ಹಜ್ ಭವನವನ್ನು ಪರಿವರ್ತಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಅದೇ ರೀತಿ ವಕ್ಫ್ ತರಬೇತಿ ಕೇಂದ್ರವಾಗಿ ಹಜ್ ಭವನವನ್ನು ಬಳಕೆ ಮಾಡಲು ನಿರ್ಧರಿಸಲಾಯಿತು.

ಮೋದಿ ಸಮಾವೇಶಕ್ಕೆ ಬಸ್: ನೂರಕ್ಕೂ ಹೆಚ್ಚು ಜನರ ವಿರುದ್ಧ ಪ್ರಕರಣ

ಕಾರವಾರ: ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿಯಲ್ಲಿ ಮೇ 3ರಂದು ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದ ಬಿಜೆಪಿ ಸಮಾವೇಶಕ್ಕೆ ಚುನಾವಣಾಧಿಕಾರಿಗಳ ಅನುಮತಿ ಪಡೆಯದೆ ಬಸ್ ಕಾಯ್ದಿರಿಸಿದ್ದ ನೂರಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರ ವಿರುದ್ಧ ಜಿಲ್ಲೆಯ ವಿವಿಧ ಕ್ಷೇತ್ರಗಳ ಚುನಾವಣಾ ಅಧಿಕಾರಿಗಳು ಸೋಮವಾರ ಪ್ರಕರಣ ದಾಖಲಿಸಿದ್ದಾರೆ.


ಕಾರವಾರ ವಿಧಾನಸಭಾ ಕ್ಷೇತ್ರದ 12 ಮತ್ತು ಭಟ್ಕಳ ವಿಧಾನಸಭಾ ಕ್ಷೇತ್ರದ 94 ಕಾರ್ಯಕರ್ತರ ವಿರುದ್ಧ ಕ್ಷೇತ್ರದ ಚುನಾವಣಾ ಅಧಿಕಾರಿಗಳಾಗಿದ್ದ ಆಯಾ ಉಪವಿಭಾಗಾಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ. ಯಲ್ಲಾಪುರ ಕ್ಷೇತ್ರದ 22, ಶಿರಸಿ ಕ್ಷೇತ್ರದ 46 ಜನರ ವಿರುದ್ಧ ಪ್ರಕರಣ ದಾಖಲಿಸುವಂತೆ ಚುನಾವಣಾ ಅಧಿಕಾರಿಗಳು ಕ್ಷಿಪ್ರ ಪಡೆ (ಫ್ಲೈಯಿಂಗ್ ಸ್ಕ್ವಾಡ್) ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ವಿದ್ಯಾರ್ಥಿನಿಯಿಂದ ಟಿಕೆಟ್‌ಗೆ ಹಣ

ಪ್ರಜಾವಾಣಿ ವಾರ್ತೆ

ಚಿತ್ತಾಪುರ (ಕಲಬುರಗಿ ಜಿಲ್ಲೆ): ‘ಶಕ್ತಿ ಯೋಜನೆಯಡಿ ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣಿಸಲು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ ತೋರಿಸಿದರೆ ನಡೆಯುವುದಿಲ್ಲ’ ಎಂದು ಬಸ್ ನಿರ್ವಾಹಕರೊಬ್ಬರು ಶಾಲಾ ವಿದ್ಯಾರ್ಥಿನಿಯಿಂದ ಸೋಮವಾರ ಟಿಕೆಟ್‌ಗೆ ಹಣ ಪಡೆದಿದ್ದಾರೆ.

ತಾಲ್ಲೂಕಿನ ದಂಡೋತಿ ಗ್ರಾಮದ ವಿದ್ಯಾರ್ಥಿನಿ ಮಹಾಲಕ್ಷ್ಮಿ ಮುನಿಯಪ್ಪ ಚಿತ್ತಾಪುರ ಪಟ್ಟಣದಲ್ಲಿನ ನಾಗಾವಿ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯಲ್ಲಿ 8ನೇ ತರಗತಿ ಓದುತ್ತಿದ್ದಾಳೆ. ಬೆಳಿಗ್ಗೆ ಗ್ರಾಮದಿಂದ ಬರುವಾಗ ಬಸ್ಸಿನಲ್ಲಿ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ ತೋರಿಸಿ ಉಚಿತ ಪ್ರಯಾಣ ಮಾಡಿದ್ದಳು. ಶಾಲೆ ಮುಗಿಸಿ ಸಂಜೆ ಕಾಳಗಿ ಸಾರಿಗೆ ಘಟಕದ ಬಸ್ಸಿನಲ್ಲಿ ಪ್ರಯಾಣಿಸುವಾಗ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ ನಡೆಯಲ್ಲ ಎಂದು ನಿವಾರ್ಹಕ ವಿದ್ಯಾರ್ಥಿನಿಯಿಂದ ಟಿಕೆಟ್ ಹಣ ಪಡೆದಿದ್ದಾರೆ.



ವಿದ್ಯಾರ್ಥಿನಿಗೆ ಹಣ ಪಡೆದು ನೀಡಿದ ಟಿಕೆಟ್

ಮಹಿಳೆಯರನ್ನು ಕೆಳಗಿಳಿಸಿದ ನಿರ್ವಾಹಕ: ಕವಿತಾಳ (ರಾಯಚೂರು ಜಿಲ್ಲೆ): ‘ಶಕ್ತಿ’ ಯೋಜನೆಯಡಿ ಉಚಿತ ಪ್ರಯಾಣ ಸೌಲಭ್ಯ ನಿರಾಕರಿಸಿ ಮಹಿಳಾ ಪ್ರಯಾಣಿಕರನ್ನು ನಿರ್ವಾಹಕರೊಬ್ಬರು ಬಸ್‌ನಿಂದ ಕೆಳಗಿಳಿಸಿದ ಘಟನೆ ಕವಿತಾಳದಲ್ಲಿ ಸೋಮವಾರ ನಡೆದಿದೆ.

ಕವಿತಾಳದಿಂದ ರಾಯಚೂರಿಗೆ ತೆರಳಲು 8-10 ಸ್ಥಳೀಯ ಮಹಿಳೆಯರು ಬಾಗಲಕೋಟೆಯ ಬೀಳಗಿಯಿಂದ ಹೈದರಾಬಾದ್‌ಗೆ ತೆರಳುತ್ತಿದ್ದ ಬಸ್ ಅನ್ನು ಹತ್ತಿದ್ದಾರೆ. ಈ ವೇಳೆ ನಿರ್ವಾಹಕ ಅಂತರರಾಜ್ಯ ಸಂಚರಿಸುವ ಬಸ್ ಇದಾಗಿದ್ದು, ಇದರಲ್ಲಿ ಮಹಿಳೆಯರ ಉಚಿತ ಪ್ರಯಾಣಕ್ಕೆ ಅವಕಾಶವಿಲ್ಲ ಎಂದು ಹೇಳಿದ್ದಾರೆ. ಕೆಲ ಮಹಿಳೆಯರು ಟಿಕೆಟ್ ಪಡೆದು ಪ್ರಯಾಣ ಮುಂದುವರಿಸಿದರು. ಹಣವಿಲ್ಲದವರು ಬಸ್‌ನಿಂದ ಕೆಳಗೆ ಇಳಿದು ಹೋಗಿದ್ದಾರೆ. ನಿರ್ವಾಹಕನ ವರ್ತನೆಗೆ ಸಹಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದರು.

ಡಿ.ಕೆ.ಶಿವಕುಮಾರ್ ಮೇಲ್ಮನವಿ: ಸಿಬಿಐ ತನಿಖೆಗೆ ತಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸಲು ಅನುಮತಿ ನೀಡಿ ಈ ಹಿಂದಿನ ರಾಜ್ಯ ಸರ್ಕಾರ ಹೊರಡಿಸಿದ್ದ ಅಧಿಸೂಚನೆ ಪ್ರಶ್ನಿಸಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಮೇಲ್ಮನವಿಯ ಪ್ರಾಥಮಿಕ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ನಡೆಸಿತು. ಶಿವಕುಮಾರ್ ಪರ ಹಾಜರಾಗಿದ್ದ ಹಿರಿಯ ವಕೀಲ ಉದಯ ಹೊಳ್ಳ ಅವರು, ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ರದ್ದುಗೊಳಿಸುವಂತೆ ಕೋರಿದರು.

ಪ್ರಾಥಮಿಕ ವಾದ ಆಲಿಸಿದ ನ್ಯಾಯಪೀಠ, ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ 2023ರ ಜುಲೈ 17ರವರೆಗೆ ಮಧ್ಯಂತರ ತಡೆ ನೀಡಿತು. ಅಂತೆಯೇ, ಪ್ರತಿವಾದಿಗಳಾದ ಸಿಬಿಐ ಮತ್ತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ರಾಜ್ಯ ಸರ್ಕಾರದ ಪರ ಎಸ್.ಎಸ್.ಮಹೇಂದ್ರ ಹಾಜರಾಗಿದ್ದರು.

ಪ್ರಕರಣವೇನು?: ‘ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13 (2), 13 (1)(ಇ) ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿದೆ. ಸಿಬಿಐ ದಾಖಲಿಸಿರುವ ಈ ಎಫ್ಐಆರ್ ಕಾನೂನು ಬಾಹಿರವಾಗಿದ್ದು ಇದನ್ನು ರದ್ದುಗೊಳಿಸಬೇಕು’ ಎಂದು ಕೋರಿ ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಶಿವಕುಮಾರ್ ಅರ್ಜಿ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿದೆ.

ಬಿಜೆಪಿ ಜತೆ ಮೈತ್ರಿ ಗಾಳಿಸುದ್ದಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜತೆ ಜೆಡಿಎಸ್ ಮೈತ್ರಿ ಮಾಡಿಕೊಳ್ಳುತ್ತದೆ ಎನ್ನುವುದು ಗಾಳಿಸುದ್ದಿ. ಆ ರೀತಿ ಯಾವುದೇ ಚರ್ಚೆ ನಡೆದಿಲ್ಲ. ರಾಜಕಾರಣದಲ್ಲಿ ಇಂತಹ ಊಹಾಪೋಹ ಮಾಮೂಲಿ’ ಎಂದು ಜೆಡಿಎಸ್ ಶಾಸಕ ಎಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಪಟ್ಟಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನನಗೆ ರಾಷ್ಟ್ರ ರಾಜಕಾರಣದ ಬಗ್ಗೆ ಒಲವಿಲ್ಲ. ಕಳೆದ ಬಾರಿಯೂ ನನಗೆ ಚುನಾವಣೆ ಎದುರಿಸುವ ಆಸಕ್ತಿ ಇರಲಿಲ್ಲ. ಕಾರ್ಯಕರ್ತರ ಒತ್ತಾಸೆಯಿಂದ ರಾಜಕಾರಣದಲ್ಲಿದ್ದೇನೆ’ ಎಂದರು.

‘ಬಿಜೆಪಿ ಸರ್ಕಾರದ ವಿರುದ್ಧ ಶೇ 40 ಕಮಿಷನ್ ಆರೋಪ ಮಾಡಿದ್ದ ಕಾಂಗ್ರೆಸ್ ನಾಯಕರದ್ದೇ ಸರ್ಕಾರ ಈಗ ಇದೆ. ತನಿಖೆ ನಡೆಸಲಿ’ ಎಂದು ಸವಾಲು ಹಾಕಿದರು.

‘ಈಗ ಕಾಂಗ್ರೆಸ್ ಸರ್ಕಾರ ಇದೆ. 40 ಪರ್ಸಂಟೇಜ್ ಆರೋಪ ತನಿಖೆ ಮಾಡಿಸಲಿ. ಜನರ ಮುಂದೆ ಸತ್ಯ ಇಡಲಿ. ಆರೋಪ ಮಾಡಿದವರ ಬಳಿ ಸಾಕ್ಷ್ಯ ಇರಲೇಬೇಕಲ್ಲವೇ. ಗುತ್ತಿಗೆದಾರರ ಸಂಘದವರು ದೂರು ಕೊಟ್ಟಿದ್ದಾರೆ. ಅವರ ಬಳಿ ಸಾಕ್ಷ್ಯ ಇರುವಾಗ ಲೋಕಾಯುಕ್ತಕ್ಕೆ ದೂರು ನೀಡಲು ಅಡ್ಡಿ ಮಾಡಿದ್ದವರು ಯಾರು’ ಎಂದು ಪ್ರಶ್ನಿಸಿದರು.

ಗ್ಯಾರಂಟಿ ಜಾರಿ ಬಗ್ಗೆ ಸರ್ಕಾರದಲ್ಲಿಯೇ ಗೊಂದಲವಿದೆ. ಚುನಾವಣೆಯಲ್ಲಿ ಘೋಷಣೆ ಮಾಡುವಾಗ ‘ನನಗೂ ಫ್ರೀ, ನಿನಗೂ ಫ್ರೀ’ ಅಂದರು. ಸೌಲಭ್ಯಗಳನ್ನು ಫಲಾನುಭವಿಗಳಿಗೆ ಹೇಗೆ ತಲುಪಿಸುತ್ತಾರೆ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಈಗ ಅದನ್ನೆಲ್ಲ ಯಾವ ರೀತಿ ನಿಬಾಯಿಸುತ್ತಾರೆ ನೋಡಬೇಕು ಎಂದರು.

ಚರ್ಚೆ ಆಗಿಲ್ಲ: ಬಿ.ವೈ. ವಿಜಯೇಂದ್ರ

ಹಾಸನ: ‘ವಿಧಾನಸಭೆ ವಿರೋಧ ಪಕ್ಷದ ನಾಯಕ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ವಿಚಾರವಾಗಿ 3-4 ದಿನಗಳಲ್ಲಿ ಸಭೆ ನಡೆಯಲಿದ್ದು, ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು. ನಾನು ಸೇರಿದಂತೆ ಬಿಜೆಪಿಯ ಯಾವುದೇ ನಾಯಕರು ಸ್ಥಾನವನ್ನು ಸಮರ್ಥವಾಗಿ ನಿಭಾಯಿಸುವ ವಿಶ್ವಾಸವಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುಂದಿನ ಚುನಾವಣೆಗಳಲ್ಲಿ ಜೆಡಿಎಸ್‌ನೊಂದಿಗಿನ ಮೈತ್ರಿ ಕುರಿತು ಇನ್ನೂ ಚರ್ಚೆ ಆಗಿಲ್ಲ. ಈ ಕುರಿತು ಪಕ್ಷದ ವರಿಷ್ಠರು ನಿರ್ಧಾರ ಕೈಗೊಳ್ಳಲಿದ್ದಾರೆ’ ಎಂದರು.

‘ಯಾವುದೇ ಪಕ್ಷವು ಜಾತಿಯನ್ನಷ್ಟೇ ನೆಚ್ಚಿಕೊಂಡು ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಬಿ.ಎಸ್. ಯಡಿಯೂರಪ್ಪ ಅವರನ್ನು ಕಡೆಗಣಿಸಿದ್ದರಿಂದ ಚುನಾವಣೆಯಲ್ಲಿ ಸೋಲಾಗಿದೆ ಎಂದು ವಿಶ್ಲೇಷಣೆ ಮಾಡುತ್ತಿರುವುದು ಸಹಜ. ಈ ಎಲ್ಲ ಬೆಳವಣಿಗೆಗಳ ಕುರಿತು ರಾಷ್ಟ್ರೀಯ ಹಾಗೂ ರಾಜ್ಯ ನಾಯಕರು ಚರ್ಚೆ ಮಾಡಿ ಸೂಕ್ತ ತೀರ್ಮಾನ ಕೈಗೊಳ್ಳಲಿದ್ದಾರೆ’ ಎಂದು ಪ್ರತಿಕ್ರಿಯಿಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಇಬ್ಬರು ಅಧ್ಯಕ್ಷರು

ಬೀದಿಗೆ ಬಂತು ಶಿಕ್ಷಕರ ಸಂಘದ ಒಳ ಜಗಳ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಒಳಜಗಳ ಬೀದಿಗೆ ಬಿದ್ದಿದ್ದು, ರಾಜ್ಯ ಕಾರ್ಯಕಾರಿ ಸಮಿತಿಯ ಇಬ್ಬರು ಪದಾಧಿಕಾರಿಗಳು ತಾವೇ ಅಧ್ಯಕ್ಷರೆಂದು ಘೋಷಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

ಸಂಘಕ್ಕೆ 2020ರ ಡಿಸೆಂಬರ್‌ನಲ್ಲಿ ಚುನಾವಣೆ ನಡೆದಿತ್ತು. ಕೊಪ್ಪಳ ಜಿಲ್ಲೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಶಂಭುಲಿಂಗನ ಗೌಡ ಪಾಟೀಲ ಅಧ್ಯಕ್ಷರಾಗಿ, ವಿಜಯಪುರ ಜಿಲ್ಲೆಯ ಶಿಕ್ಷಕ ಚಂದ್ರಶೇಖರ ನುಗ್ಗಲಿ ಪ್ರಧಾನ ಕಾರ್ಯದರ್ಶಿಯಾಗಿ ಐದು ವರ್ಷದ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದರು. ಮೂರೂವರೆ ವರ್ಷಗಳಲ್ಲಿ ಬಡ್ತಿ, ವೇತನ, ಶಿಕ್ಷಕರ ಸಮಸ್ಯೆಗಳಿಗೆ ಸರ್ಕಾರದ ಮಟ್ಟದಲ್ಲಿ ಪರಿಹಾರ ಕಂಡುಕೊಂಡಿತ್ತು. ಇದೇ 28ರಿಂದ ತಾವು ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಾಗಿ ಮಂಡ್ಯ ಜಿಲ್ಲೆಯ ಶಿಕ್ಷಕ ಕೆ.ನಾಗೇಶ್ ಘೋಷಿಸಿಕೊಂಡಿದ್ದು, ಬೆಂಗಳೂರಿನ ಗಾಂಧಿನಗರದಲ್ಲಿರುವ ಸಂಘದ ಕಚೇರಿಯಲ್ಲಿ ಪದಗ್ರಹಣವನ್ನೂ ಮಾಡಿದ್ದಾರೆ.

ಅಂಕಿ ಅಂಶ

1.53 ಲಕ್ಷ ಸಂಘದ ಸದಸ್ಯರು

9 ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು

70 ಕಾರ್ಯಕಾರಿ ಸಮಿತಿ ಸದಸ್ಯರು

‘2020ರಲ್ಲಿ ಸಂಘಕ್ಕೆ ಅಧಿಕೃತವಾಗಿ ಚುನಾವಣೆ ನಡೆದಿತ್ತು. ಸಿ.ಬಿ.ಜಯರಂಗ ಅವರು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಅಂದು ಆಯ್ಕೆಯಾದ ಕಾರ್ಯಕಾರಿ ಸಮಿತಿಯ 9 ನಿರ್ದೇಶಕರಲ್ಲಿ ತಾವು ಅಧ್ಯಕ್ಷರಾಗಿ ಐದು ವರ್ಷಗಳ ಅವಧಿಗೆ ಆಯ್ಕೆಯಾಗಿದ್ದೇನೆ. ಕೆ.ನಾಗೇಶ್ ಅವರು ಉಪಾಧ್ಯಕ್ಷರಾಗಿದ್ದಾರೆ. ಬೈ-ಲಾ ಪ್ರಕಾರ ಕಾರ್ಯಕಾರಿ ಸಮಿತಿಯ ಯಾವುದೇ ಸ್ಥಾನಕ್ಕೆ ಮರು ಆಯ್ಕೆ ಮಾಡಬೇಕಾದರೆ ಆ ಸ್ಥಾನ ತೆರವಾಗಿರಬೇಕು. ರಾಜೀನಾಮೆ, ಮರಣ ಅಥವಾ ಶಿಕ್ಷಕ ನಿವೃತ್ತನಾದರೆ ಮಾತ್ರ ಸ್ಥಾನ ಖಾಲಿ ಎಂದು ಪರಿಗಣಿಸಲಾಗುತ್ತದೆ. ತಮಗೆ ಇನ್ನೂ ಮೂರು ವರ್ಷಗಳ ಸೇವಾವಧಿ ಇದೆ. ಬದುಕಿದ್ದೇನೆ. ರಾಜೀನಾಮೆಯನ್ನೂ ನೀಡಿಲ್ಲ. ಹಾಗಾದರೆ, ಸ್ಥಾನ ಖಾಲಿ ಎಂದು ಹೇಗೆ ಪರಿಗಣಿಸಲು ಸಾಧ್ಯ? ಈಗಲೂ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ನಾನೇ ಅಧ್ಯಕ್ಷ’ ಎನ್ನುತ್ತಾರೆ ಶಂಭುಲಿಂಗನ ಗೌಡ ಪಾಟೀಲ.

‘ಸಂಘದ ಕಾರ್ಯಕಾರಿ ಸಮಿತಿಯ 9 ನಿರ್ದೇಶಕರು ಹಾಗೂ 70 ಸದಸ್ಯರ ಸದಸ್ಯರ (35 ಶೈಕ್ಷಣಿಕ ಜಿಲ್ಲೆಗಳ ಅಧ್ಯಕ್ಷ, ಕಾರ್ಯದರ್ಶಿಗಳು) ನಿರ್ಣಯದಂತೆ ತಮ್ಮನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಕಳೆದ ಮೇ 28ರಂದು ಆಯ್ಕೆ ನಡೆದಿದೆ. ಶಿಕ್ಷಣ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಜಯರಂಗ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಆಯ್ಕೆ ಅಕ್ರಮವಲ್ಲ’ ಎನ್ನುತ್ತಾರೆ ಸಂಘದ ಹೊಸ ಅಧ್ಯಕ್ಷರೆಂದು ಹೇಳಿಕೊಳ್ಳುತ್ತಿರುವ ಕೆ.ನಾಗೇಶ್ ಹಾಗೂ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ.

ಚುನಾವಣೆಯೇ ಅಕ್ರಮ

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ 2020-25ನೇ ಸಾಲಿಗೆ ನಡೆದಿದ್ದ ಚುನಾವಣೆಯನ್ನು ಅಕ್ರಮ ಎಂದು ಸಹಕಾರ ಸಂಘಗಳ ಉಪ ನಿಬಂಧಕರು ಮೂರು ತಿಂಗಳ ಹಿಂದೆ ರದ್ದುಗೊಳಿಸಿದ್ದರು. ಸಂಘದ ಬೈ-ಲಾದಂತೆ ಸದಸ್ಯರ ಪರಿಷ್ಕೃತ ಪಟ್ಟಿ ತಯಾರಿಸಿ ಮರು ಚುನಾವಣೆ ನಡೆಸುವಂತೆ ಆದೇಶಿಸಿದ್ದರು.

ಸಂಘದ ಬೈ-ಲಾ ಪ್ರಕಾರ ಸರ್ಕಾರಿ ಪ್ರಾಥಮಿಕ ಶಾಲೆಗಳ ಶಿಕ್ಷಕರು, ಮುಖ್ಯಶಿಕ್ಷಕರು ಸಂಘದ ಸದಸ್ಯರಾಗಬಹುದು. ಆದರೆ, ಚುನಾವಣೆಯ ಮತದಾರರಪಟ್ಟಿಯಲ್ಲಿ ಅಧಿಕ ಸಂಖ್ಯೆಯಲ್ಲಿ 6ರಿಂದ 8ನೇ ತರಗತಿಯ ಪದವೀಧರ ಪ್ರಾಥಮಿಕ ಶಿಕ್ಷಕರು (ಜಿಪಿಟಿ), ಪದವೀಧರ ತರಬೇತಿ ಶಿಕ್ಷಕರು (ಟಿಜಿಟಿ) ಸ್ಥಾನಪಡೆದಿದ್ದರು.

ಈ ಅಕ್ರಮದಿಂದಾಗಿ ಚುನಾವಣೆಯಲ್ಲಿ ಒಂದು ಗುಂಪು ಗೆಲುವು ಪಡೆಯಲು ಸಹಕಾರಿಯಾಗಿದೆ ಎಂದು ಉಪ ನಿಬಂಧಕರು ಆದೇಶದಲ್ಲಿ ವಿವರಿಸಿದ್ದರು. ಇಡೀ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆಸುವಂತೆ ಆದೇಶವಿದ್ದರೂ, ಅದೇ ಕಾರ್ಯಕಾರಿ ಸಮಿತಿ ಸಂಘದ ಅಧ್ಯಕ್ಷರನ್ನೇ ಬದಲಾವಣೆ ಮಾಡಿದೆ.




ನಿಯಮಬಾಹಿರವಾಗಿ ಅಧ್ಯಕ್ಷರೆಂದು ಘೋಷಿಸಿಕೊಂಡಿರುವ ನಾಗೇಶ್ ಮತ್ತು ಇತರರ ವಿರುದ್ಧ ಸಹಕಾರ ಇಲಾಖೆಗೆ ದೂರು ನೀಡಿದ್ದೇನೆ. ಹೈಕೋರ್ಟ್‌ಗೂ ಅರ್ಜಿ ಸಲ್ಲಿಸಿದ್ದೇನೆ

ಶಂಭುಲಿಂಗನ ಗೌಡ ಪಾಟೀಲ



ಕಾರ್ಯಕಾರಿ ಸಮಿತಿಯ ನಿರ್ಧಾರದಂತೆ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೇನೆ. ಟೀಕೆಗಳಿಗೆ ಉತ್ತರಿಸದೆ ಶಿಕ್ಷಕರ ಕಲ್ಯಾಣಕ್ಕಾಗಿ ಶ್ರಮಿಸುತ್ತೇನೆ

ಕೆ.ನಾಗೇಶ್



ಸುಭಾಷಿತ

ಇಂದು ಜಾರಿಕೊಳ್ಳುವ ಮೂಲಕ ನಾಳಿನ ಹೊಣೆಗಾರಿಕೆಯಿಂದ ನೀವು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.
–ಅಬ್ರಹಾಂ ಲಿಂಕನ್

ಅರ್ಧಕ್ಕೆ ಶಾಲೆ ಬಿಟ್ಟ ಮಕ್ಕಳ ಹೆಚ್ಚಳ ಸರ್ಕಾರ ಹೊಣೆಗಾರಿಕೆ ಪ್ರದರ್ಶಿಸಲಿ

ಪ್ರೌಢಶಾಲಾ ಹಂತದಲ್ಲಿ ಶಾಲೆಯನ್ನು ಅರ್ಧಕ್ಕೆ ಬಿಟ್ಟವರ ಪ್ರಮಾಣ, 2021-22ರ ಅವಧಿಯಲ್ಲಿ ರಾಜ್ಯದಲ್ಲಿ ಶೇಕಡ 14.6ರಷ್ಟಿತ್ತು ಎನ್ನುವ ಮಾಹಿತಿ ಅಚ್ಚರಿ ಹಾಗೂ ಆತಂಕ ಹುಟ್ಟಿಸುವಂತಹದ್ದು. 'ಯೋಜನಾ ಅನುಮೋದನಾ ಮಂಡಳಿ' (ಪಿಎಬಿ) ಅಂಕಿಅಂಶಗಳ ಪ್ರಕಾರ, ಪ್ರೌಢಶಾಲಾ ಹಂತದಲ್ಲಿ ಶಾಲೆಗಳನ್ನು ಅರ್ಧಕ್ಕೆ ಬಿಟ್ಟವರ ಸಂಖ್ಯೆ ರಾಷ್ಟ್ರೀಯ ಸರಾಸರಿ ಶೇ 12.5ಕ್ಕಿಂತ ಕರ್ನಾಟಕದಲ್ಲಿ ಹೆಚ್ಚಾಗಿದೆ. ಆರ್ಥಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುವ ಭಾರತದ ರಾಜ್ಯಗಳಲ್ಲಿ ಕರ್ನಾಟಕವೂ ಒಂದೆನ್ನುವ ನಂಬಿಕೆಗೆ ಪಿಎಬಿಯ ಮಾಹಿತಿ ಪೆಟ್ಟುಕೊಡುವಂತಿದೆ. ಗುಜರಾತ್, ಬಿಹಾರ, ಅಸ್ಸಾಂ ಹಾಗೂ ಪಂಜಾಬ್ ರಾಜ್ಯಗಳಲ್ಲಿ ಕೂಡ ಪ್ರೌಢಶಾಲೆಯನ್ನು ಅರ್ಧಕ್ಕೆ ಬಿಟ್ಟ ಮಕ್ಕಳ ಪ್ರಮಾಣ ಕರ್ನಾಟಕಕ್ಕಿಂತಲೂ ಹೆಚ್ಚಾಗಿದೆ. ಮೇಘಾಲಯದಲ್ಲಿ ಶೇ 21.7, ಬಿಹಾರದಲ್ಲಿ 20.46 ಹಾಗೂ ಅಸ್ಸಾಂನಲ್ಲಿ ಶೇ 20.3ರಷ್ಟು ಮಕ್ಕಳು ಪ್ರೌಢಶಾಲೆಯನ್ನು ಅರ್ಧಕ್ಕೆ ಬಿಟ್ಟಿದ್ದಾರೆ. ಅಭಿವೃದ್ಧಿಯಲ್ಲಿ ದೇಶಕ್ಕೆ ಮಾದರಿ ಎಂದು ಬಿಂಬಿಸಲಾಗುತ್ತಿರುವ ಗುಜರಾತ್‌ನಲ್ಲಿ ಶೇ 17.85ರಷ್ಟು ಮಕ್ಕಳು ಪ್ರೌಢಶಾಲೆಗಳಿಂದ ಹೊರಗೆ ಹೋಗಿದ್ದಾರೆ. ಈ ವಿವರಗಳು, ದೇಶದ ಅಭಿವೃದ್ಧಿ ಪರಿಕಲ್ಪನೆಗಳ ಅಪೂರ್ಣತೆಯನ್ನು ಹಾಗೂ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿನ ಲೋಪಗಳನ್ನು ಬೆರಳು ಮಾಡಿ ತೋರಿಸುವಂತಿವೆ. 2030ರ ವೇಳೆಗೆ ನೂರಕ್ಕೆ ನೂರರಷ್ಟು ಶಾಲಾ ದಾಖಲಾತಿ ಹೊಂದುವುದು ರಾಷ್ಟ್ರೀಯ ಶಿಕ್ಷಣ ನೀತಿಯ ಗುರಿಯಾಗಿದೆ. ಆದರೆ, ಈ ಗುರಿ ಸಾಧನೆಗೆ ಬಹುತೇಕ ರಾಜ್ಯಗಳಲ್ಲಿನ ಶೈಕ್ಷಣಿಕ ಸ್ಥಿತಿ ಪೂರಕವಾಗಿಲ್ಲ ಎನ್ನುವುದನ್ನು ಪಿಎಬಿ ಅಂಕಿಅಂಶಗಳು ಸೂಚಿಸುತ್ತಿವೆ.



ಎಲ್ಲ ಮಕ್ಕಳು ಶಾಲೆಯ ವ್ಯಾಪ್ತಿಗೆ ಸೇರ್ಪಡೆಯಾಗುವಂತೆ ವಿಶೇಷ ನೋಂದಣಿ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಳ್ಳಬೇಕು

ಕರ್ನಾಟಕದ ಮಟ್ಟಿಗೆ ಪಿಎಬಿಯ ಟಿಪ್ಪಣಿಗಳು ಎಚ್ಚರಿಕೆಯ ಗಂಟೆಯಂತಿವೆ. ರಾಜ್ಯದಲ್ಲಿ, ಪ್ರೌಢಶಾಲಾ ಹಂತದಲ್ಲಷ್ಟೇ ಹೆಚ್ಚಿನ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿಲ್ಲ; ಅಂಗನವಾಡಿಗಳಿಂದಲೇ ಮಕ್ಕಳು ದೂರವುಳಿದಿರುವ ಕಳವಳಕಾರಿ ಸಂಗತಿ ಕಳೆದ ವರ್ಷ ವರದಿಯಾಗಿತ್ತು. 2021ರ ಅಕ್ಟೋಬರ್‌ನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಬಿಬಿಎಂಪಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 2022ರ ಮಾರ್ಚ್‌ನಲ್ಲಿ ನಡೆಸಲಾದ ಸಮೀಕ್ಷೆಯನ್ನು ಆಧರಿಸಿದ ವರದಿಯು ಅಂಗನವಾಡಿ ಕೇಂದ್ರಗಳಿಂದ 9.87 ಲಕ್ಷ ಮಕ್ಕಳು ಹೊರಗುಳಿದಿರುವುದನ್ನು ಬಹಿರಂಗ ಪಡಿಸಿತ್ತು. 3 ವರ್ಷದೊಳಗಿನ 4.54 ಲಕ್ಷ ಮಕ್ಕಳು ಹಾಗೂ 4ರಿಂದ 6ರ ವಯೋಮಾನದ 5.33 ಲಕ್ಷ ಮಕ್ಕಳು ಅಂಗನವಾಡಿ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಿರಲಿಲ್ಲ. ಇವರೊಂದಿಗೆ ಶಾಲೆಗಳಿಂದ ಹೊರಗುಳಿದ 6ರಿಂದ 14 ವರ್ಷದ 15,338 ಮಕ್ಕಳು ಸೇರಿದಂತೆ ಒಟ್ಟು 10 ಲಕ್ಷಕ್ಕೂ ಹೆಚ್ಚು ಎಳೆಯರು ಶಾಲೆಗಳಿಂದ ಹೊರಗುಳಿದಿದ್ದರು. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಮಕ್ಕಳನ್ನು ಶಾಲೆಗೆ ಕರೆತರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಸುಧಾರಣೆಯಾಗಿರುವ ಸಾಧ್ಯತೆ ತೀರಾ ಕಡಿಮೆ. ಕಳೆದ ಐದಾರು ತಿಂಗಳುಗಳಿಂದ ಶಿಕ್ಷಕ ಸಮುದಾಯ ಚುನಾವಣಾ ಕರ್ತವ್ಯದಲ್ಲಿ ತೊಡಗಿಕೊಂಡಿದ್ದು, ಮಕ್ಕಳನ್ನು ಶಾಲೆಗೆ ಕರೆತರುವ ಬಗ್ಗೆ ಯಾವುದೇ ವಿಶೇಷ ಚಟುವಟಿಕೆ ನಡೆದಂತಿಲ್ಲ. ಆ ಬಗ್ಗೆ ಶಿಕ್ಷಣ ಇಲಾಖೆಯೂ ತಲೆಕೆಡಿಸಿಕೊಂಡಂತಿಲ್ಲ. ಸುಮಾರು ಹತ್ತು ಲಕ್ಷ ವಿದ್ಯಾರ್ಥಿಗಳು ಶಾಲೆಗಳಿಂದ ಹೊರಗುಳಿಯುತ್ತಿರುವುದು ಶಿಕ್ಷಣ ವ್ಯವಸ್ಥೆ ದುರ್ಬಲವಾಗಿರುವುದರ ಸ್ಪಷ್ಟ ಸೂಚನೆಯಾಗಿದೆ. ಕೊರೊನಾ ಅವಧಿಯಲ್ಲಿ ಮಕ್ಕಳು ಮತ್ತು ಶಾಲೆಗಳ ನಡುವಣ ಅಂತರ ಹೆಚ್ಚಾಯಿತೆನ್ನುವುದು ನಿಜ. ಆದರೆ, ಕೊರೊನಾ ನಂತರದ ದಿನಗಳಲ್ಲೂ ಶಾಲೆಗಳಿಗೆ ಮಕ್ಕಳನ್ನು ಕರೆತರುವ ಬಗ್ಗೆ ಶಿಕ್ಷಣ ಇಲಾಖೆ ಹೆಚ್ಚಿನ ಆಸಕ್ತಿಯನ್ನೇನೂ ವಹಿಸಿಲ್ಲ. ಬಿಜೆಪಿ ನೇತೃತ್ವದ ಸರ್ಕಾರವು ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ನೈತಿಕ ಶಿಕ್ಷಣದ ಹೆಸರಿನಲ್ಲಿ ಉಂಟಾದ ವಿವಾದಗಳಿಗೆ ವ್ಯಕ್ತಪಡಿಸಿದಷ್ಟು ಉತ್ಸಾಹವನ್ನು ಮಕ್ಕಳ ಹಾಜರಾತಿಯನ್ನು ಹೆಚ್ಚಿಸಲಿಕ್ಕೆ ತೋರಲಿಲ್ಲ.

ಕಲಿಕೆಯಿಂದ ದೂರ ಉಳಿದಿರುವ ಮಕ್ಕಳನ್ನು ಶಾಲೆಗೆ ಮರಳಿ ಕರೆತರಲು ಸಾಧ್ಯವಿರುವ ಎಲ್ಲ ಕ್ರಮಗಳನ್ನೂ ಸರ್ಕಾರ ಕೈಗೊಳ್ಳಬೇಕಾಗಿದೆ. ಲಕ್ಷಾಂತರ ಮಕ್ಕಳು ಶಾಲೆಗಳಿಂದ ದೂರವುಳಿದಿರುವುದನ್ನು ಗಂಭೀರವಾದ ಸಾಮಾಜಿಕ ಸಮಸ್ಯೆಯೆಂದು ಸರ್ಕಾರ ಪರಿಗಣಿಸಬೇಕು. ಎಲ್ಲ ಮಕ್ಕಳು ಶಾಲೆಯ ವ್ಯಾಪ್ತಿಗೆ ಸೇರ್ಪಡೆಯಾಗುವಂತೆ ವಿಶೇಷ ನೋಂದಣಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ದೇಶದಲ್ಲಿ ಶೇ 33ರಷ್ಟು ಹುಡುಗಿಯರು ಮನೆಗೆಲಸದಿಂದಾಗಿ ಶಾಲೆಗಳನ್ನು ಅರ್ಧಕ್ಕೇ ಬಿಡುತ್ತಿದ್ದಾರೆ ಎನ್ನುವ ಯುನಿಸೆಫ್ ವರದಿ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸರ್ಕಾರ ವಿಶೇಷ ಗಮನ ನೀಡಬೇಕಾಗಿರುವುದನ್ನು ಸೂಚಿಸುವಂತಿದೆ. ಮಕ್ಕಳ ಸಂಖ್ಯೆ ಹೆಚ್ಚಿಸುವುದರ ಜೊತೆಜೊತೆಗೇ ಶಾಲೆಗಳ ಮೂಲ ಸೌಕರ್ಯಗಳನ್ನು ಹೆಚ್ಚಿಸುವುದನ್ನೂ ಸರ್ಕಾರ ಆದ್ಯತೆಯನ್ನಾಗಿ ಪರಿಗಣಿಸಬೇಕು. ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಕ್ರಮಕ್ಕೆ ಹಣದ ಕೊರತೆ ಉಂಟಾಗದಂತೆಯೂ ಎಚ್ಚರ ವಹಿಸಬೇಕು. ಎಲ್ಲಕ್ಕೂ ಮಿಗಿಲಾಗಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮರಳಿ ಹಳಿಗೆ ಬರುವವರೆಗೂ ಶಿಕ್ಷಕರನ್ನು ಯಾವುದೇ ಪಠ್ಯೇತರ ಚಟುವಟಿಕೆಗೆ ನಿಯೋಜಿಸದಿರುವ ವಿವೇಕವನ್ನೂ ಸರ್ಕಾರ ಪ್ರದರ್ಶಿಸಬೇಕಾಗಿದೆ.

ದಿನದ ಟ್ವೀಟ್

ಬದುಕು ಸರಳವಾಯಿತು...



ತೆರಿಗೆದಾರರಾದ ನಾವು ಉಚಿತ ಕೊಡುಗೆಗಳ ಬಗ್ಗೆ ಟೀಕಿಸುತ್ತೇವೆ. ಆದರೆ ನಮ್ಮ ಮನೆ ಕೆಲಸದಾಕೆಯ ಮುಖದಲ್ಲಿ ಇಂದು ಬೆಳಿಗ್ಗೆ ಮೂಡಿದ್ದ ಸಂತಸವನ್ನು ಕಂಡು ಬಹಳ ಖುಷಿಯಾಯಿತು. ಕರ್ನಾಟಕದ ಮುಖ್ಯಮಂತ್ರಿ ಜಾರಿಗೊಳಿಸಿದ ಉಚಿತ ಬಸ್ ಪ್ರಯಾಣ ಸೌಲಭ್ಯವು ಮಹಿಳೆಯರ ಪಾಲಿಗೆ ದೊಡ್ಡ ಮಟ್ಟದ ಉಳಿತಾಯಕ್ಕೆ ಕಾರಣವಾಗಲಿದ್ದು, ಅವರ ಬದುಕನ್ನು ಸುಲಭವಾಗಿಸಲಿದೆ. ಅಷ್ಟಾದರೂ ಆಕೆ, 'ಇದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ?' ಎಂದು ಕೇಳಿದಳು. ಅವರಿಗೂ ಆರ್ಥಿಕತೆ ಚೆನ್ನಾಗಿಯೇ ಅರ್ಥವಾಗುತ್ತದೆ.

ಆರ್.ಕೆ.ಮಿಶ್ರಾ, ಆಡಳಿತ ಮಂಡಳಿ ಸದಸ್ಯ, ಅಸೋಚಾಂ, ಕರ್ನಾಟಕ ಘಟಕ

ಕಿಡಿನುಡಿ



ಇದು ನಿಜಕ್ಕೂ ಆಘಾತಕಾರಿ ಹಾಗೂ ಕಳಂಕ ಉಂಟು ಮಾಡುವಂಥದ್ದು. ಕೋವಿನ್ ಪೋರ್ಟಲ್‌ನಿಂದ ಬೃಹತ್ ಪ್ರಮಾಣದಲ್ಲಿ ದತ್ತಾಂಶ ಸೋರಿಕೆಯಾಗಿದೆ. ಇದರಿಂದ, ಲಸಿಕೆ ಹಾಕಿಸಿಕೊಂಡವರೆಲ್ಲರ ವೈಯಕ್ತಿಕ ವಿವರಗಳನ್ನು ಸಾರ್ವಜನಿಕವಾಗಿ ನೋಡಬಹುದಾಗಿದೆ. ಈ ಬಗ್ಗೆ ವಿಸ್ತೃತ ತನಿಖೆ ನಡೆಸಿ ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು.

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

25 ವರ್ಷಗಳ ಹಿಂದೆ

ಶನಿವಾರ, 13-6-1998

- **'ಮಹಿಳಾ ಮೀಸಲಾತಿ ಮಸೂದೆ ಮಂಡಿಸದಿದ್ದರೆ ದೇಶದಾದ್ಯಂತ ಚಳವಳಿ'**

ಅಲಹಾಬಾದ್, ಜೂನ್ 12 (ಪಿಟಿಐ)– ಮಹಿಳಾ ಮೀಸಲಾತಿ ಮಸೂದೆಯನ್ನು ಸರ್ಕಾರ ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲಿ ಮಂಡಿಸದಿದ್ದರೆ ರಾಷ್ಟ್ರದಾದ್ಯಂತ ಚಳವಳಿ ನಡೆಸಲಾಗುವುದು ಎಂದು ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಬೆದರಿಕೆ ಹಾಕಿದ್ದಾರೆ.

ಕಾಂಗ್ರೆಸ್ ಮಹಿಳಾ ಕಾರ್ಯಕರ್ತರ ವಿಭಾಗೀಯ ಸಮಾವೇಶದಲ್ಲಿ ಮಾತನಾಡುತ್ತಿದ್ದ ಅವರು, ಬಿಜೆಪಿ ನೇತೃತ್ವದ ಸರ್ಕಾರ ಮಸೂದೆಯನ್ನು ಮಂಡಿಸುವಲ್ಲಿ ವಿಳಂಬ ತಂತ್ರ ಅನುಸರಿಸುತ್ತಿದೆ ಎಂದರು.

- **ಮಣಿದ ಸರ್ಕಾರ; ಕೈಬಿಟ್ಟ ಯೂರಿಯಾ ಬೆಲೆ ಏರಿಕೆ**

ನವದೆಹಲಿ, ಜೂನ್ 12– ಯೂರಿಯಾ ಮೇಲೆ ಏರಿಸಿದ್ದ ಐವತ್ತು ಪೈಸೆ ವಾಪಸ್, ಆಮದು ವಸ್ತುಗಳ ಮೇಲಿನ ಹೆಚ್ಚುವರಿ ಸುಂಕದಲ್ಲಿ ಶೇ 8ರಿಂದ 4ಕ್ಕೆ ಇಳಿಕೆ, ನಷ್ಟದಲ್ಲಿದ್ದು ಮುಚ್ಚುವ ಸ್ಥಿತಿಯಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಪುನಶ್ಚೇತನಗೊಳಿಸುವ ನಿರ್ಧಾರವನ್ನು ಹಣಕಾಸು ಸಚಿವ ಯಶವಂತ ಸಿನ್ಹಾ ಇಂದು ಪ್ರಕಟಿಸಿದರು.

50 ವರ್ಷಗಳ ಹಿಂದೆ

ಬುಧವಾರ, 13-6-1973

- **ತ್ರಿಪಾಠಿ ಸಂಪುಟ ರಾಜೀನಾಮೆ**

ಲಖನೌ, ಜೂನ್ 12– ಇಪ್ಪತ್ತಾರು ತಿಂಗಳು ಅಧಿಕಾರದಲ್ಲಿದ್ದ ಉತ್ತರಪ್ರದೇಶ ಮುಖ್ಯಮಂತ್ರಿ ಕಮಲಾಪತಿ ತ್ರಿಪಾಠಿ ಅವರ ನೇತೃತ್ವದ ಸಚಿವ ಸಂಪುಟವು ಇಂದು ಸಂಜೆ ಇಲ್ಲಿ ರಾಜ್ಯಪಾಲ ಅಕ್ಬರ್ ಅಲೀಖಾನ್ ಅವರಿಗೆ ರಾಜೀನಾಮೆ ಸಲ್ಲಿಸಿತು.

ಪರಿಣಾಮವಾಗಿ, ಬುಧವಾರ ರಾಜ್ಯವು ರಾಷ್ಟ್ರಪತಿ ಆಳ್ವಿಕೆಗೆ ಒಳಗಾಗುತ್ತದೆ.


ರಾಜೀನಾಮೆಗೂ ಮುಂಚೆ 4 ಗಂಟೆ 20 ನಿಮಿಷಗಳ ಕಾಲ ಸುದೀರ್ಘ ಚರ್ಚೆ ನಡೆಸಿದ ಸಂಪುಟದ ಸಭೆಯಲ್ಲಿ ಕಳೆದ ತಿಂಗಳು ರಾಜ್ಯದಲ್ಲಿ ತಲೆಹಾಕಿದ್ದ ಪ್ರಾಂತೀಯ ಸಶಸ್ತ್ರ ಪೊಲೀಸ್ ಪಡೆ ಬಂಡಾಯ ಪ್ರಕರಣವನ್ನು ಪರಿಶೀಲಿಸಲಾಯಿತು.

- **ಹುಬ್ಬಳ್ಳಿ ಪೇಟೆಯಲ್ಲಿ ಧಾನ್ಯ ಮಂಗಮಾಯ: ಮಾರಾಟ ಸ್ಥಗಿತ**

ಹುಬ್ಬಳ್ಳಿ, ಜೂನ್ 12– ಅಕ್ಕಿ, ಜೋಳ ಮತ್ತು ಗೋಧಿ ಮಾರಾಟವನ್ನು ಹುಬ್ಬಳ್ಳಿ ವರ್ತಕರು ನಿಲ್ಲಿಸಿದ್ದು, ಪೇಟೆಯಲ್ಲಿ ಆಹಾರಧಾನ್ಯಗಳಿಲ್ಲದಿರುವುದರ ಜೊತೆಗೆ ಪಡಿತರ ಪದ್ಧತಿ ಕೂಡ ಅಸಮರ್ಪಕವಾಗಿರುವುದರಿಂದ ನ್ಯಾಯಬೆಲೆ ಅಂಗಡಿಗಳ ಮೂಲಕ ಸಾಕಷ್ಟು ಆಹಾರಧಾನ್ಯ ಒದಗಿಸದಿದ್ದರೆ ಪರಿಸ್ಥಿತಿ ಸ್ಫೋಟಕವಾಗುವುದೆಂದು ಹುಬ್ಬಳ್ಳಿ–ಧಾರವಾಡ ಮೇಯರ್ ಶ್ರೀ ಎ.ಎಂ. ಬೆಂಗಳೂರಿ ಅವರು ಇಂದು ಮುಖ್ಯಮಂತ್ರಿಗೆ ಕಳುಹಿಸಿರುವ ಒಂದು ತಂತಿ ವರ್ತಮಾನದಲ್ಲಿ ತಿಳಿಸಿದ್ದಾರೆ.

ನೆಹರೂ, ವಾಜಪೇಯಿ, ವಿವೇಕಾನಂದರ ಅನುಕರಣೆಯಲ್ಲಿ ಬಿಜೆಪಿಗೆ ಒಳಿತಿದೆ

ಮಿಥ್ಯಾಕಲ್ಪನೆ ಅಳಿಸಿಹಾಕಿದ ಚುನಾವಣೆ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸಾಧಿಸಿದ ಗೆಲುವು ಹಲವು ಮಿಥ್ಯಾಕಲ್ಪನೆಗಳನ್ನು ಮುರಿದಿದೆ. ಮೊದಲನೆಯದು, ನಮ್ಮ ಎಲೆಕ್ಟ್ರಾನಿಕ್ ಮತಯಂತ್ರಗಳು (ಇವಿಎಂ) ಸುರಕ್ಷಿತವಲ್ಲ ಎಂಬ ಆರೋಪವನ್ನು ಇದು ಹುಸಿಗೊಳಿಸಿದೆ. ಬಿಜೆಪಿಯು ತನ್ನ ಶಕ್ತಿ ಬಳಸಿ ಮತಯಂತ್ರಗಳಲ್ಲಿ ಬದಲಾವಣೆ ಮಾಡುತ್ತದೆ ಎಂಬ ನಂಬಿಕೆ ಕೆಲವರಲ್ಲಿತ್ತು. ಆದರೆ ನಮ್ಮ ಚುನಾವಣೆಗಳು ಪಾರದರ್ಶಕವಾಗಿವೆ, ಇವಿಎಂಗಳಲ್ಲಿ ದಾಖಲಾಗುವ ಮತಗಳ ವಿವರಗಳನ್ನು ಬದಲಾಯಿಸುವುದು ಆಗದ ಕೆಲಸ ಎಂಬುದನ್ನು ಈ ಚುನಾವಣೆಯು ಅನುಮಾನಕ್ಕೆ ಎಡೆಯಿಲ್ಲದಂತೆ ಸಾಬೀತುಪಡಿಸಿದೆ. ವಿರೋಧ ಪಕ್ಷಗಳು ಚುನಾವಣೆಯಲ್ಲಿ ಸೋಲು ಕಂಡಾಗ ಇವಿಎಂ ವಿರುದ್ಧ ಹಾಸ್ಯಾಸ್ಪದ ಆರೋಪ ಹೊರಿಸುತ್ತಿದ್ದವು. ಹಲವರು ಅದನ್ನು ನಂಬುತ್ತಿದ್ದರು. ಆದರೆ ಈಗ ಅವರೆಲ್ಲರ ಬಾಯಿ ಮುಚ್ಚಿಸಲಾಗಿದೆ. ಹಿಂದೆ 2009ರಲ್ಲಿ ಬಿಜೆಪಿ ಕೂಡ ಇದೇ ಬಗೆಯ ಆರೋಪಗಳನ್ನು ಮಾಡಿತ್ತು.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಗೆಲುವು ಕಂಡಿದೆ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಒಡಿಶಾದಲ್ಲಿ ಪ್ರಾದೇಶಿಕ ಪಕ್ಷಗಳು ಬಿಜೆಪಿಯನ್ನು ಸೋಲಿಸಿವೆ. ಪಂಜಾಬ್‌ನಲ್ಲಿ ಎಎಪಿ ಗೆದ್ದಿದೆ. ಕಾಂಗ್ರೆಸ್ ಈಗ ಕರ್ನಾಟಕದಲ್ಲಿ ಸ್ಪಷ್ಟ ಗೆಲುವು ಸಾಧಿಸಿದೆ. ಇವಿಎಂ ತಿರುಚುವಿಕೆಗೆ ಸಂಬಂಧಿಸಿದ ಕಳವಳಗಳು ಆಧಾರವಿಲ್ಲದವು ಎಂದು ಇವೆಲ್ಲ ಸಾಬೀತುಮಾಡಿವೆ.

ಕೇಂದ್ರ ಚುನಾವಣಾ ಆಯೋಗವು ಬಿಜೆಪಿಯ ವರಿಷ್ಠರ ವಿಚಾರದಲ್ಲಿ ಕೃತಜ್ಞತಾಭಾವದಿಂದ ನಡೆದುಕೊಳ್ಳುತ್ತದೆ ಎಂಬ ಆರೋಪಗಳಿವೆ, ಕೆಲವರು ಚುನಾವಣಾ ಆಯೋಗವನ್ನು ಈ ರೀತಿಯಲ್ಲಿ ಗ್ರಹಿಸಿದ್ದಾರೆ ಕೂಡ. ಚುನಾವಣೆಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಆಯೋಗವು ಸ್ವತಂತ್ರವಾಗಿ ವರ್ತಿಸಿಲ್ಲ ಎಂದೂ ಆರೋಪಿಸಲಾಗಿದೆ. ಆದರೆ ಒಂದಾದ ನಂತರ ಒಂದು ರಾಜ್ಯದಲ್ಲಿನ ಚುನಾವಣೆಗಳ, ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಆಯೋಗವು ಕಾರ್ಯತತ್ಪರವಾಗಿದೆ; ಚುನಾವಣೆಗಳನ್ನು ಲೋಪರಹಿತವಾಗಿ ನಡೆಸುವ ಭಗೀರಥ ಕೆಲಸವನ್ನು ಮಾಡಿದೆ. ಭಾರತದಲ್ಲಿರುವುದು ಚುನಾಯಿತ ಸರ್ವಾಧಿಕಾರ ಎಂದು ಕೆಲವು ಅಂತರರಾಷ್ಟ್ರೀಯ ಸಂಸ್ಥೆಗಳು ಹೇಳಿದ್ದರೂ, ಕೋಮು ನೆಲೆಯಲ್ಲಿ ಧ್ರುವೀಕೃತ ಆಗಿದ್ದ ಕರ್ನಾಟಕದಲ್ಲಿ ಚುನಾವಣೆಯನ್ನು ಆಯೋಗವು ಶಾಂತಿಯುತವಾಗಿ ಹಾಗೂ ವೇಗವಾಗಿ ನಡೆಸಿದ್ದು, ಮತಗಳನ್ನು ವೇಗವಾಗಿ ಎಣಿಕೆ ಮಾಡಿ ಫಲಿತಾಂಶವನ್ನು ಘೋಷಿಸಿದ್ದು ಭಾರತದಲ್ಲಿ ಪ್ರಜಾತಂತ್ರವು ಜೀವಂತವಾಗಿದೆ ಮತ್ತು ಶಕ್ತಿಯುತವಾಗಿದೆ ಎಂಬುದನ್ನು ಮತ್ತೊಮ್ಮೆ ಸಾಬೀತುಮಾಡುವಂತಿದೆ.

ಕರ್ನಾಟಕದಲ್ಲಿ ಹೊಸದಾಗಿ ಆಯ್ಕೆಯಾಗಿರುವ ಕಾಂಗ್ರೆಸ್ ಶಾಸಕರಲ್ಲಿ ಎಲ್ಲ ಜಾತಿಗಳ, ಪರಿಶಿಷ್ಟ ಪಂಗಡಗಳ, ಧರ್ಮಗಳ ನ್ಯಾಯಸಮ್ಮತ ಪ್ರಾತಿನಿಧ್ಯ ಇದೆ. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ಸಿದ್ದರಾಮಯ್ಯ ಅವರು ನಾಸ್ತಿಕ. ಇಂಥದ್ದೊಂದು ಜಾಣ ಜನಾದೇಶವನ್ನು ನಾವು ಸಂಭ್ರಮದಿಂದ ಕಾಣಬೇಕು!

ಎರಡನೆಯ ಮಿಥ್ಯಾಕಲ್ಪನೆ: ಮೋದಿ ಮ್ಯಾಜಿಕ್ ಬಳಸಿ ಯಾವುದೇ ರಾಜ್ಯದಲ್ಲಿ ಚುನಾವಣೆ ಗೆಲ್ಲಬಹುದು; ಮೋದಿ ಹೆಸರು ರಾಜ್ಯ ಸರ್ಕಾರಗಳ ಕೆಟ್ಟ ಆಡಳಿತವನ್ನು ಮೀರಿ ನಿಲ್ಲುತ್ತದೆ ಎಂಬುದನ್ನು ಈ ಚುನಾವಣೆ ಮುರಿದಿದೆ. ಅಧಿಕಾರದ ಅಮಲು ಏರಿದ್ದರಿಂದ ಬಿಜೆಪಿ ನಾಯಕರು ನಿಯಂತ್ರಣ ಮೀರಿ ವರ್ತಿಸಿದರು, ಭ್ರಷ್ಟಾಚಾರಕ್ಕೆ ಮುಕ್ತ ಅವಕಾಶ ನೀಡಿದರು. ಕೃಷಿ ಬಿಕ್ಕಟ್ಟು ನಿವಾರಣೆ, ಉದ್ಯೋಗ ಸೃಷ್ಟಿ, ಆರೋಗ್ಯ ಮತ್ತು ಶಿಕ್ಷಣ, ಮೂಲಸೌಕರ್ಯ ನಿರ್ಮಾಣಕ್ಕೆ ಆದ್ಯತೆ ನೀಡುವುದನ್ನು ಮರೆತು ಅವರು ಮೂರ್ತಿಗಳ ನಿರ್ಮಾಣಕ್ಕೆ ಗಮನ ನೀಡಿದರು, ಪ್ರಬಲ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯದ ಓಲೈಕೆಯಲ್ಲಿ ತೊಡಗಿಸಿಕೊಂಡಿದ್ದರು. ಆದರೆ ರಾಜ್ಯದ ಎಲ್ಲ ಪ್ರಬಲ ಸಮುದಾಯಗಳು ಚುನಾವಣೆಯಲ್ಲಿ ಬಿಜೆಪಿಯನ್ನು ತಿರಸ್ಕರಿಸಿದವು.

ಇಲ್ಲಿರುವ ಸ್ಪಷ್ಟ ಸಂದೇಶ ಹೀಗಿದೆ: ಭ್ರಷ್ಟಾಚಾರ, ಆಡಳಿತ ಮತ್ತು ಅಭಿವೃದ್ಧಿ ಜನರನ್ನು ಕಾಡುತ್ತವೆ. ಚುನಾವಣೆಯ ಸಂದರ್ಭದಲ್ಲಿ ಮೋದಿ ಮಂತ್ರದ ಜಪ, ಮೋದಿ ಅವರು ಹೊಂದಿರುವ ಮನಸೆಳೆಯುವ ಮಾತುಗಾರಿಕೆ, ಮೋದಿ ಮತ್ತು ಅಮಿತ್ ಶಾ ಅವರ ಬೃಹತ್ ರ್‍ಯಾಲಿಗಳು ತಮಗೆ ಜಯ ತಂದುಕೊಡುತ್ತವೆ ಎಂದು ಬಿಜೆಪಿ ನಾಯಕರು ಆಲೋಚಿಸಿದ್ದರು. ಮೋದಿ ಅವರು ಬಂದರು. ಇಲ್ಲಿ ಆಗುತ್ತಿರುವುದನ್ನು ಕಂಡರು. ರಥವನ್ನು ಏರಿ, ಶಂಖವನ್ನು ಊದಿ, ಹನುಮಂತನ ಸ್ಮರಣೆ ಮಾಡಿದರೂ ಜಯ ಸಾಧಿಸಲು ಆಗಲಿಲ್ಲ.

ಕಾಂಗ್ರೆಸ್ ಮಾಡಿದ ತಪ್ಪನ್ನೇ ಮೋದಿ ಅವರೂ ಮಾಡುತ್ತಿದ್ದಾರೆ. ಆ ತಪ್ಪಿನ ಪರಿಧಿಯನ್ನು ಮೀರುತ್ತಿದ್ದಾರೆ ಕೂಡ. ಇಂದಿರಾ ಗಾಂಧಿ ಅವರಂತೆಯೇ ಮೋದಿ ಅವರೂ ಪಕ್ಷದ ಹಾಗೂ ಸರ್ಕಾರದ ಎಲ್ಲ ಅಧಿಕಾರಗಳನ್ನು ತಮ್ಮಲ್ಲಿಯೇ ಇರಿಸಿಕೊಂಡಿದ್ದಾರೆ. ಅವರು ಜನಸಾಮಾನ್ಯರೊಂದಿಗಿನ ನಂಟನ್ನು ಕಳೆದುಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರದೇಶ, ಪಂಜಾಬ್ ಮತ್ತು ಈಗ ರಾಜಸ್ಥಾನದಲ್ಲಿ ಪರಿಸ್ಥಿತಿಯನ್ನು ಅದಕ್ಷವಾಗಿ ನಿಭಾಯಿಸಿದ್ದನ್ನು ಹೋಲುವಂತೆ ಇತ್ತು ಮೋದಿ ಮತ್ತು ಶಾ ಅವರು ಕರ್ನಾಟಕವನ್ನು ನಿಭಾಯಿಸಿದ ಬಗೆ. ಮೋದಿ ಅವರು ತಮ್ಮ ವಿರೋಧಿ ನೆಹರೂ ಅವರ ಬಗ್ಗೆ ಅಧ್ಯಯನ ಮಾಡುವುದು ಹಾಗೂ ಅವರನ್ನು ಅನುಕರಿಸುವುದು ಒಳಿತು ಮಾಡಬಹುದು. ಈ ರೀತಿ ಹೇಳುವುದು ಅತಾರ್ಕಿಕ ಅನ್ನಿಸಬಹುದು. ನೆಹರೂ ಅವರ ಆರ್ಥಿಕ ಮಾದರಿಗಳನ್ನು ಹಾಗೂ ಅವರ ಕೆಲವು ವೈಫಲ್ಯಗಳನ್ನು ಪಕ್ಕಕ್ಕೆ ಸರಿಸಿ, ಪಕ್ಷಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಅವರು ತೋರಿಸುತ್ತಿದ್ದ ಪಾಂಡಿತ್ಯ, ಚರ್ಚೆಗೆ ಅವರು ತೋರುತ್ತಿದ್ದ ಮುಕ್ತ ಮನಸ್ಸು, ಭಿನ್ನಮತವನ್ನು ಅವರು ನಿಭಾಯಿಸುತ್ತಿದ್ದ ಬಗೆಯನ್ನು ಅರಿತು, ಅನುಕರಿಸಬಹುದು.



ಹಣವು ಚುನಾವಣೆಗಳನ್ನು ಗೆದ್ದುಕೊಡಬಹುದು ಎಂಬ ಮಿಥ್ಯಾಕಲ್ಪನೆಯನ್ನೂ ಈ ಬಾರಿಯ ಫಲಿತಾಂಶ ಸುಳ್ಳಾಗಿಸಿದೆ. ಕರ್ನಾಟಕದ ಚುನಾವಣೆಗಳನ್ನು ದೇವರಾಜ ಅರಸು ಅವರ ಕಾಲದಿಂದಲೂ ಹತ್ತಿರದಿಂದ ಅವಲೋಕಿಸುತ್ತಿರುವ ಪ್ರೊ. ಜೇಮ್ಸ್ ಮೇನರ್ ಅವರು,'2019ರಲ್ಲಿ ಖರ್ಚು ಮಾಡಲು ಬಿಜೆಪಿಯ ಬಳಿ ಇತರ ಎಲ್ಲ ಪಕ್ಷಗಳ ಬಳಿ ಇದ್ದ ಹಣಕ್ಕಿಂತ 18 ಪಟ್ಟು ಹೆಚ್ಚು ಹಣ ಇತ್ತು. ಈ ಅಸಮತೋಲನವು ಹೆಚ್ಚುತ್ತಲೇ ಇದೆ. ಹೀಗಿದ್ದರೂ ಕರ್ನಾಟಕದಲ್ಲಿ (1980ರ ನಂತರದಲ್ಲಿ ಶೇಕಡ 70ರಷ್ಟು ವಿಧಾನಸಭಾ ಚುನಾವಣೆಗಳಲ್ಲಿ ಆಗಿರುವಂತೆ) ಹೆಚ್ಚುಹಣವಿದ್ದ ಪಕ್ಷ ಸೋತಿದೆ' ಎಂದು ಹೇಳಿದ್ದಾರೆ. ಆಡಳಿತದಲ್ಲಿ ವಿಫಲವಾದಾಗ, ನಿರುದ್ಯೋಗ, ಕಾನೂನು ಉಲ್ಲಂಘನೆ, ಸ್ವಜನಪಕ್ಷಪಾತ, ವಿಷ ಉಗುಳುವ ರಾಜಕಾರಣ ಹೆಚ್ಚಾದಾಗ ಹಣದಿಂದ ಜನರ ಹೃದಯ ಗೆಲ್ಲಲಾಗದು.

ನಾಲ್ಕನೆಯ ಮಿಥ್ಯೆಯು ಹಿಂದುತ್ವದ ವೈಭವೀಕರಣ ಮತ್ತು ಇಸ್ಲಾಂ ಬಗ್ಗೆ ಭೀತಿ ಸೃಷ್ಟಿಸುವುದು ಹಿಂದೂಗಳನ್ನು ಧ್ರುವೀಕರಿಸಿ, ಚುನಾವಣೆಯಲ್ಲಿ ಯಶಸ್ಸು ತಂದುಕೊಡುತ್ತದೆ ಎಂಬುದು. ಆದರೆ ಈ ಮಿಥ್ಯಾಕಲ್ಪನೆಯನ್ನು ರಾಜ್ಯದ ಜನ ನಿರ್ಣಾಯಕವಾಗಿ ಅಲ್ಲಗಳೆದಿದ್ದಾರೆ. ಕುವೆಂಪು, ಬಸವಣ್ಣನ ಸಂದೇಶಕ್ಕೆ ಮತದಾರರು ಕಿವಿಗೊಟ್ಟಿದ್ದಾರೆ. ಇದೇ ವೇಳೆ, ಅಲ್ಪಸಂಖ್ಯಾತರನ್ನು ಅತಿಯಾಗಿ ಓಲೈಸುವುದು, ಮತಾಂಧರು, ಮುಲ್ಲಾಗಳನ್ನು ತುಷ್ಟೀಕರಿಸುವುದು ಬಹುಸಂಖ್ಯಾತರ ಪ್ರತಿರೋಧಕ್ಕೆ ಕಾರಣವಾಗುತ್ತದೆ ಎಂಬುದನ್ನು ಕಾಂಗ್ರೆಸ್ ಮತ್ತು ಇತರ ವಿರೋಧಪಕ್ಷಗಳು ನೆನಪಿನಲ್ಲಿ ಇರಿಸಿಕೊಳ್ಳುವುದು ಒಳಿತು.

ಇಸ್ಲಾಮಿಕ್ ಮೂಲಭೂತವಾದ ಹೆಚ್ಚಾಗಿದ್ದು, ಮಧ್ಯಪ್ರಾಚ್ಯ, ಉತ್ತರ ಆಫ್ರಿಕಾ ಮತ್ತು ನೆರೆಯ ದೇಶಗಳಲ್ಲಿ ರಾಜರನ್ನು ಮತ್ತು ಸರ್ವಾಧಿಕಾರಿಗಳನ್ನು ಮಣಿಸಿ ಇಸ್ಲಾಮಿಕ್ ಆಡಳಿತಗಳು ತಲೆಎತ್ತಿದ್ದು, ದೇಶದಲ್ಲಿ ಕಾಂಗ್ರೆಸ್ ಹಾಗೂ ಇತರ ರಾಜಕೀಯ ಪಕ್ಷಗಳು ಮತಕ್ಕಾಗಿ ಅಲ್ಪಸಂಖ್ಯಾತರನ್ನು ಓಲೈಸಿದ್ದು ಆರ್‌ಎಸ್‌ಎಸ್‌ಗೆ ಹಿಂದೂಗಳನ್ನು ತನ್ನತ್ತ ಸೆಳೆಯಲು ನೆರವಾದವು. ಹಿಂದೂ ಧರ್ಮದ ಬಗ್ಗೆ ಜನರಲ್ಲಿ ಅಭಿಮಾನ ಮೂಡಿಸುವುದು, ಈ ಧರ್ಮದ ವೈಶಿಷ್ಟ್ಯಗಳನ್ನು, ವಿಶ್ವದ ಕೌತುಕಗಳನ್ನು ಅರಿಯಲು ಈ ಧರ್ಮವು ಆಧ್ಯಾತ್ಮಿಕ ನೆಲೆಯಲ್ಲಿ ನಡೆಸಿದ ಹುಡುಕಾಟಗಳನ್ನು ಸ್ವಾಮಿ ವಿವೇಕಾನಂದರಂತಹ ವ್ಯಕ್ತಿಗಳ ಮಾರ್ಗದಲ್ಲಿ ಜನರಿಗೆ ತಿಳಿಸುವುದು ಅಗತ್ಯ. ಆದರೆ, ಜನರನ್ನು ವಿಭಜಿಸುವ ವಿಷಕಾರಿ ಮತಾಂಧತೆಯ ಮೂಲಕ ಭಾರತವನ್ನು ಮಹಾನ್ ಆಗಿಸಲು ಹೊರಡುವುದು ಕೊನೆಯಲ್ಲಿ ತಿರುಗುಬಾಣವೇ ಆಗುತ್ತದೆ.

ದೇಶದಲ್ಲಿ ಪ್ರಜಾತಂತ್ರ ಗಟ್ಟಿಯಾಗಿರಬೇಕು ಎಂದಾದರೆ ನೈಜ ಸಂಪ್ರದಾಯವಾದಿ, ಬಲಪಂಥೀಯ ಒಲವುಳ್ಳ ಬಿಜೆಪಿಯ ಅಗತ್ಯವಿದೆ. ಉಗ್ರ ಸಮಾಜವಾದಿ, ತುಸು ಎಡಪಂಥೀಯ ವಿಚಾರಗಳನ್ನು ನಂಬಿರುವ ಹಾಗೂ ಹಿಂದೂ ನಂಬಿಕೆಗಳನ್ನು ನಿಂದಿಸುವ ಕೆಲವು ಪಕ್ಷಗಳ ನಡುವೆ ವ್ಯವಸ್ಥೆಯಲ್ಲಿ ಸಮತೋಲನ ಸಾಧಿಸಲು ಬಿಜೆಪಿ ಬೇಕು. ಬಿಜೆಪಿಯು ತಾನು ಗಟ್ಟಿಯಾಗಿ ಹೇಳುವ 'ವಸುಧೈವ ಕುಟುಂಬಕಂ' ತತ್ವವನ್ನು ಪಾಲಿಸಿದರೆ; ನೆಹರೂ, ವಾಜಪೇಯಿ ಹಾಗೂ ವಿವೇಕಾನಂದರ ಮಾತುಗಳನ್ನು ಒಳಗೊಂಡರೆ ಗೆಲುವು ಸಾಧಿಸಬಹುದು.

ಚುರುಮುರಿ



ಎಕ್ಸ್‌ಪೈರಿ ಡೇಟು

• ಲಿಂಗರಾಜು ಡಿ.ಎಸ್.

ಅಕ್ಕಿ ಚೀಲದ ಮ್ಯಾಲೆ 'ಯೂಸ್ ಬಿಫೋರ್ 2024' ಅಂತ ಇತ್ತು. ತುರೇಮಣೆಗೆ ತೋರಿಸಿ 'ಏನ್ಸಾ, ಅಕ್ಕಿಗೂ ಎಕ್ಸ್‌ಪೈರಿ ಡೇಟ್ ಬಂದದೆ?' ಅಂತಂದೆ.

'ಗೂಡ್ಸ್, ಸರ್ವೀಸಿಗೆ ಜಿಎಸ್‌ಟಿ, ಎಕ್ಸ್‌ಪೈರಿ ಡೇಟು ಇದ್ದಂಗೆ ನರಮನಸುರುಗೂ ಎಕ್ಸ್‌ಪೈರಿ ಡೇಟಿದ್ದತೇ?' ಯಂಟಪ್ಪಣ್ಣ ಕೇಳಿತು.

'ಯಮದೋನು ಬಂದು ಕರೆದಾಗ ನಾವು ಬಿದಿರು ಮೋಟ್ರು ಹತ್ತಕುಲ್ವುಲಾ? ಅದೇ ನಮ್ಮ ಎಕ್ಸ್‌ಪೈರಿ ಡೇಟು' ತುರೇಮಣೆ ಜೀವನ ರಹಸ್ಯ ಬಿಚ್ಚಿಟ್ಟರು.

'ನನಗೊಂದು ದೌಟು ಸಾ? ರಾಜಕೀಯದೋರ ಸರ್ವೀಸಿಗೂ ಎಕ್ಸ್‌ಪೈರಿ ಡೇಟಿದ್ದದೇ?' ಬೇತಾಳನ ಪ್ರಶ್ನೆ ಕೇಳಿದೆ.

'ಯಾಕಿಲ್ಲವುಲಾ? ಒಬ್ಬ ಶಾಸಕ ಚುನಾವಣೇಲಿ ಎಲೆಕ್ಟಾಗಿ ಐದೊರ್ಸ ಆಯ್ತಿದ್ದಂಗೇ ಅವನ ಎಕ್ಸ್‌ಪೈರಿ ಡೇಟು ಆಗೋಯ್ತದೆ. ಸೀಟು ಕೊಟ್ಟ ಪಕ್ಷದ ಹೊಸಾ ಲೇಬಲ್ ಹಾಕ್ಕ್ಯಂದು ಪದೇಪದೇ ಬಂದ್ರೂ ದುಡ್ಡೀಸಿಗಂದು ವೋಟಾಕಿ ಅವನ ಎಕ್ಸ್‌ಪೈರಿ ಡೇಟು ರಿನ್ಯೂ ಮಾಡ್ತೀರ!' ಅಂತ ರೇಗಿದರು.

'ಅದಕ್ಕೇ ಏನೋ ಕಮಲದವು 'ಹದಿಮೂರು ಸಂಸದರ ಎಕ್ಸ್‌ಪೈರಿ ಡೇಟು ಮುಗಿದದೆ. ನಿಶ್ಯಕ್ತಿ ಯೋಜನೆ ಪ್ರಕಾರ ಅವುಕ್ಕೆ ಟಿಕೇಟು ಕೊಡಕ್ಕುಲ್ಲ' ಅಂದುದ್ದು? ಬ್ಯಾರೆ ಪಕ್ಷದೇಲಿ ಹ್ಯಂಗೆ?' ಅಂತಂದೆ.

'ಎಲ್ಲಾ ಪಕ್ಷದ ಸಭ್ಯರ್ಥಿಗಳಿಗೂ ಎಕ್ಸ್‌ಪೈರಿ ಡೇಟು ಆಗೋಗ್ಯದೆ ಕನ್ರೋ! ಒಂದ್ಕೂ ಮಕದಲ್ಲಿ ಕಳೆಯಿಲ್ಲ. ಸಾವಿರ-ಎಡು ಸಾವಿರ ನೋಟಿನ ಥರ ಕಾಣ್ತವೆ. ಈ ಮುಸುಡಿಗಳ ಬೆಕ್ಕಟ್ಟೆ ಬೆಳ್ಳಗೆ ಉಜ್ಜಿ ದಿವಿನಾಗಿ ರೀಪ್ಯಾಕಿಂಗ್ ಮಾಡಿ 'ಇನ್ನೂ ಹೊಸದು. ಏನೂ ಅರೀದ ಮುಕ್ಕ' ಅಂತ ನಮಿಗೆ ಗಿಲೀಟು ಮಾಡ್ತರೆ ಕಯ್ಯಾ' ಅಂತು ಯಂಟಪ್ಪಣ್ಣ.

'ಮೂರೂ ಪಕ್ಷದ ಪಿಂಚಿನ್ ಮೂತಿಗಳು ಏನೋ ಕಡಿದು ದಬ್ಬಾಕ್ತವೆ ಅಂತ ನಾವು ವೋಟಾಕಿ ನಮ್ಮದೇ ಕ್ಯಾಮೆಗಳಲ್ಲಿ ಐದೊರ್ಸ ಎಕ್ಸ್‌ಪೈರಾಗೋಯ್ತಿವಿ! ಹಿಂಗದೆ ನೋಡ್ರಪ್ಪ ನಮ್ಮ ಎಕ್ಸ್‌ಪೈರಿ ಡೇಟಿಂಗು!' ಜ್ಯೋತಿ, ಲಕ್ಷ್ಮಿ, ಭಾಗ್ಯ, ಶಕ್ತಿ ಇಲ್ಲದೇ ಎಕ್ಸ್‌ಪೈರಾಗ್ತಿರೋ ನಮ್ಮ ದುರದೃಷ್ಟದ ಬರಾವ ತುರೇಮಣೆ ಓದಿದರು.

ಸಂಗತ

ಮಗುವಿಗೊಬ್ಬ ಗೆಳೆಯ ಬೇಕಾಗಿದ್ದಾನೆ

ಯಾರ ಒಡನಾಟವೂ ಇಲ್ಲದಂತೆ ಮಗುವನ್ನು ಪೋಷಕರು ದಿನದ ಬಹುಪಾಲು ಮನೆಯೊಳಗೇ ಇರಿಸುವಾಗ, ಆ ಮಗು ಅಂತರ್ಮುಖಿಯಾಗದೆ ಬೇರೇನಾಗಲು ಸಾಧ್ಯ?

• ಪ.ರಾಮಕೃಷ್ಣ ಶಾಸ್ತ್ರಿ

ಪರಿಚಿತರೊಬ್ಬರ ಮನೆಗೆ ಕೆಲವು ವರ್ಷಗಳ ಬಳಿಕ ಹೋಗಿದ್ದೆ. ಪಟ್ಟಣದ ಅಪಾರ್ಟ್‌ಮೆಂಟಿನ ಮೂರನೇ ಮಹಡಿಯಲ್ಲಿ ಇವರ ವಾಸ. ಗಂಡ– ಹೆಂಡತಿ ನೌಕರಿಯಲ್ಲಿದ್ದಾರೆ. ಒಬ್ಬನೇ ಮಗ. ಪದವಿಪೂರ್ವ ತರಗತಿಗೆ ಕಾಲಿಡುವವನಿದ್ದ. ಬಾಲ್ಯದಲ್ಲಿ ಅರಳು ಹುರಿದಂತೆ ಮಾತನಾಡುತ್ತಿದ್ದವನು ಈಗ ಯಾರಾದರೂ ಮಾತನಾಡಿಸಿದರೆ ಮಾತ್ರ ಮಾತು. ಕೇಳಿದ ಪ್ರಶ್ನೆಗೆ ಬೇಕಿರುವಷ್ಟೇ ಉತ್ತರಿಸುತ್ತಿದ್ದ. ಒಂದರ್ಥದಲ್ಲಿ ಅಂತರ್ಮುಖಿ.

'ಯಾಕೋ ಇಷ್ಟು ಕಡಿಮೆ ಮಾತು?' ಎಂದು ಕೇಳಿದೆ. ಅವನ ಅಮ್ಮ, 'ಅವನಿಗೆ ಒಂದು ಕಂಪ್ಯೂಟರ್ ಇದೆ. ಎಷ್ಟು ಹೊತ್ತಿಗೂ ಅದರಲ್ಲೇ ಏನಾದರೂ ಮಾಡಿಕೊಂಡೇ ಇರುತ್ತಾನೆ. ಮಾತನಾಡಲು ಅವನಿಗೆ ಪುರಸತ್ತು ಬೇಕಲ್ಲ?' ಎಂದರು.


ಹುಡುಗ ತಕ್ಷಣ ಅಮ್ಮನೊಂದಿಗೆ, 'ಹೌದು, ನೀವಿಬ್ಬರೂ ಬೆಳಿಗ್ಗೆ ಹೋದವರು ಮರಳಿ ಬರುವಾಗ ರಾತ್ರಿಯಾಗುತ್ತದೆ. ನಾನು ನಾಲ್ಕು ಗಂಟೆಗೆ ಶಾಲೆಯಿಂದ ಮನೆಗೆ ಬಂದಿರ್ತೀನಿ. ಈ ದೊಡ್ಡ ಮನೆಯೊಳಗೆ ನಾನೊಬ್ಬನೇ ಇರ್ತೀನಿ. ಇಲ್ಲಿರುವ ಮೂವತ್ತು ಮನೆಗಳಲ್ಲಿ ನನಗೆ ಒಬ್ಬನೇ ಒಬ್ಬ ಸ್ನೇಹಿತನೂ ಇಲ್ಲ. ಆಟ ಆಡೋಣ ಅಂದರೆ ಜಾಗವೂ ಇಲ್ಲ. ಕಂಪ್ಯೂಟರ್ ನೋಡದೆ ಏನು ಮಾಡಬೇಕು, ಸಮಯ ಹೇಗೆ ಕಳೆಯಬೇಕು, ಹೇಳು?' ಎಂದು ಕೊಂಚ ತೀಕ್ಷ್ಣವಾಗಿಯೇ ಕೇಳಿದ.

ನನಗೆ ಆ ಮಾತು ಅರೆಕ್ಷಣ ಕರುಳನ್ನು ಹಿಂಡಿದ ಅನುಭವ ನೀಡಿತು. ಇಂದು ಇದೇ ಬದುಕು ಎನಿಸಿಬಿಟ್ಟಿದೆ. ದುಡಿಯುವ ಪೋಷಕರು, ಮಹಡಿಯಲ್ಲಿರುವ ಸಾಲು ಮನೆಗಳ ಒಳಗೆ ಇರುವ ಒಂದೇ ಮಗು ಬಂಧನ ಅನುಭವಿಸುವುದು ಸಹಜ ಎಂಬ ಭಾವ ಬೆಳೆಯುತ್ತಿದೆ. ಮಕ್ಕಳಿಗೆ ಹಿರಿಯರೇ ಕೊಡಿಸುವ ಮೊಬೈಲು ಮತ್ತು ಕಂಪ್ಯೂಟರ್ ಮಾತ್ರ ಮನೆಯಲ್ಲಿ ಯಾರೂ ಇಲ್ಲದಾಗ ಮಗುವಿನ ಜೊತೆಗಾರರು. ಕಲಿಕೆಗೆ ಅನುಕೂಲವಾಗಲಿ ಎಂದು ಆಶಿಸಿ ಕೊಟ್ಟ ಕೊಡುಗೆ ಒಂದು ಮಗುವಿನ ಬದುಕಿನ ಇತಿಶ್ರೀಗೂ ಕಾರಣವಾಯಿತೆಂಬ ಕೆಟ್ಟ ಸುದ್ದಿಗಳು ಈ ನಿರ್ಧಾರದ ಬದಲಾವಣೆಗೆ ಪ್ರೇರಕವಾಗಿಲ್ಲ. ಬೇಡವಾದುದನ್ನು ನೋಡದಂತೆ ಮಾಡುವ ವಾತಾವರಣವನ್ನು ಪೋಷಕರು ಸೃಷ್ಟಿಸಲು ಸಾಧ್ಯವೂ ಆಗಿಲ್ಲ.

ಒಂದೇ ಮಗು. ಮನೆಯೊಳಗೆ ಬಂದಿ. ಇದು ಎಲ್ಲ ಮನೆಮನೆಯ ಕತೆ. ಆದರೆ ಭವಿಷ್ಯದ ಪೀಳಿಗೆ ಯಾಂತ್ರಿಕ ಮನೋಭಾವದ ಪ್ರತಿರೂಪವಾಗಬೇಕೆ? ಆತ್ಮೀಯತೆಇಲ್ಲ, ಗೆಳೆತನದ ಭಾವಸ್ಪರ್ಶವಿಲ್ಲ. ಕಲಿಕೆ, ಉದ್ಯೋಗ, ಹಣ ಇಷ್ಟಕ್ಕೇ ಸೀಮಿತವಾಗುತ್ತಿರುವ ಜೀವನದಲ್ಲಿ ಅಕ್ಕ, ತಂಗಿ, ತಮ್ಮ ಎಂಬ ಸಂಬಂಧದ ಪರಿಚಯವಿಲ್ಲ. ಅಜ್ಜಿ ಹೇಳುವ ಕತೆಗಳಿಲ್ಲ. ಅಜ್ಜನ ಕೊಂಡಾಟದ ಸುಖವಿಲ್ಲ. ಶಾಲೆಗೆ ರಜೆಯಿದ್ದಾಗಲೂ ಹಳ್ಳಿಗೆ ಹೋಗಿ ಬಂಧುಗಳ ಮನೆಯ ಕೆರೆಯಲ್ಲಿ ಈಜಾಡುವ ಮೋಜಿಲ್ಲ. ಮಗುವಿನ ಮನಸ್ಸಿನಲ್ಲಿ ವಯೋಸಹಜವಾದ ಆಟಗಳನ್ನಾಡುವ ಬಯಕೆಯಿರುತ್ತದೆ. ಗೆಳೆಯರ ಒಡನಾಟದ ಕಾತರವಿರುತ್ತದೆ. ಬದುಕು ಇಷ್ಟೇ ಎಂದು ಸೀಮಿತಗೊಳಿಸುವ ಪೋಷಕರು ಅವನಂತೆ ಬೆಳೆದವರಲ್ಲ. ಮಗು ದೊಡ್ಡ ನೌಕರಿ ಪಡೆಯುವುದು ಅವರ ಕನಸು ವಿನಾ ಮಗುವಿನ ಕನಸಲ್ಲ.

ಯಾರ ಒಡನಾಟವೂ ಸಿಗದಂತೆ ದಿನದ ಬಹುಪಾಲು ಮಗುವನ್ನು ದೊಡ್ಡ ಮನೆಯೊಳಗೆ ಬಂಧಿಸಿಡುವ ಪೋಷಕರು ಕಚೇರಿಯಿಂದ ಮನೆಗೆ ಬರುವುದೇ ತಡವಾಗಿ. ಆನಂತರವೂ ಮಗುವಿನೊಡನೆ ಭಾವನಾತ್ಮಕವಾಗಿ ಬೆರೆಯಲು ಅವರಿಗೂ ಬಿಡುವಿರುವುದಿಲ್ಲ. ಮಗು ಅಂತರ್ಮುಖಿಯಾಗದೆ ಬೇರೇನಾಗಲು ಸಾಧ್ಯವಿದೆ? ಸಹಜ ಬದುಕೊಂದರ ಹತ್ಯೆ ಅವರಿಗರಿವಿಲ್ಲದ ಹಾಗೆ ಪೋಷಕರಿಂದ ನಡೆಯುತ್ತಿರುವುದು ಸಹಜ ಕ್ರಿಯೆಯೇ ಅಲ್ಲವಾದರೂ ಪರಿಹಾರ ಮಾರ್ಗವಿದೆಯೇ?

ಒಂಟಿತನದ ಅಸಹನೀಯ ಬದುಕಿಗೆ ಒಗ್ಗಿಕೊಂಡು ಬದುಕುತ್ತಿರುವ ಮಗು ಮೌನಿಯಾಗುತ್ತದೆ. ಅವನ ಬೌದ್ಧಿಕ ಪ್ರಪಂಚದ ವಿಕಸನವು ಓದು ಮತ್ತು ನೌಕರಿಯ ಸುತ್ತಲೇ ಸುತ್ತುತ್ತದೆ. ಇದು ಅನೇಕ ಪೋಷಕರಿಗೆ ದುರಂತವೊಂದರ ಮುಖ ಎಂದು ಅನಿಸದಿರಬಹುದು. ಆದರೆ ಮಗನ ಭವಿಷ್ಯದ ಹಪಹಪಿ ಯಾರೂ ಇಲ್ಲದ ಮನೆಯೊಳಗೆ ಕಾಲ ಕಳೆಯಬೇಕಾದ ಸೆರೆಮನೆಯಲ್ಲಿ ಅವನನ್ನು ಬಂಧಿಸಿಡುವಂತೆ ಮಾಡುತ್ತಿದೆ. ಜೀವವಿಲ್ಲದ ಕಂಪ್ಯೂಟರ್, ಗೆಳೆತನದ ಭಾವಬಿಂಬದ ಕನ್ನಡಿಯಾಗಲಾರದು. ಅದುಮಿಟ್ಟ ವಯೋಸಹಜ ಆಟದ ಬಯಕೆಯನ್ನು ಹತ್ತಿಕ್ಕಿ ತಾನು ತೋರಿಸುವ ವಿಡಿಯೊ ಆಟಗಳ ದಾಸನನ್ನಾಗಿ ಮಾಡಬಹುದು. ಇದು ಸಾಂಸಾರಿಕ ಸುಖವನ್ನು ನಿಸ್ತೇಜಗೊಳಿಸುವ ವಾತಾವರಣಕ್ಕೆ ನಾಂದಿಯಾಗಬಹುದು.



ಹೇಗಾದರೂ ಸರಿ, ವಾಸಕ್ಕೊಂದು ಮನೆಯಿದ್ದರೆ ಸಾಕು ಎಂಬ ಮನೋಭಾವ ಬದಲಾಗಬೇಕಾಗಿದೆ. ಅಕ್ಕಪಕ್ಕದ ಮನೆಗಳ ಮಕ್ಕಳೊಂದಿಗೆ ನಮ್ಮ ಮನೆಯ ಮಗುವಿಗೆ ಗೆಳೆತನ ದೊರಕಿದರೆ ಆಟ, ಪಾಠ, ಮನರಂಜನೆಯ ಮೂಲಕ ಒಂಟಿತನದ ಬೇಗುದಿಯಿಂದ ಹೊರಬರಬಹುದು. ಒಂದೇ ಮಗು ಸಾಕು, ತಂಗಿ, ತಮ್ಮ ಬೇಡ ಎಂಬ ಹಿರಿಯರ ಕೌಟುಂಬಿಕ ಮಿತಿ ಪ್ರಶ್ನಾರ್ಹವಲ್ಲವಾದರೂ ದುಡಿಯುವ ಧಾವಂತದಲ್ಲಿ ಮೃದು ಹೃದಯವೊಂದರ ಬಯಕೆಯ ಬುತ್ತಿಯನ್ನು ಹಿಸುಕುವುದನ್ನು ತಡೆಯಬಹುದಲ್ಲವೇ?

ಹೊತ್ತನ್ನು ಕೊಲ್ಲಲು ಮಗುವಿಗೆ ಕಂಪ್ಯೂಟರ್ ಬಿಟ್ಟರೆ ಬೇರೆ ಏನಿದೆ? ಮಗು ಕೇಳುವ ಈ ಪ್ರಶ್ನೆಗೆ ಉತ್ತರಿಸಲು ಪೋಷಕರು ತಡಕಾಡಲೇಬೇಕು. ಹೀಗಾಗಿ, ವಾಸದ ಮನೆ ಹುಡುಕುವಾಗ ಮಗುವಿಗೊಬ್ಬ ಒಳ್ಳೆಯ ಗೆಳೆಯನನ್ನೂ ಹುಡುಕುವ ಹೊಣೆಗಾರಿಕೆ ಪೋಷಕರ ಹೆಗಲಿನ ಮೇಲಿರಬೇಕು.

ವಾಚಕರ ವಾಣಿ

ಟೀಕೆಗಳು ಸಾಯುತ್ತವೆ...

ಕಾಂಗ್ರೆಸ್ ಹೇಳಿದ್ದ ಐದು ಗ್ಯಾರಂಟಿಗಳಲ್ಲಿ ಮೊದಲ ಗ್ಯಾರಂಟಿ 'ಶಕ್ತಿ' ಯೋಜನೆ ಜಾರಿಗೆ ಬಂದ ದಿನ, ಧಾರವಾಡದ ಒಬ್ಬ ಅಜ್ಜಿ ಬಸ್ಸಿನ ಫುಟ್‌ಬೋರ್ಡ್‌ಗೆ ನಮಸ್ಕರಿಸಿ ಬಸ್ಸು ಹತ್ತುತ್ತಿರುವ ಫೋಟೊ ಎಲ್ಲೆಡೆ ಹರಿದಾಡಿತು. ಆ ಫೋಟೊವನ್ನು ಹಲವಾರು ಲೇಖಕರು, ಪತ್ರಕರ್ತರು, ಗೃಹಿಣಿಯರು ಮತ್ತು ಮುಖ್ಯಮಂತ್ರಿ ಸಹ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು, ಅದಕ್ಕೆ ಪೂರಕವಾಗಿ ಒಂದೆರಡು ಸಾಲುಗಳನ್ನು ಬರೆದು ಪೋಸ್ಟ್ ಮಾಡಿದ್ದರು. ಅವರು ಬರೆದ ಸಾಲುಗಳಲ್ಲಿ ಗಮನಿಸಬೇಕಾದದ್ದು, 'ನಾವು ಎಷ್ಟು ಅನುದಾನ ಖರ್ಚು ಮಾಡುತ್ತೇವೆ ಎನ್ನುವುದಕ್ಕಿಂತ ಯಾರಿಗಾಗಿ ಆ ಹಣ ವಿನಿಯೋಗಿಸುತ್ತಿದ್ದೇವೆ ಎಂಬುದು ಮುಖ್ಯ'.

ಮಹಿಳಾ ಸಬಲೀಕರಣಕ್ಕೆ ಸರ್ಕಾರ ಇಟ್ಟ ದೊಡ್ಡ ಹೆಜ್ಜೆ ಇದು ಎಂಬುದು ಇದರಿಂದ ನಮಗೆ ತಿಳಿಯುತ್ತದೆ. ಮಹಿಳೆ ಸಬಲೆಯಾದರೆ ಇಡೀ ಕುಟುಂಬವೇ ಅಭಿವೃದ್ಧಿಯತ್ತ ಸಾಗುತ್ತದೆ. ಈ ಯೋಜನೆ ವಿರುದ್ಧ ಹಲವಾರು ಟೀಕೆಗಳು ಬಂದವು. ಆದರೆ ಕುವೆಂಪು ಅವರು ಹೇಳಿದಂತೆ 'ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ' ಎಂಬುದಷ್ಟೇ ಸತ್ಯ.

ಮನೋಜ್ ಆರ್. ಕಂಬಳಿ, ಶಿವಮೊಗ್ಗ

ಚಳವಳಿಗಾರರ ಮಹತ್ವ ಅರಿವಾಗಲಿ

'ವಚನಕಾರರನ್ನು ಇಂದು ಚಳವಳಿಗಾರರ ಮಟ್ಟಕ್ಕೆ ಇಳಿಸಿದ್ದೇವೆ' ಎಂದು ಶತಾವಧಾನಿ ಆರ್. ಗಣೇಶ್ ಅವರು ಹೇಳಿರುವುದು ವರದಿಯಾಗಿದೆ. ಆದರೆ ಚಳವಳಿಗಳು ಹಾಗೂ ಚಳವಳಿಗಾರರಿಂದಲೇ ಇಂದು ಅನೇಕ ದೇಶಗಳು ಸ್ವಾತಂತ್ರ್ಯ ಅನುಭವಿಸಲು ಸಾಧ್ಯವಾದದ್ದು. ಹಾಗೆಯೇ ಗುಲಾಮಗಿರಿ, ವರ್ಣಭೇದ ನೀತಿಯಂತಹ ಅನಿಷ್ಟಗಳು ತೊಲಗಿದ್ದು. ಮಹಿಳೆಯರು ಪುರುಷರಷ್ಟೇ ಅರ್ಹರೆನಿಸಿಕೊಂಡಿದ್ದು, ಎಲ್ಲರಿಗೂ ಶಿಕ್ಷಣ ಒದಗುವಂತಾಗಿದ್ದು ಸಹ ಚಳವಳಿಗಳಿಂದಲೇ. ಹಾಗಾಗಿ ಚಳವಳಿಗಳನ್ನು, ಚಳವಳಿಗಾರರನ್ನು ಕಡಿಮೆಯೆಂದು ಭಾವಿಸುವುದು ಅನಗತ್ಯ.

ಇಂದು ಗಮನಾರ್ಹ ಸಂಖ್ಯೆಯ ಕನ್ನಡಿಗರು ವಚನಕಾರರನ್ನು ಆಧ್ಯಾತ್ಮಿಕ ಮಾರ್ಗದರ್ಶಕರೆಂದೇ ಪರಿಗಣಿಸುತ್ತಿದ್ದಾರೆ. ಹಾಗೆಯೇ ಇನ್ನೂ ಅನೇಕರಿಗೆ ವಚನಗಳಲ್ಲಿನ ಪ್ರಶ್ನಿಸುವ ಮನೋಧರ್ಮ, ಎಲ್ಲರನ್ನೂ ಒಳಗೊಳ್ಳುವಿಕೆ, ಅವುಗಳ ಸರಳತೆ ಹಾಗೂ ನೈಜತೆಗಳು ಎದ್ದು ಕಂಡಿವೆ. ಜಡ್ಡುಗಟ್ಟಿದ್ದ ಸಮಾಜದಲ್ಲಿ ಬೆಳೆದವರು ಇವೆಲ್ಲವನ್ನೂ ಕ್ರಾಂತಿಕಾರಕವೆಂದು ಪರಿಗಣಿಸಿದ್ದರೆ ಆಶ್ಚರ್ಯವೇನಿಲ್ಲ.

ಸುನೀಲ ನಾಯಕ, ಬೆಂಗಳೂರು

ಪರವಾನಗಿ ಇಲ್ಲದೆ ವಾಹನ ಚಾಲನೆ: ಕ್ರಮ ಜರುಗಿಸಿ

ಸರ್ಕಾರವು ಸರ್ಕಾರಿ ಬಸ್ಸುಗಳಲ್ಲಿ ಮಹಿಳೆಯರಿಗೆ ಕಲ್ಪಿಸಿದ ಉಚಿತ ಪ್ರಯಾಣ ಸೌಲಭ್ಯಕ್ಕೆ ಕೆಜಿಎಫ್ ಬಸ್ ನಿಲ್ದಾಣದಲ್ಲಿ ಚಾಲನೆ ನೀಡಿದ ಶಾಸಕಿ ರೂಪಕಲಾ ಎಂ. ಶಶಿಧರ್ ಅವರು ರಾಬರ್ಟ್‌ಸನ್‌ಪೇಟೆ ನಿಲ್ದಾಣದಿಂದ ನೂರು ಮೀಟರ್ ದೂರ ಕೆಎಸ್‌ಆರ್‌ಟಿಸಿ ಬಸ್ಸನ್ನು ಚಲಾಯಿಸುವ ಮೂಲಕ ಗಮನ ಸೆಳೆದದ್ದೇನೊ ಸರಿ. ಆದರೆ ಅವರ ಬಳಿ ಭಾರಿ ವಾಹನಗಳ ಚಾಲನಾ ಪರವಾನಗಿ ಇರಲಿಲ್ಲ. ಅಷ್ಟೇ ಅಲ್ಲದೆ ಅದರ ಜೊತೆಗೆ ಮತ್ತೊಂದು ಬಸ್ ಏರಿ ಚಲಾಯಿಸಲು ಪ್ರಯತ್ನಿಸಿದಾಗ, ಗೇರ್ ಸರಿಯಾಗಿ ಬೀಳದೆ ಬಸ್ ಹಿಮ್ಮುಖವಾಗಿ ಚಲಿಸಿ, ಹಿಂಭಾಗದಲ್ಲಿದ್ದ ಖಾಸಗಿ ಬಸ್‌ಗೆ ಡಿಕ್ಕಿಯಾಗುವುದು ಅದೃಷ್ಟವಶಾತ್ ಸ್ವಲ್ಪದರಲ್ಲಿಯೇ ತಪ್ಪಿದೆ. ಅಕಸ್ಮಾತ್ ಆ ಜಾಗದಲ್ಲಿ ಜನ ಇದ್ದು ಜೀವಹಾನಿ ಆಗಿದ್ದಿದ್ದರೆ ಅವರ ಕುಟುಂಬಗಳ ಗತಿ ಏನಾಗುತ್ತಿತ್ತು? ಶಾಸಕಿಯೇ ಬಸ್ ಏರಿ ಚಾಲಕನ ಜಾಗದಲ್ಲಿ ಕುಳಿತಾಗ ಅಲ್ಲಿದ್ದ ಸಾರಿಗೆ ನಿಗಮದ ಸಿಬ್ಬಂದಿ ಅಸಹಾಯಕರಾಗಿದ್ದಾರೆ.

ಜವಾಬ್ದಾರಿಯುತ ಸ್ಥಾನದಲ್ಲಿರುವ ಶಾಸಕಿಗೆ ಇದು ಬೇಕಿತ್ತೇ? ಅವಘಡಗಳನ್ನು ತಪ್ಪಿಸುವ ಅಥವಾ ಅಂತಹವು ಘಟಿಸಿದಾಗ ಅವಕ್ಕೆ ಪರಿಹಾರ ಕೊಡಬೇಕಾದಂತಹವರೇ ಅವಘಡಕ್ಕೆ ಕಾರಣರಾಗಬಾರದು. ಸರ್ಕಾರ ಇವರ ಮೇಲೆ ಕ್ರಮ ಕೈಗೊಂಡರೆ ಮಿಕ್ಕವರಿಗೆ ಅದು ಎಚ್ಚರಿಕೆಯ ಗಂಟೆಯಾದೀತು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ವಿರೋಧ ಪಕ್ಷದ ನಾಯಕನ ಆಯ್ಕೆ: ವಿಳಂಬ ಸಲ್ಲ

ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಫಲಿತಾಂಶ ಹೊರಬಿದ್ದು ತಿಂಗಳಾಗುತ್ತಿದೆ. ಆದರೆ ಈವರೆಗೆ ವಿರೋಧ ಪಕ್ಷದ ನಾಯಕ ಆಯ್ಕೆಯಾಗಿಲ್ಲ. ಅಧಿಕೃತ ವಿರೋಧ ಪಕ್ಷವಾದ ಬಿಜೆಪಿಗೆ ಇದು ಶೋಭೆ ತರುವ ಸಂಗತಿಯಲ್ಲ. ಇತ್ತ ಮುಖ್ಯಮಂತ್ರಿ, ಸ್ಪೀಕರ್ ಆಯ್ಕೆ, ಮಂತ್ರಿಮಂಡಲ ರಚನೆ ಹಾಗೂ ವಿಧಾನಸಭೆಯ ಮೊದಲ ಕಲಾಪ ಆಗಿಹೋಗಿವೆ. ರಾಜ್ಯ ಸರ್ಕಾರದ ಗ್ಯಾರಂಟಿ ಕಾರ್ಯಕ್ರಮಗಳ ಗೊಂದಲವನ್ನು ಪ್ರಶ್ನಿಸುವ ಹಾಗೂ ವಿಧಾನಸಭೆಯಲ್ಲಿ ಆಡಳಿತ ಪಕ್ಷದ ನಡೆಯಲ್ಲಿ ನ್ಯೂನತೆ ಇದ್ದರೆ ಅದನ್ನು ಎತ್ತಿ ತೋರಿಸುವ ಪ್ರಬಲ ನಾಯಕನನ್ನು ಶೀಘ್ರವೇ ಆಯ್ಕೆ ಮಾಡುವ ಮೂಲಕ ವಿಧಾನಸಭೆ ಕಲಾಪಕ್ಕೆ ಕಳೆ ತರಬೇಕಿದೆ.

ಲೋಹಿತ ಹಸೂರೆ, ಹುಕ್ಕೇರಿ

ಗೃಹಲಕ್ಷ್ಮಿ ಯೋಜನೆ: ಅರ್ಜಿ ಸಲ್ಲಿಕೆ ಅಗತ್ಯವೇ?

ಕಾಂಗ್ರೆಸ್ ನೇತೃತ್ವದ ಸರ್ಕಾರ ಘೋಷಿಸಿರುವ ಗೃಹಲಕ್ಷ್ಮಿ ಯೋಜನೆಯಡಿ ಬರುವ ಹಣ ಅತ್ತೆಗೋ ಸೊಸೆಗೋ ಎಂಬ ಚರ್ಚೆ ಹಿನ್ನೆಲೆಗೆ ಸರಿದಿದ್ದು, ಅರ್ಜಿ ಸಲ್ಲಿಸಲು ಬೇಕಾಗುವ ಅಗತ್ಯ ದಾಖಲೆಗಳ ಕುರಿತ ಚರ್ಚೆ, ಅವುಗಳ ಹೊಂದಾಣಿಕೆಯ ತಯಾರಿ ಜೋರಾಗಿಯೇ ನಡೆದಿದೆ. ಸರ್ಕಾರವು ಅರ್ಜಿ ನಮೂನೆ, ಮಾರ್ಗಸೂಚಿ ಬಿಡುಗಡೆ ಮಾಡುವ ಮೊದಲೇ ಅನೇಕ ನಾಗರಿಕರು ದಾಖಲೆಗಳನ್ನು ಸೈಬರ್ ಸೆಂಟರ್‌ಗಳಿಗೆ ಕೊಟ್ಟು ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ. ಆದರೆ ಈ ಯೋಜನೆಗೆ ಅರ್ಜಿ ಸಲ್ಲಿಸುವ ಅಗತ್ಯವಿದೆಯೇ ಎಂಬುದರ ಬಗ್ಗೆ ಜನ ಹಾಗೂ ಜನನಾಯಕರು ಗಮನಹರಿಸದಿರುವುದು ಆಶ್ಚರ್ಯಕರ.

ಸರ್ಕಾರದ ಬಳಿಯೇ ಇರುವ ಆಹಾರ, ಆಧಾರ್, ಕುಟುಂಬ ಹಾಗೂ ಸಂಬಂಧಿಸಿದ ಇತರ ಇಲಾಖೆಗಳಲ್ಲಿನ ದಾಖಲೆಗಳಿಂದ ಫಲಾನುಭವಿಗಳನ್ನು ಗುರುತಿಸಲು ಸಾಧ್ಯವಿಲ್ಲವೇ? ಉದಾಹರಣೆಗೆ, ಪಡಿತರ ಚೀಟಿಯೊಂದನ್ನೇ ಆಧಾರವಾಗಿ ನೋಡುವುದಾದರೆ, ಅದರಲ್ಲಿನ ಹಿರಿಯ ಮಹಿಳೆಯನ್ನು ಕುಟುಂಬದ ಮುಖ್ಯಸ್ಥೆ ಎಂದು ಪರಿಗಣಿಸುವ ವ್ಯವಸ್ಥೆ ಆಹಾರ ತಂತ್ರಾಂಶದಲ್ಲಿದೆ. ಅಲ್ಲಿಯೇ ಆಕೆಯ ಆಧಾರ್ ಸಂಖ್ಯೆ, ಮೊಬೈಲ್ ನಂಬರ್ ಸಿಗುತ್ತಿದ್ದು, ಇದನ್ನೇ ಆಧರಿಸಿ ನೇರ ನಗದು ವರ್ಗಾವಣೆ ಮಾಡಬಹುದಲ್ಲ? ಇನ್ನು ಉಚಿತ ಪ್ರಯಾಣಕ್ಕೆ ಆಧಾರ್, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ ಸಾಕಲ್ಲವೇ? ಸ್ಮಾರ್ಟ್ ಕಾರ್ಡ್ ಅಗತ್ಯವೇ? ಹೀಗೆ ಸರಳವಾಗಿ ಯೋಜನೆಗಳ ಅನುಷ್ಠಾನವಾದರೆ ಪ್ರಣಾಳಿಕೆಗೂ ಅರ್ಥ ಬಂದೀತು, ಜನರ ಅಲೆದಾಟವೂ ತಪ್ಪೀತು.

ದೇವರಾಜ ದೊಡ್ಡಗೌಡ್ರ, ನಾಗವಂದ, ರಟ್ಟೀಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಆಕ್ರಮಣಕಾರಿ ವರ್ತನೆಗೆ ಕೀಳರಿಮೆಯೇ ಮುಖ್ಯ ಕಾರಣ

ಸಂಗಾತಿ ಹಂತಕರ ಮನಃಸ್ಥಿತಿ



ಪ್ರಜಾವಾಣಿ ವಾರ್ತೆ

ವ್ಯಕ್ತಿಗಳು ತಮ್ಮ ಸಂಗಾತಿಯನ್ನು ಕೊಂದು, ದೇಹವನ್ನು ಕತ್ತರಿಸಿ ಇಟ್ಟ ಹಲವು ಪ್ರಕರಣಗಳು ದೇಶದಲ್ಲಿ ಈಚೆಗೆ ವರದಿಯಾಗಿವೆ. ದೆಹಲಿಯಲ್ಲಿ ಆಫ್ತಾಬ್ ಪೂನಾವಾಲಾ ತನ್ನ ಸಹಜೀವನ ಸಂಗಾತಿ ಶ್ರದ್ಧಾ ವಾಲ್ಕರ್ ಅವರನ್ನು ಹತ್ಯೆ ಮಾಡಿದ್ದ ಕೃತ್ಯವು ದೇಶದಾದ್ಯಂತ ಹೆಚ್ಚು ಸುದ್ದಿಯಾಗಿತ್ತು. ಈ ಇಬ್ಬರೂ ಭಿನ್ನ ಧರ್ಮಕ್ಕೆ ಸೇರಿದವರು ಎಂಬ ಕಾರಣದಿಂದಲೇ, ಈ ಸುದ್ದಿ ಹೆಚ್ಚು ಸದ್ದು ಮಾಡಿತ್ತು. ಆದರೆ ಆನಂತರ ನಡೆದ ಇಂತಹ ಹಲವು ಪ್ರಕರಣಗಳಲ್ಲಿ ಸಂಗಾತಿಗಳಿಬ್ಬರೂ ಒಂದೇ ಧರ್ಮದವರಾಗಿದ್ದರು. ಈಚೆಗೆ ಮುಂಬೈನಲ್ಲಿ ಪತ್ತೆಯಾದ ಇಂಥದ್ದೇ ಪ್ರಕರಣದಲ್ಲಿ ಸಂತ್ರಸ್ತೆ ಮತ್ತು ಆರೋಪಿ ಇಬ್ಬರೂ ಒಂದೇ ಧರ್ಮದವರಾಗಿದ್ದರು. ಇಂತಹ ಕೃತ್ಯಗಳಿಗೂ ಧರ್ಮಕ್ಕೂ ಸಂಬಂಧವಿಲ್ಲ, ಬದಲಿಗೆ ವ್ಯಕ್ತಿಯ ಸಾಮಾಜೀಕರಣ ಮತ್ತು ಮಾನಸಿಕ ಆರೋಗ್ಯದ ಸ್ಥಿತಿ ಇಂತಹ ಕೃತ್ಯಗಳಿಗೆ ಕಾರಣವಾಗುತ್ತವೆ ಎಂಬುದರತ್ತ ಹಲವು ಅಧ್ಯಯನ ವರದಿಗಳು ಬೆಳಕು ಚೆಲ್ಲಿವೆ.

ಅಮೆರಿಕ, ಬ್ರಿಟನ್, ಜರ್ಮನಿ, ಪೋಲೆಂಡ್‌ನಲ್ಲಿ ಇಂತಹ ಪ್ರಕರಣಗಳ ಬಗ್ಗೆ ಕೂಲಂಕಷವಾದ ಅಧ್ಯಯನಗಳು ನಡೆದಿವೆ. ಭಾರತದಲ್ಲಿ ಸಮಗ್ರವಾದ ಅಧ್ಯಯನಗಳು ನಡೆದಿಲ್ಲವಾದರೂ, ಭಾರತೀಯ ಮನೋವಿಜ್ಞಾನಿಗಳು ಇಂತಹ ಅಧ್ಯಯನಗಳಲ್ಲಿ ಭಾಗಿಯಾಗಿದ್ದಾರೆ.

ಭಾರತದಲ್ಲಿ ಎಲ್ಲಾ ಸ್ವರೂಪದ ಅಪರಾಧ ಕೃತ್ಯಗಳನ್ನು 'ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ–ಎನ್‌ಸಿಆರ್‌ಬಿ' ದಾಖಲಿಸುತ್ತದೆ. ಎನ್‌ಸಿಆರ್‌ಬಿ ಈವರೆಗೆ ದಾಖಲಿಸಿದ ಹತ್ಯೆಗಳಲ್ಲಿ, ಅವುಗಳನ್ನು ವರ್ಗೀಕರಿಸಿಲ್ಲ. ವ್ಯಾಜ್ಯ–ಸಂಘರ್ಷ, ಹಣಕಾಸು–ಸ್ವತ್ತಿನ ಲಾಭಕ್ಕಾಗಿ ಹತ್ಯೆಗಳು ನಡೆದವು ಎಂದಷ್ಟೇ ಎನ್‌ಸಿಆರ್‌ಬಿ ವರ್ಗೀಕರಿಸುತ್ತದೆ. ಹತ್ಯೆ ಮತ್ತು ದೇಹವನ್ನು ಕತ್ತರಿಸುವ ಕೃತ್ಯಗಳು ದೇಶದಲ್ಲಿ ಈ ಹಿಂದೆಯೂ ನಡೆದಿವೆ. ಆದರೆ, ಅವುಗಳನ್ನು ಎನ್‌ಸಿಆರ್‌ಬಿ ಪ್ರತ್ಯೇಕವಾಗಿ ವರ್ಗೀಕರಿಸಿಲ್ಲ. ಹೀಗಾಗಿ ದೇಶದಲ್ಲಿ ನಡೆದ ಇಂತಹ ಕೃತ್ಯಗಳ ಸಂಖ್ಯೆಯ ಮಾಹಿತಿ ಲಭ್ಯವಿಲ್ಲ.

ಪೋಲೆಂಡ್ ಮತ್ತು ಜರ್ಮನಿಯಲ್ಲಿ ನಡೆದ ಇಂತಹ ಕೃತ್ಯಗಳನ್ನು ಮನೋವಿಜ್ಞಾನಿಗಳು ಕೂಲಂಕಷವಾಗಿ ಅಧ್ಯಯನ ಮಾಡಿದ್ದಾರೆ. ಈ ರೀತಿಯ ಕೃತ್ಯಗಳಲ್ಲಿ ಶೇ 76ರಷ್ಟು ಪ್ರಕರಣಗಳಲ್ಲಿ ಸಂತ್ರಸ್ತರು ಮಹಿಳೆಯರೇ ಆಗಿರುತ್ತಾರೆ. ಭಾರತದ ಸಂದರ್ಭದಲ್ಲಿ ನಡೆದ ಕೃತ್ಯಗಳಲ್ಲೂ ಪರಿಸ್ಥಿತಿ ಸರಿಸುಮಾರು ಇದೇ ರೀತಿ ಇದೆ ಎಂಬುದು ಐಇಎಸ್‌ಆರ್‌ಎಫ್ ನಡೆಸಿದ ಅಧ್ಯಯನ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಪುರುಷರು ಇಂತಹ ಕೃತ್ಯಗಳನ್ನು ಎಸಗಿದ ಬಹುತೇಕ ಪ್ರಕರಣಗಳಲ್ಲಿ, ಸಂಗಾತಿಯ ಮೇಲೆ ಪಾರಮ್ಯ ಸಾಧಿಸುವ ಉದ್ದೇಶ ಹೊಂದಿದ್ದರು. ಪುರುಷನು ಇಂತಹ ಕೃತ್ಯಗಳನ್ನು ಎಸಗಿದ ಪ್ರಕರಣಗಳನ್ನು ಈ ಅಧ್ಯಯನಗಳಲ್ಲಿ ವಿಶೇಷವಾಗಿ ಗಮನಿಸಲಾಗಿದೆ. ಇಂತಹ ಕೃತ್ಯ ಎಸಗಿದವರಲ್ಲಿ ಯಾರೊಂದಿಗೂ ಹೆಚ್ಚು ಬೆರೆಯದ, ಕೀಳರಿಮೆ ಹೊಂದಿರುವ ಪುರುಷರ ಪ್ರಮಾಣವೇ ಹೆಚ್ಚು. ಬಹುತೇಕ ಸಂದರ್ಭಗಳಲ್ಲಿ ಈ ಕೃತ್ಯ ಎಸಗಿದ ಪುರುಷ ನಿರುದ್ಯೋಗಿ ಆಗಿರುತ್ತಾನೆ ಮತ್ತು ಜೀವನಕ್ಕಾಗಿ ತನ್ನ ಸಂಗಾತಿಯ ದುಡಿಮೆಯನ್ನೇ ಅವಲಂಬಿಸಿರುತ್ತಾನೆ. ಇದು ಆತನ ಕೀಳರಿಮೆಯನ್ನು ಇನ್ನಷ್ಟು ಹೆಚ್ಚಿಸಿರುತ್ತದೆ. ತನ್ನ ಹೆಂಡತಿ ಅಥವಾ ಸಹಜೀವನ ಸಂಗಾತಿಯ ಮೇಲೆ ಹಿಡಿತ ಸಾಧಿಸುವ ಮೂಲಕ ಆತ ಆ ಕೀಳರಿಮೆಯಿಂದ ಹೊರಗೆ ಬರಲು ಯತ್ನಿಸುತ್ತಾನೆ ಎಂಬುದನ್ನು ಈ ಅಧ್ಯಯನಗಳಲ್ಲಿ ಕಂಡುಕೊಳ್ಳಲಾಗಿದೆ.



ಹತ್ಯೆಯಾದ ಶ್ರದ್ಧಾ ವಾಲ್ಕರ್ ಅವರಿಗೆ ಮುಂಬೈನ ಗುರುಕುಲ ಕಲಾ ಶಾಲೆಯ ವಿದ್ಯಾರ್ಥಿಗಳು ಶ್ರದ್ಧಾಂಜಲಿ ಸಲ್ಲಿಸಿದ್ದರು

ಸಂಗಾತಿಯ ಮೇಲೆ ಪಾರಮ್ಯ ಸಾಧಿಸುವ ಕಾರಣದಿಂದಲೇ ಅಂತಹ ಸಂಬಂಧಗಳಲ್ಲಿ ಬಿರುಕು ಉಂಟಾಗಿರುತ್ತದೆ. ಯಾವುದೋ ಒಂದು ಜಗಳ ಅಥವಾ ಸಂಘರ್ಷದ ಹಂತದಲ್ಲಿ ಹತ್ಯೆ ನಡೆದುಹೋಗುತ್ತದೆ. ಕೃತ್ಯ ಅಲ್ಲಿಗೇ ನಿಂತು ಹೋದರೆ, ಅದು ಸಾಮಾನ್ಯ ಹತ್ಯೆ ಪ್ರಕರಣವಷ್ಟೇ ಆಗುತ್ತದೆ. ಆದರೆ, ಕೊಲೆಯಾದ ವ್ಯಕ್ತಿಯ ದೇಹವನ್ನು ವಿಲೇವಾರಿ ಮಾಡುವ ರೀತಿಯೇ ಇಂತಹ ಪ್ರಕರಣಗಳನ್ನು ಭೀಕರವಾಗಿಸುತ್ತವೆ ಎಂಬುದನ್ನು ಈ ಅಧ್ಯಯನ ವರದಿಗಳು ವಿವರಿಸುತ್ತವೆ.

ವ್ಯಕ್ತಿಯೊಬ್ಬ ತಾನೇ ಕೊಲೆ ಮಾಡಿದ ಸಂತ್ರಸ್ತ/ಸಂತ್ರಸ್ತೆಯ ದೇಹವನ್ನು ತುಂಡರಿಸುವ ಕೃತ್ಯವನ್ನು 'ಡಿಸ್‌ಮೆಂಬರಿಂಗ್ ಕಿಲ್ಲಿಂಗ್' ಎಂದು ಕರೆಯಲಾಗುತ್ತದೆ. ಡಿಸ್‌ಮೆಂಬರಿಂಗ್ ಎಂದರೆ ದೇಹದ ಭಾಗಗಳನ್ನು ತುಂಡರಿಸುವುದು ಎಂದರ್ಥ. ಆದರೆ ಆರೋಪಿಯು ಅಥವಾ ಅಪರಾಧಿಯು ಸತ್ತವರ ದೇಹವನ್ನು ಏಕೆ ತುಂಡರಿಸಿದ ಎಂಬುದನ್ನು ವಿವರಿಸಲು ಅಪರಾಧಶಾಸ್ತ್ರದಲ್ಲಿ ಒತ್ತು ನೀಡಲಾಗುತ್ತದೆ. ಈ ಹಂತದಲ್ಲಿ ಆರೋಪಿ ಅಥವಾ ಅಪರಾಧಿಯ ಮನಃಸ್ಥಿತಿ ಏನಾಗಿತ್ತು ಎಂಬುದರತ್ತ ಈ ಪರಿಶೀಲನೆ ಗಮನ ಕೇಂದ್ರೀಕರಿಸುತ್ತದೆ. ಹೀಗೆ ತಾನೇ ಕೊಂದ ವ್ಯಕ್ತಿಯ ದೇಹವನ್ನು ತುಂಡರಿಸುವ ಕೃತ್ಯಗಳನ್ನು ಮುಖ್ಯವಾಗಿ 'ರಕ್ಷಣಾತ್ಮಕ ಮತ್ತು ಆಕ್ರಮಣಕಾರಿ' ಎಂದು ವರ್ಗೀಕರಿಸಲಾಗಿದೆ. ಇದಲ್ಲದೆ, ವಾಮಾಚಾರ ಮತ್ತು ಅತೀಂದ್ರಿಯ ಶಕ್ತಿಸಾಧನೆಗಾಗಿ ನಡೆಸುವ ಇಂತಹ ಕೃತ್ಯಗಳನ್ನು 'ನೆಕ್‌ರೊಮ್ಯಾಂಟಿಕ್' ಎಂದು ಕರೆಯಲಾಗಿದೆ.

ವ್ಯಕ್ತಿ ತಾನು ಕೊಂದ ಸಂತ್ರಸ್ತ/ಸಂತ್ರಸ್ತೆಯ ದೇಹವನ್ನು ಬಚ್ಚಿಡುವ ಅಥವಾ ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ಕತ್ತರಿಸುವುದನ್ನು ರಕ್ಷಣಾತ್ಮಕ ಕೃತ್ಯ ಎಂದು ವರ್ಗೀಕರಿಸಲಾಗುತ್ತದೆ. ಸಂತ್ರಸ್ತ ಅಥವಾ ಸಂತ್ರಸ್ತೆಯ ಮೇಲಿನ ಆಕ್ರೋಶ ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದ ದೇಹವನ್ನು ಕತ್ತರಿಸಿದರೆ, ಅದನ್ನು ಆಕ್ರಮಣಕಾರಿ ಕೃತ್ಯ ಎಂದು ಪರಿಗಣಿಸಲಾಗುತ್ತದೆ. ಭಾರತದಲ್ಲಿ ಎರಡೂ ರೀತಿಯ ಕೃತ್ಯಗಳು ವರದಿಯಾಗಿವೆ. ವಾಮಾಚಾರಕ್ಕಾಗಿ ನಡೆಸಿದ ಇಂತಹ ಕೃತ್ಯಗಳೂ ವರದಿಯಾಗಿವೆ. ಆದರೆ, ಕೃತ್ಯದ ಭೀಕರತೆಯ ಕಾರಣಕ್ಕಾಗಿ ಇಂತಹ ಪ್ರಕರಣಗಳು ಹೆಚ್ಚು ಸುದ್ದಿಯಾಗುತ್ತವೆ ಎಂದು ಈ ಅಧ್ಯಯನ ವರದಿಗಳಲ್ಲಿ ವಿಶ್ಲೇಷಿಸಲಾಗಿದೆ.

ಮಾಧ್ಯಮ ವರದಿಗಳು ಕಾರಣವೇ?

ಇಂತಹ ಒಂದು ಕೃತ್ಯ ವರದಿಯಾದರೆ, ಅದರ ಬೆನ್ನಲ್ಲೇ ಅಂತಹ ಹಲವು ಕೃತ್ಯಗಳು ವರದಿಯಾಗುತ್ತವೆ. ಶ್ರದ್ಧಾ ವಾಲ್ಕರ್ ಹತ್ಯೆ ಪ್ರಕರಣವನ್ನು ಮಾಧ್ಯಮಗಳು ದೀರ್ಘಕಾಲದವರೆಗೆ ವರದಿ ಮಾಡಿದ್ದವು. ಆ ಕಾರಣದಿಂದಲೇ ಇಂತಹ ಹಲವು ಕೃತ್ಯಗಳು ದೇಶದಾದ್ಯಂತ ಮರುಕಳಿಸಿದವು ಎಂಬ ಪ್ರತಿಪಾದನೆ ಇದೆ. ಆದರೆ, ಈ ಅಧ್ಯಯನಗಳಲ್ಲಿ ಬೇರೆಯದ್ದೇ ಅಂಶವು ಪತ್ತೆಯಾಗಿದೆ.

ಮಾಧ್ಯಮಗಳಲ್ಲಿ ಈ ರೀತಿಯ ಕೃತ್ಯಗಳನ್ನು ಹೆಚ್ಚು ಪ್ರಸಾರ ಮಾಡುವುದರಿಂದ ಅಥವಾ ವರದಿ ಮಾಡುವುದರಿಂದ ಅಂತಹ ಕೃತ್ಯ ಎಸಗುವ ಪ್ರಚೋದನೆ ಉಂಟಾಗುವ ಪ್ರಮಾಣ ತೀರಾ ಕಡಿಮೆ ಎಂದು ಈ ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಬದಲಿಗೆ ಸಿನಿಮಾ ಮತ್ತು ಪುಸ್ತಕಗಳಲ್ಲಿ ಇಂತಹ ಕೃತ್ಯಗಳ ವಿವರವಿದ್ದರೆ, ಅದು ಹೆಚ್ಚು ಪ್ರಭಾವಿಸುತ್ತದೆ. ಅಧ್ಯಯನದಲ್ಲಿ ಭಾಗಿಯಾಗಿದ್ದ ಅಪರಾಧಿಗಳು ಮತ್ತು ಆರೋಪಿಗಳು ಇದನ್ನೇ ಹೇಳಿದ್ದಾರೆ ಎಂದು ಅಧ್ಯಯನ ವರದಿಗಳಲ್ಲಿ ಉಲ್ಲೇಖಿಸಲಾಗಿದೆ.

ಆದರೆ, ಇಂತಹ ಪ್ರಕರಣಗಳ ಕುರಿತು ವರದಿ ಮಾಡುವಾಗ ಮಾಧ್ಯಮಗಳು ಹೆಚ್ಚು ಸೂಕ್ಷ್ಮವಾಗಿರಬೇಕು ಎಂದೂ ಅಧ್ಯಯನ ವರದಿಗಳಲ್ಲಿ ಶಿಫಾರಸು ಮಾಡಲಾಗಿದೆ.

ಏರಿಕೆಯಾಗುತ್ತಿದೆಯೇ?

ಇಂತಹ ಪ್ರಕರಣಗಳು ಹೊಸತೇನೂ ಅಲ್ಲ. ಬಹಳ ಹಿಂದಿನಿಂದಲೂ ಮನುಷ್ಯ ಇಂತಹ ಕೃತ್ಯಗಳನ್ನು ಎಸಗುತ್ತಿದ್ದಾನೆ ಎಂಬುದು ದಾಖಲಾಗಿದೆ. ಗ್ರೀಕ್ ಪುರಾಣಗಳಲ್ಲಿ ಇಂತಹ ದಾಖಲೆಗಳಿವೆ. ಜತೆಗೆ ಐತಿಹಾಸಿಕ ದಾಖಲೆಗಳಲ್ಲೂ ಇಂತಹ ಕೃತ್ಯಗಳ ಉಲ್ಲೇಖ ಇದೆ. ಆಧುನಿಕೋತ್ತರ ಜಗತ್ತಿನಲ್ಲೂ ಇಂತಹ ಕೃತ್ಯಗಳು ಸರ್ವೇಸಾಮಾನ್ಯ ಎಂಬಂತಾಗಿವೆ. ಆದರೆ, ಯಾವುದೋ ಒಂದು ಭೀಕರ ಕೃತ್ಯ ವರದಿಯಾದಾಗ, ಅಂಥದ್ದೇ ಹಲವು ಕೃತ್ಯಗಳತ್ತ ಹೆಚ್ಚು ಗಮನ ಹೋಗುತ್ತದೆ. ಹೀಗಾಗಿಯೇ ಆಗಾಗ್ಗೆ ಇಂತಹ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ ಎಂದು ಭಾಸವಾಗುತ್ತದೆ ಎಂದು ಅಧ್ಯಯನ ವರದಿಗಳಲ್ಲಿ ವಿವರಿಸಲಾಗಿದೆ.

ಭಾರತದಲ್ಲಿ ಈ ಹಿಂದೆ ಇಂತಹ ಕೃತ್ಯಗಳು ನಡೆದಾಗ, ದೇಹದ ಭಾಗಗಳನ್ನು ನಿರ್ಜನ ಪ್ರದೇಶದಲ್ಲಿ ಅಥವಾ ಹೆದ್ದಾರಿ ಬದಿಯಲ್ಲಿ ಅಥವಾ ಕಾಡುಗಳಲ್ಲಿ ಅಥವಾ ಕೆರೆ–ನದಿಗಳಲ್ಲಿ ಬಿಸಾಡುವ ಪರಿಪಾಟ ಇತ್ತು. ಆದರೆ, ಅತಿಯಾದ ನಗರೀಕರಣದಿಂದಾಗಿ ಹೀಗೆ ಬಿಸಾಡುವ ಸಾಧ್ಯತೆಗಳು ಕ್ಷೀಣಿಸಿವೆ. ಗ್ರಾಮೀಣ ಪ್ರದೇಶದಲ್ಲಿ ಇಂತಹ ಕೃತ್ಯಗಳು ನಡೆದರೂ ದೇಹವನ್ನು ಬಿಸಾಡುವ ಅವಕಾಶ ಹೆಚ್ಚು ಇರುತ್ತದೆ. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ಅಂತಹ ಕೃತ್ಯ ನಡೆದರೂ ಅದು ಹೆಚ್ಚು ಸುದ್ದಿಯಾಗುವುದಿಲ್ಲ ಎಂದು ವರದಿಗಳಲ್ಲಿ ವಿವರಿಸಲಾಗಿದೆ.

ನಗರ ಪ್ರದೇಶಗಳಲ್ಲಿ ಇಂತಹ ಕೃತ್ಯ ನಡೆದಾಗ, ದೇಹವನ್ನು ಬಿಸಾಡುವ ಸಾಧ್ಯತೆ ತೀರಾ ಕಡಿಮೆ ಇರುತ್ತದೆ. ಹೀಗಾಗಿಯೇ ಹಲವು ಪ್ರಕರಣಗಳಲ್ಲಿ ದೇಹದ ತುಂಡುಗಳನ್ನು ಫ್ರಿಡ್ಜ್‌ನಲ್ಲಿ ಇಡುವ, ಕುಕ್ಕರ್‌ನಲ್ಲಿ ಬೇಯಿಸಿ ನಾಯಿಗಳಿಗೆ ತಿನ್ನಿಸುವ ಸ್ವರೂಪದ ಕೃತ್ಯಗಳ ಮೊರೆ ಹೋಗಿರುವುದನ್ನು ಆರೋಪಿಗಳು ಅಥವಾ ಅಪರಾಧಿಗಳು ಒಪ್ಪಿಕೊಂಡಿದ್ದಾರೆ. ಕೊಲೆ ಮಾಡಿ ದೇಹವನ್ನು ತುಂಡರಿಸುವುದು ಹೊಸತಲ್ಲವಾದರೂ, ಕತ್ತರಿಸಿದ ದೇಹದ ಭಾಗಗಳನ್ನು ಫ್ರಿಡ್ಜ್‌ನಲ್ಲಿ ಇಡುವುದು ಭಾರತಕ್ಕೆ ಹೊಸತು. ಈ ಕಾರಣದಿಂದಲೇ ಇಂತಹ ಕೃತ್ಯಗಳು ಹೆಚ್ಚು ಗಮನ ಸೆಳೆಯುತ್ತವೆ ಎಂದು ಈ ವರದಿಗಳಲ್ಲಿ ವಿವರಿಸಲಾಗಿದೆ.

ಭಾರತದಲ್ಲಿ ಈಚೆಗೆ ಇಂತಹ ಕೃತ್ಯಗಳು ಹೆಚ್ಚು ವರದಿಯಾಗುತ್ತಿವೆ. ಆದರೆ, ಇಂತಹ ಕೃತ್ಯಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಿ ದಾಖಲಿಸುವ ಪರಿಪಾಟ ಇಲ್ಲ. ಹೀಗಾಗಿ ಈ ಹಿಂದೆ ಇಂತಹ ಎಷ್ಟು ಕೃತ್ಯಗಳು ನಡೆದಿದ್ದವು ಮತ್ತು ಈಗ ಅವುಗಳ ಸಂಖ್ಯೆ ಏರಿಕೆಯಾಗಿದೆಯೇ ಎಂಬುದನ್ನು ವಿವರಿಸುವ ನಿಖರ ದತ್ತಾಂಶ ಲಭ್ಯವಿಲ್ಲ.

ಆಧಾರ: ಐಇಎಸ್‌ಆರ್‌ಎಫ್‌ನ ಹೋಮಿಸೈಡ್ ಅಂಡ್ ಕಾರ್ಪಸ್ ಡಿಸ್‌ಮೆಂಬರ್‌ಮೆಂಟ್ ಅಧ್ಯಯನ ವರದಿ, ವಿಶ್ವಸಂಸ್ಥೆಯ 'ಗ್ಲೋಬಲ್ ಸ್ಟಡಿ ಆನ್ ಹೋಮಿಸೈಡ್' ವರದಿ, ಅಮೆರಿಕದ ಜೈವಿಕ ತಂತ್ರಜ್ಞಾನ ಸಚಿವಾಲಯದ 'ದಿ ಸೈಕಾಲಜಿ ಆಫ್ ಮರ್ಡರ್ ಕನ್ಸೀಲ್‌ಮೆಂಟ್ ಆ್ಯಕ್ಟ್ಸ್', ಬಿಬಿಸಿ

ಸಿನಿ ಬಿಟ್ಸ್

ತೆಲುಗಿನಲ್ಲಿ 'ಭೀಮ'ನಾದ ಗೋಪಿಚಂದ್!



ಭೀಮ ಚಿತ್ರದ ಫಸ್ಟ್‌ಲುಕ್

ಸ್ಯಾಂಡಲ್‌ವುಡ್‌ನಲ್ಲಿ 'ದುನಿಯಾ' ವಿಜಯ್ ನಟಿಸುತ್ತಿರುವ 'ಭೀಮ' ತೆರೆಕಾಣಲು ಸಜ್ಜಾಗುತ್ತಿರುವ ಬೆನ್ನಲ್ಲೇ ತೆಲುಗಿನಲ್ಲಿ 'ಭೀಮ' ಎಂಬ ಶೀರ್ಷಿಕೆಯ ಸಿನಿಮಾ ಸೆಟ್ಟೇರಿದೆ.

ಕನ್ನಡದಲ್ಲಿ 'ಭಜರಂಗಿ', 'ವಜ್ರಕಾಯ', 'ವೇದ' ಹೀಗೆ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿರುವ ಎ.ಹರ್ಷ ಇದೀಗ ಟಾಲಿವುಡ್ ಅಂಗಳಕ್ಕೆ ಹೆಜ್ಜೆ ಇಟ್ಟಿದ್ದಾರೆ. ತೆಲುಗಿನ ಖ್ಯಾತ ನಟ ಗೋಪಿಚಂದ್ ಅವರಿಗೆ ಹರ್ಷ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎನ್ನುವುದು ಮೊದಲೇ ಸುದ್ದಿಯಾಗಿತ್ತು. ಎರಡು ತಿಂಗಳ ಹಿಂದೆ ಚಿತ್ರದ ಮುಹೂರ್ತವೂ ನಡೆದಿತ್ತು. ಆದರೆ ಚಿತ್ರದ ಶೀರ್ಷಿಕೆ ಘೋಷಣೆಯಾಗಿರಲಿಲ್ಲ. ಇದೀಗ ಗೋಪಿಚಂದ್ ಅವರ ಜನ್ಮದಿನದ ಸಂದರ್ಭದಲ್ಲಿ ಸಿನಿಮಾದ ಟೈಟಲ್ ಹಾಗೂ ಫಸ್ಟ್‌ಲುಕ್ ಅನ್ನು ಚಿತ್ರತಂಡ ಘೋಷಿಸಿದೆ.

'ಭೀಮ'ನಾಗಿ 'ಮ್ಯಾಚೋ ಸ್ಟಾರ್' ಇಲ್ಲಿ ಕಾಣಿಸಿಕೊಂಡಿದ್ದು, ಪೊಲೀಸ್ ಅಧಿಕಾರಿಯಾಗಿ ತೆರೆ ಮೇಲೆ ಬರಲಿದ್ದಾರೆ. ಮುಖದ ಮೇಲೆ ಗಾಯದ ಗುರುತು, ಉಗ್ರ ರೂಪಿಯಾಗಿ ತೀಕ್ಷ್ಣ ನೋಟದ ಗೋಪಿಚಂದ್ ಹೊಸ ಅವತಾರದಲ್ಲಿ ಇಲ್ಲಿ ಕಾಣಿಸಿಕೊಂಡಿದ್ದಾರೆ.

ಇದು ಗೋಪಿಚಂದ್ ಅವರ 31ನೇ ಸಿನಿಮಾ. ತೆಲುಗಿನಲ್ಲಿ ಎ.ಹರ್ಷ ಆ್ಯಕ್ಷನ್ ಕಟ್ ಹೇಳುತ್ತಿರುವ ಮೊದಲ ಸಿನಿಮಾ ಇದಾಗಿದೆ. 'ಭೀಮ' ಕೌಟುಂಬಿಕ ಹಾಗೂ ಆ್ಯಕ್ಷನ್ ಎಂಟರ್‌ಟೈನರ್ ಕಥಾಹಂದರ ಹೊಂದಿದೆ. ಕೆ.ಕೆ.ರಾಧಾ ಮೋಹನ್ ಶ್ರೀ ಸತ್ಯ ಸಾಯಿ ಆರ್ಟ್ಸ್ ಪ್ರೊಡಕ್ಷನ್‌ನಡಿ ಅದ್ಧೂರಿಯಾಗಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ ಎಂದಿದೆ ಚಿತ್ರತಂಡ.



ಎ.ಹರ್ಷ

'ಭೀಮ' ಶ್ರೀ ಸತ್ಯ ಸಾಯಿ ಆರ್ಟ್ಸ್ ಬ್ಯಾನರ್‌ನಡಿ ನಿರ್ಮಾಣವಾಗುತ್ತಿರುವ 14ನೇ ಸಿನಿಮಾ. ಸ್ವಾಮಿ. ಜೆ ಛಾಯಾಚಿತ್ರಗ್ರಹಣ, ರವಿ ಬಸ್ರೂರ್ ಸಂಗೀತ ನಿರ್ದೇಶನ, ಅಜ್ಜು ಮಹಂಕಾಳಿ ಸಂಭಾಷಣೆ, ವೆಂಕಟ್ ಹಾಗೂ ರವಿವರ್ಮಾ ಸಾಹಸ ನಿರ್ದೇಶನ ಚಿತ್ರಕ್ಕಿದೆ.

ಸದ್ಯ ಹೈದರಾಬಾದ್‌ನ ಅಲ್ಯೂಮಿನಿಯಂ ಫ್ಯಾಕ್ಟರಿಯಲ್ಲಿ ಚಿತ್ರದ ಸಾಹಸ ದೃಶ್ಯಗಳ ಚಿತ್ರೀಕರಣ ನಡೆಯುತ್ತಿದ್ದು, ನಾಯಕಿ ಹಾಗೂ ಉಳಿದ ತಾರಾಬಳಗದ ಬಗ್ಗೆ ಶೀಘ್ರದಲ್ಲೇ ಮಾಹಿತಿ ನೀಡುವುದಾಗಿ ಚಿತ್ರತಂಡ ತಿಳಿಸಿದೆ.

ಕರ್ನಾಟಕದಲ್ಲಿ ಕೆ.ಆರ್‌.ಜಿ.ಯಿಂದ 'ಆದಿಪುರಷ್' ಬಿಡುಗಡೆ

ಸ್ಯಾಂಡಲ್‌ವುಡ್‌ನ ಇತ್ತೀಚಿನ ಹಿಟ್ ಸಿನಿಮಾಗಳಾದ 'ಕೆ.ಜಿ.ಎಫ್' ಸರಣಿ, 'ಕಾಂತಾರ', '777 ಚಾರ್ಲಿ', 'ಗಂಧದಗುಡಿ' ಮುಂತಾದ ಚಿತ್ರಗಳನ್ನು ಬಿಡುಗಡೆ ಮಾಡಿರುವ ಕೆ.ಆರ್.ಜಿ ಸ್ಟುಡಿಯೋಸ್ ಇದೀಗ ಪ್ರಭಾಸ್ ನಟನೆಯ 'ಆದಿಪುರುಷ್' ಚಿತ್ರವನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡಲಿದೆ.

'ಆದಿಪುರುಷ್ ಚಿತ್ರದ ಕರ್ನಾಟಕದ ವಿತರಣೆ ನಮಗೆ ಸಿಕ್ಕಿರುವುದು ಬಹಳ ಹೆಮ್ಮೆಯ ಸಂಗತಿ. ಜೂನ್ 16ರಂದು ಸಿನಿಮಾ ತೆರೆಕಾಣುತ್ತಿದ್ದು, 3ಡಿಯಲ್ಲೂ ಚಿತ್ರವನ್ನು ಪ್ರೇಕ್ಷಕರು ವೀಕ್ಷಿಸಬಹುದಾಗಿದೆ ' ಎಂದಿದ್ದಾರೆ ಹೊಂಬಾಳೆ ಫಿಲ್ಮ್ಸ್ ಕಾರ್ಯಕಾರಿ ನಿರ್ಮಾಪಕ ಮತ್ತು ಕೆ.ಆರ್. ಜಿ. ಸ್ಟುಡಿಯೋಸ್ ಸಂಸ್ಥೆಯ ಸಂಸ್ಥಾಪಕ ಕಾರ್ತಿಕ್ ಗೌಡ.



ಆದಿಪುರುಷ್ ಚಿತ್ರದಲ್ಲಿ ಪ್ರಭಾಸ್

'ರಾಮಾಯಣ'ದ ಕಥಾಹಂದರವಿರುವ ಈ ಚಿತ್ರ ಟಿ. ಸೀರೀಸ್ ಮತ್ತು ರೆಟ್ರೋಫಿಲ್ಸ್ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಿರ್ಮಾಣವಾಗಿದೆ. ಈ ಚಿತ್ರಕ್ಕೆ ಕಥೆ ಹೆಣೆದು ನಿರ್ದೇಶನ ಮಾಡುತ್ತಿರುವುದು ಓಂ ರಾವತ್. 'ಆದಿಪುರುಷ್' ಚಿತ್ರವು ಏಕಕಾಲಕ್ಕೆ ಹಿಂದಿ ಮತ್ತು ತೆಲುಗು ಭಾಷೆಗಳಲ್ಲಿ ತಯಾರಾಗಿದೆ. ಕನ್ನಡ, ಮಲಯಾಳಂ, ತಮಿಳು ಭಾಷೆಗಳಿಗೂ ಸಿನಿಮಾ ಡಬ್ ಆಗಿದೆ. ಚಿತ್ರದ ತಾರಾಗಣದಲ್ಲಿ ಪ್ರಭಾಸ್, ಕ್ರಿತಿ ಸನೋನ್, ಸೈಫ್ ಅಲಿ ಖಾನ್, ಸನ್ನಿ ಸಿಂಗ್, ದೇವದತ್ತ ನಾಗೇ ಮುಂತಾದ ಕಲಾವಿದರಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉತ್ತರ ಪ್ರದೇಶದ ಬುಲಂದ್‌ಶಹರ್ ಜಿಲ್ಲೆಯ ಬರಾಲ್ ಗ್ರಾಮದ ದೇವಾಲಯದ ದೇವರ ಮೂರ್ತಿಗಳನ್ನು ಜೂನ್ 1ರ ಬೆಳಗಿನ ಜಾವದ ಹೊತ್ತಿಗೆ ಕಿಡಿಗೇಡಿಗಳು ವಿರೂಪಗೊಳಿಸಿದ್ದಾರೆ ಎನ್ನುವ ಸುದ್ದಿಯು ಸಾಮಾಜಿಕ ಜಾಲತಾಣದಲ್ಲಿ ಅತಿ ವೇಗವಾಗಿ ಹಂಚಿಕೆಯಾಗಿದೆ. ಹಮ್ ಲೋಗ್ ಎನ್ನುವ ಟ್ವಿಟರ್ ಖಾತೆಯು ಚಿತ್ರಸಹಿತವಾಗಿ ಈ ಸುದ್ದಿಯನ್ನು ಮೊದಲು ಹಂಚಿಕೊಂಡಿತ್ತು. ನಂತರ, 'ಜಿಹಾದಿಗಳೇ ಇದನ್ನು ಮಾಡಿದ್ದಾರೆ' ಎನ್ನುವಂತೆ ಮತ್ತೊಮ್ಮೆ ಇದೇ ಖಾತೆ ಬರೆದುಕೊಂಡಿತು. ಜೂನ್ 2ರ ನಂತರ ರಾಷ್ಟ್ರ ಮಟ್ಟದ ಹಲವು ಸುದ್ದಿವಾಹಿನಿಗಳು ಇದನ್ನು ಪ್ರಸಾರ ಮಾಡಿದವು. 'ಝೀ ಉತ್ತರ ಪ್ರದೇಶ್ ಉತ್ತರಾಖಂಡ್' ವಾಹಿನಿಯು 'ಬುಲಂದ್‌ಶಹರ್‌ದಲ್ಲಿ ಔರಂಗಜೇಬ್ ತರಹದ ಗುಂಪು?' ಎನ್ನುವ ಚರ್ಚಾ ಕಾರ್ಯಕ್ರಮ ಪ್ರಸಾರ ಮಾಡಿತು. 'ಆಜ್ ತಕ್'ನ ನಿರೂಪಕ, ಪತ್ರಕರ್ತ ಸುಧೀರ್ ಚೌಧರಿ ಅವರು ತಮ್ಮ 'ಬ್ಲಾಕ್ ಆ್ಯಂಡ್ ವೈಟ್' ಕಾರ್ಯಕ್ರಮದಲ್ಲೂ ಈ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ಇದು ಸುಳ್ಳು ಸುದ್ದಿ.

'ದೇವರ ವಿಗ್ರಹಗಳನ್ನು ಧ್ವಂಸ ಮಾಡಿದವರು ನಾಲ್ವರು ಹಿಂದೂಗಳು. ಕುಡಿದ ಅಮಲಿನಲ್ಲಿ ಈ ಕೃತ್ಯ ಎಸಗಿದ್ದಾರೆ' ಎಂದು ಬುಲಂದ್‌ಶಹರ್ ಎಸ್‌ಎಸ್‌ಪಿ ಶ್ಲೋಕ ಕುಮಾರ್ ಖಚಿತಪಡಿಸಿದ್ದಾರೆ. ಈ ಬಳಿಕ, 'ಹಿಂದೂಗಳೇ ಮೂರ್ತಿಗಳನ್ನು ಧ್ವಂಸ ಮಾಡಿದ್ದಾರೆ' ಎಂದು ಪತ್ರಕರ್ತ ಸುಧೀರ್ ಚೌಧರಿ ಅವರು ಟ್ವೀಟ್ ಮಾಡಿದ್ದಾರೆ. ವಿರೂಪಗೊಳಿಸಿದವರು ಮುಸ್ಲಿಮರು ಎಂಬುದು ಸುಳ್ಳು ಸುದ್ದಿ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜೂನ್ 13, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ದಶಮಿ ಗಂ. 09-29, ನಕ್ಷತ್ರ: ರೇವತಿ ಗಂ. 13-33 ಯೋಗ: ಸೌಭಾಗ್ಯ 05-55 ನಂತರ ಶೋಭನ ಗಂ. 28-18 ಕರಣ: ವಿಷ್ಟಿ ಗಂ. 09-29, ವೃಷಭ ಮಾಸದ 29 ನೇ ದಿನ, ಮಳೆನಕ್ಷತ್ರ: ಮೃಗಶಿರ 2. ರಾಹುಕಾಲ : ಸಾಯಂಕಾಲ 03-00 – 04-30
ಸೂರ್ಯೋದಯ : 06-07 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 24 ಜುಲ್ಕಾಯದ್
ಅದೃಷ್ಟ ಸಂಖ್ಯೆ : 9, 7

ಮೇಷ: ಹಿಂದಿನ ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ, ಹೊಸತನದಲ್ಲಿ ಜಯ ಕಾಣುವಿರಿ. ಇಂದು ಮಕ್ಕಳಿಂದ ಅಚ್ಚರಿಯ ಸುದ್ದಿ ಕೇಳುವಿರಿ. ಮುಖ್ಯ ಕೆಲಸವೊಂದು ದಿನದ ಅಂತ್ಯದ ವೇಳೆಗೆ ನೆರವೇರುವುದು.

ವೃಷಭ: ಉತ್ತಮ ಗುಣಗಳು ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಹಾಯ ಮಾಡುವುದು. ಪೂರ್ಣ ಪ್ರಮಾಣದ ಧರ್ಮ ಶ್ರದ್ಧಾ ಪೂರ್ವಕವಾಗಿ ಸ್ವಲ್ಪ ಶ್ರಮ ಪಟ್ಟರೆ ಎಲ್ಲವುದರಲ್ಲಿ ಜಯಗಳಿಸಬಹುದು.

ಮಿಥುನ: ಕರ್ತವ್ಯ ದೃಷ್ಟಿಯಿಂದ ವೃತ್ತಿಕ್ಷೇತ್ರದಲ್ಲಿ ಒಂದೇ ಮನಸ್ಸಿನಲ್ಲಿ ದುಡಿದರೆ ಸಮಾಧಾನ ಹೆಚ್ಚುತ್ತದೆ. ಬಾಲ್ಯದಲ್ಲಿ ಕಲಿತ ಕೆಲ ವಿಷಯಗಳು ಉಪಯೋಗಕ್ಕೆ ಬರಲಿದೆ. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮೇಲುಗೈ ಸಾಧಿಸುವಿರಿ.

ಕರ್ಕಾಟಕ: ನೂತನ ಸ್ನೇಹಿತನಿಂದ ಅಥವಾ ಅಪರಿಚಿತರ ವ್ಯಕ್ತಿಯ ಸಹಕಾರದಿಂದ ಕಾರ್ಯ ವ್ಯವಸ್ಥಿತವಾಗಿ ನಡೆಯಲಿದೆ. ತಾಯಿಯ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ಚಂಡಿಕಾ ಪಾರಾಯಣದಿಂದ ನೆಮ್ಮದಿ.

ಸಿಂಹ: ಗಣಪತಿಯ ಅನುಗ್ರಹದಿಂದ ಗೊಂದಲಗಳು ಸರಳವಾಗಿ ನಿವಾರಣೆಗೊಂಡು ಮನಸ್ಸು ತಿಳಿಯಾಗುವುದು. ಧೈರ್ಯದಿಂದ ಮತ್ತು ಅಧಿಕ ಪ್ರಯತ್ನ ಬಲದಿಂದ ಕಾರ್ಯದಲ್ಲಿ ಮುನ್ನುಗ್ಗಿ.

ಕನ್ಯಾ: ಪ್ರಭಾವಿ ವ್ಯಕ್ತಿಗಳೊಂದಿಗೆ ಹೆಚ್ಚಿನ ಸಂಪರ್ಕ ಉಪಕಾರಕ್ಕಿಂತ ತೊಂದರೆಗೆ ಮಾರ್ಗ ಹಾಕಿಕೊಟ್ಟ ಹಾಗೆ ಆಗುವುದು. ಪ್ರಮುಖ ವಿಚಾರದಲ್ಲಿ ಮುಂದಿನ ಹೆಜ್ಜೆಯಿಡಲು ಸೂಕ್ತ ಸಮಯವಲ್ಲ. ಸಾಂಸಾರಿಕ ಸುಖ ಹೆಚ್ಚಾಗುವುದು.

ತುಲಾ: ಶ್ರದ್ಧೆ, ತಾಳ್ಮೆಯಿಂದ ಹಾಗೂ ಹಿಂದಿನ ಸೋಲು ಹೇಳಿಕೊಟ್ಟ ಪಾಠದಿಂದ ಇಂದು ನಿಮ್ಮ ಕಾರ್ಯಸಿದ್ಧಿಯಾಗುವುದು. ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸುವುದು ಉತ್ತಮ. ವಾಹನ ಖರೀದಿ ಬೇಡ.

ವೃಶ್ಚಿಕ: ಕೆಲಸಗಳನ್ನು ಸಾಧಿಸಿಕೊಳ್ಳಲೇ ಬೇಕಿದ್ದರೆ ಅವಿರತ ಶ್ರಮ ಅಗತ್ಯ ಮತ್ತು ಅನಿವಾರ್ಯ. ಕನ್ಯೆಯ ವಿವಾಹದ ವಿಚಾರವಾಗಿ ಶುಭವಾಗುವ ಲಕ್ಷಣವಿದೆ. ಮಂಜುನಾಥನ ದರ್ಶನ ಭಾಗ್ಯದಿಂದ ಕಾರ್ಯಾನುಕೂಲವಾಗಲಿದೆ.

ಧನು: ಔದ್ಯೋಗಿಕ ವ್ಯವಹಾರದಲ್ಲಿ ನಿರೀಕ್ಷೆಗೆ ತಕ್ಕ ಅಥವಾ ಅದಕ್ಕೂ ಮಿಗಿಲಾದ ಫಲಗಳು ದೊರೆತು ಹೆಚ್ಚಿನ ನೆಮ್ಮದಿ ಕಾಣುವಂತಾಗುವುದು. ಯಾವುದನ್ನೇ ಆಗಲಿ ಸಾಧಿಸಿ ತೋರಿಸುವ ಶಕ್ತಿ ಸಾಮರ್ಥ್ಯವಿದೆ.

ಮಕರ: ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ಜಾಣತನದಿಂದ ಓದಿ ತಿಳಿದು ಒಪ್ಪಿಕೊಳ್ಳಿ. ಕೆಲಸವನ್ನು ಗುತ್ತಿಗೆ ನೀಡುವ ಆಲೋಚನೆ ಸಮಸ್ಯೆಗೆ ದಾರಿಯಾಗುವುದು.

ಕುಂಭ: ಅಭಿವೃದ್ಧಿಯಲ್ಲಿ ಹಲವು ಅಡೆತಡೆಗಳು ಮತ್ತು ಆತಂಕಕಾರಿ ವಿಚಾರಗಳು ಎದುರಾಗುವುದು. ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳಲೇ ಬೇಕಿದ್ದರೆ ಅವಿರತ ಶ್ರಮ ಮತ್ತು ಆರ್ಥಿಕ ಬಲ ಅಗತ್ಯ ಮತ್ತು ಅನಿವಾರ್ಯ.

ಮೀನ: ಯಾವ ಕೆಲಸಕ್ಕೆ ಪ್ರಾಮುಖ್ಯತೆ ಕೊಡಬೇಕೆಂದು ಯೋಚಿಸಿ ನಂತರದಲ್ಲಿ ಕಾರ್ಯಶೀಲರಾಗುವುದು ಉತ್ತಮ. ಉದ್ಯೋಗದಲ್ಲಿ ಪ್ರಗತಿ ಇರುವುದು. ಸಾಮಾಜಿಕ ಜನೋಪಕಾರದಿಂದ ಶ್ಲಾಘನೆ ಲಭಿಸಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಆತ್ಮಾಲಯದಲ್ಲಿ ವಿಹಾರ

ವಹಿಸು ಕೆಲಭಾರಗಳ; ಸಹಿಸು ಕೆಲ ನೋವುಗಳ |
ಪ್ರಹರಿಸರಿಗಳನನಿತು ಯುಕ್ತಗಳನರಿತು ||
ಮಹಿಯ ನಾಟಕದಿ ನೀಂ ಮನಸಿಟ್ಟು ಕುಣಿಕುಣಿದು |
ವಿಹರಿಸಾತ್ಮಾಲಯದಿ - ಮಂಕುತಿಮ್ಮ || 904 ||

ಪದ-ಅರ್ಥ: ಪ್ರಹರಿಸರಿಗಳನನಿತು = ಪ್ರಹರಿಸು-(ಹೊಡೆ) + ಅರಿಗಳನು(ವೈರಿಗಳನ್ನು) + ಅನಿತು-(ಆದಷ್ಟು), ಯುಕ್ತಗಳನರಿತ = ಯುಕ್ತಗಳನು(ಸರಿ ತಪ್ಪುಗಳನ್ನು) + ಅರಿತು, ಮಹಿಯ = ಭೂಮಿಯ, ವಿಹರಿಸಾತ್ಮಾಲಯದಿ = ವಿಹರಿಸು- + ಆತ್ಮ + ಆಲಯದಿ.

ವಾಚ್ಯಾರ್ಥ: ಜೀವನ ಪಥದಲ್ಲಿ ಕೆಲವು ಭಾರಗಳನ್ನು ತೆಗೆದುಕೊ. ಕೆಲವು ನೋವುಗಳನ್ನು ಸಹಿಸು. ಆದಷ್ಟು ನಿನ್ನ ವೈರಿಗಳನ್ನು ಬಗ್ಗುಬಡಿ. ಯುಕ್ತಾ-ಯುಕ್ತತೆಯನ್ನು ತಿಳಿದು ಈ ಪ್ರಪಂಚದ ನಾಟಕದಲ್ಲಿ ಮನವಿಟ್ಟು ಕುಣಿದಾಡು. ಆದರೆ ವಿಹರಿಸು ಆತ್ಮದ ಆಲಯದಲ್ಲಿ.

ವಿವರಣೆ: ನಾವು ಭೂಮಿಗೆ ಬಂದದ್ದಾಗಿದೆ. ಯಾವುದೋ ಪರಿಸರ, ಯಾವುದೊ ಭಾಷೆ, ಯಾವುದೋ ಜವಾಬ್ದಾರಿ. ಇವು ಯಾವವೂ ನಮ್ಮ ಅಪೇಕ್ಷೆಯಂತೆ ಆದವು ಅಲ್ಲ. ಇದರಲ್ಲಿ ನಾವು ಬದುಕಿರುವವರೆಗೆ ಇರಬೇಕು. ಹೇಗಿರಬೇಕು? ಈ ಕಗ್ಗ ಅದನ್ನು ಸುಂದರವಾಗಿ ಹೇಳುತ್ತದೆ. ನಮಗೆ ಎರಡು ಬದುಕುಗಳು. ಒಂದು ಭೌತಿಕವಾದ ಬದುಕು, ಮತ್ತೊಂದು ಪಾರಮಾರ್ಥಿಕವಾದ ಜೀವನ. ಭೌತಿಕವಾಗಿ ನಾವು ಈ ಪ್ರಪಂಚದಲ್ಲಿದ್ದೇವೆ. ಅದನ್ನು ತೊರೆದು ಹೋಗುವಂತಿಲ್ಲ. ಹೋಗುವುದಾದರೂ ಎಲ್ಲಿಗೆ? ಇಲ್ಲಿ ಇರುವಾಗ ನಮಗೆ ಕೆಲವು ಜವಾಬ್ದಾರಿಗಳು ಬರುತ್ತವೆ. ಅವುಗಳನ್ನು ನಿಭಾಯಿಸಲೇಬೇಕು. ಅದೂ ನಗುನಗುತ್ತಲೇ ವಹಿಸಿಕೊಳ್ಳಬೇಕು. ಅನಿವಾರ್ಯವಾಗಿ ಕೆಲವು ನೋವುಗಳು, ಕಷ್ಟ ಬಂದೇ ಬರುತ್ತವೆ.ಅವುಗಳನ್ನು ಸಹಿಸಿಕೊಳ್ಳದೆ ಬೇರೆ ದಾರಿ ಇಲ್ಲ. ನೋವುಗಳೇ ಪಾವಕವಾಗಬಹುದು. ಬದುಕೊಂದು ಯುದ್ಧ. ಹಾಗಾಗಿ ಶತ್ರುಗಳು ಹುಟ್ಟಿಕೊಳ್ಳುವುದು ಸಹಜ. ನಮಗೆ ಎರಡು ಬಗೆಯ ಶತ್ರುಗಳು. ನಮ್ಮ ಕಾರ್ಯಗಳಿಗೆ ಅಡ್ಡಲಾಗಿ ನಿಂತು, ಸದಾ ತೊಂದರೆ ಕೊಡುವ ವ್ಯಕ್ತಿಗಳು ಕೆಲವರಾದರೆ ನಮ್ಮೊಳಗೇ ಇದ್ದು ನಮ್ಮ ವ್ಯಕ್ತಿತ್ವವನ್ನು ಕುಗ್ಗಿಸುವ ಕೆಲಸ ಮಾಡುವವರು ಕೆಲವರು. ಅವರು ಕಣ್ಣಿಗೆ ಕಾಣಲಾರರು. ಅವರನ್ನು ಅರಿಷಡ್ವರ್ಗ ಎನ್ನುತ್ತಾರೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೇ ಆರು ವೈರಿಗಳು. ಎದುರಿಗೆ ಕಾಣುವ ಶತ್ರುಗಳನ್ನು ಎದುರಿಸುವುದಕ್ಕಿಂತ ಈ ಅಂತರಂಗದ ವೈರಿಗಳನ್ನು ಜಯಿಸುವುದು ಕಷ್ಟವಾದರೂ ಅವಶ್ಯಕ. ಅವುಗಳನ್ನು ಸರಿಯಾಗಿ ಹೊಡೆದು ನಿಗ್ರಹಿಸಬೇಕು ಎನ್ನುತ್ತದೆ ಕಗ್ಗ. ಹೀಗೆ ಭೌತಿಕ ಜೀವನವನ್ನು ನಡೆಸುವಾಗ ನಮಗೊಂದು ಪಾರಮಾರ್ಥಿಕ ಬದುಕೊಂದು ಇದೆ ಎನ್ನುವುದನ್ನು ಮರೆಯಬಾರದು. ಪ್ರಾಪಂಚಿಕ ಜೀವನ ಒಂದು ನಾಟಕ ಎಂದು ನೆನಪಿಟ್ಟು, ಅದರಲ್ಲಿ ತನ್ಮಯತೆಯಿಂದ, ಮನಸಿಟ್ಟು, ಪ್ರೀತಿಯಿಂದ ಕುಣಿದಾಡಿದರೂ, ಪರವಸ್ತುವಿನ ಸ್ಥಾನವಾದ ಆತ್ಮವೆಂಬ ಆಲಯದಲ್ಲಿ ಆನಂದದಿಂದ ವಿಹರಿಸಬೇಕು. ಯಾಕೆಂದರೆ ಅದು ಪರಮ ಗುರಿ. ಇದು ಹೇಗೆ ಸಾಧ್ಯ ಎನ್ನುವುದಕ್ಕೆ ಶ್ರೀ ರಾಮಕೃಷ್ಣರು ಒಂದು ಸುಂದರ ಉದಾಹರಣೆ ಕೊಡುತ್ತಾರೆ. ಮನೆಯಲ್ಲಿ ತಾಯಿ ಬಿಡುವಿಲ್ಲದ ಕೆಲಸದಲ್ಲಿ ತೊಡಗಿದ್ದಾಳೆ. ಉಸಿರುಗಟ್ಟಿಸುವಂಥ ಹತ್ತಾರು ಕೆಲಸಗಳನ್ನು ಬಿಡುವಿಲ್ಲದೇ ಮಾಡುವಾಗಲೂ ದೇವರ ಮುಂದಿನ ದೀಪ ಉರಿಯುತ್ತಿದೆಯೇ ಎಂದು ಮರೆಯದೆ ನೋಡುತ್ತಾಳೆ. ಮನೆಗೆಲಸ ಭೌತಿಕ ಜೀವನ ಆದರೆ ಅದು ಆತ್ಮವನ್ನು ಮರೆಮಾಡದಂತೆ ಎಚ್ಚರವಹಿಸಬೇಕು.

ಪದಬಂಧ 5348


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವಿರುವ ಲಾಯದಿಂದ ತಪ್ಪಿಸಿಕೊಳ್ಳುವಿಕೆ! (4)
3.ವರ್ಣವುಳ್ಳ ಅಕ್ಷರಮಾಲೆ (4)
5.ಕನಕವನ್ನು ನೋಡುತ್ತಿರುವ ತಿಳಿಗೇಡಿ! (3)
7.ಸರಾಗವಾಗಿ ಕೆಲಸ ಮಾಡುವ ಮೋಚಿ (4)
9.ಅಶೋಕ ವೃಕ್ಷದ ಬಳಿ ತೋಡಿಕೊಂಡ ವ್ಯಸನ (2)
10.ಭಕ್ತಿಯನ್ನು ಸಲ್ಲಿಸುವವ ತಿರುಗಿದ್ದಾನಲ್ಲಾ? (2)
11.ದಿನಮಣಿ ಹಾಗೂ ರಜನೀಕರ ಒಟ್ಟಿಗಿದ್ದಾರೆ (4)
13.ವನದ ಹತ್ತಿರ ಕಟ್ಟಿರುವ ಮನೆ (3)
17.ಬರ ಬಂದಾಗಿನ ನಗ್ನತೆ (4)
18.ಹಸುವಿನ ಹತ್ತಿರವಿರುವ ಚಿಕ್ಕ ಮಗು (4)

ಮೇಲಿಂದ ಕೆಳಕ್ಕೆ

1.ಪದ ಹಾಡಿ ಬಹುಮಾನವಾಗಿ ಪಡೆದ ಬಿಲ್ಲೆ (3)
2.ನಿನ್ನೆ ನುಡಿದಿರುವ ಸತ್ಯ (2)
3.ಮನಸ್ಸನ್ನು ಸೆಳೆದ ಕಾಡು ಹೂ (4)
4.ಅಕ್ಕಪಕ್ಕದವರು ಕಲಿಸಿರುವ ಎಣಿಕೆ (2)
6.ನಿಖರವಾಗಿ ವ್ಯಕ್ತವಾದ ಮರುಕ (4)
7.ಮುದ್ರಣದಲ್ಲಿ ಕಾಣಿಸಿದ ಕಡಲು (3)
8.ಭಕ್ತನಲ್ಲಿ ನೆತ್ತರು ಸುರಿಯುತ್ತಿದೆಯಲ್ಲಾ? (4)
12.ಚಂದದಿಂದ ವಂತಿಗೆ ನೀಡುವವನು (4)
14.ಇದು ಕನಸಲ್ಲ!ಸತ್ಯ (3)
15.ಹಾದಿಹೋಕನು ತೋರಿಸಿದ ರಸ್ತೆ (2)
16.ಸಂದೇಹ ಪಡುವವನ ಶರೀರ (2)



5347ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭಿಮಾನ 3.ವಿದಾಯ
4.ಗಗನ 6.ಕಾಟಾಚಾರ
8.ಯಥೋಚಿತ 10.ಸ್ವರ
11.ಸುಂಕ 12.ಅಂತರಂಗ
14.ಹರಿಗೋಲು 15.ಲಾವಣಿ
16.ತೊಗಟೆ 17.ಗೆಳೆತನ

ಮೇಲಿಂದ ಕೆಳಕ್ಕೆ:
2.ನಗರ 3.ವಿನಯ
5.ದೂತ 7.ಚಾಕರ
9.ಚಿಲುಕ 10.ಸ್ವಗತ
11.ಸುಂದರಿ 12.ಅಂಬು
13.ಗಲಾಟೆ 14.ಹಣಿಗೆ

ಸುಡೊಕು 5734

3	2			8		9		1
	9	8						4
	4		9			3		8
6								9
	5		7	6	9		8	
8						6		
			2			7		6
				9	7			
						4		5


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5733 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಷೇರುಪೇಟೆ ವಹಿವಾಟು 99



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,563
ಇಂದಿನ ಅಂತ್ಯ	18,601
▲	38
ದಿನದ ಗರಿಷ್ಠ	18,633

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹285-455
ದ್ವಿತಳಿ (ಬಿ.ವಿ)	₹330-611

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹572

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615(1615)
ಸೋಯಾ (ರಿಫೈನ್ಡ್)	₹905(915)
ಸೂರ್ಯಕಾಂತಿ (ರಿಫೈನ್ಡ್)	₹900(900)
ಪಾಮೋಲಿನ್	₹835(845)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15500
ಎಸಿ	₹8120
ಆರ್‌ಪಿ	₹10800
ಆರ್‌ಸಿ	₹6230

ಕೊಬ್ಬರಿ ಧಾರಣೆ

ಕೆ.ಆರ್‌.ಪೇಟೆ	₹7950-7950
ಪುತ್ತೂರು	₹4500-7300
ತುಮಕೂರು	₹8050-8950
ತುರುವೇಕೆರೆ	₹ 8800-8800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹152
ಆರ್‌ಎಸ್‌ಎಸ್‌-5	₹147
ಗುಡ್ ಲಾಟ್	₹128

ಎರಡು ದಿನಗಳ ಇಳಿಕೆಗೆ ತಡೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ನಡೆದಿದ್ದ ಎರಡು ದಿನಗಳ ಇಳಿಮುಖ ವಹಿವಾಟಿಗೆ ಸೋಮವಾರ ತಡೆ ಬಿದ್ದಿತು. ಐ.ಟಿ., ತೈಲ ಮತ್ತು ಅನಿಲ, ದೂರಸಂಪರ್ಕ ಷೇರುಗಳ ಗಳಿಕೆಯಿಂದಾಗಿ ಸೂಚ್ಯಂಕಗಳು ಏರಿಕೆ ಕಂಡವು.

ಬಿಎಸ್‌ಇ ಸೆನ್ಸೆಕ್ಸ್ 99 ಅಂಶ ಹೆಚ್ಚಾದರೆ, ಎನ್‌ಎಸ್‌ಇ ನಿಫ್ಟಿ 38 ಅಂಶ ಏರಿಕೆ ಕಂಡಿತು.

ಮುಂಬೈ ಧಾರಣೆ

ಶೇಂಗಾ

12–6–2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625(1625)
ಒಂದು ವಾರದ ಡೆಲಿವರಿ	1620(1620)
ಸೋಯಾ ಕಚ್ಚಾ	865(865)
ಪಾಮ್ ವಾರದ ಡೆಲಿವರಿ	933(943)
ಸೂರ್ಯಕಾಂತಿ ಎಣ್ಣೆ ಕಚ್ಚಾ	815(810)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,550 (59,650)
ಬೆಳ್ಳಿ ಕೆ.ಜಿ 73,350 (73,550)

ಆವರಣದಲ್ಲಿ ಶನಿವಾರದ ಧಾರಣೆ

ಮೂಡಿಸ್ ಮನವೊಲಿಕೆ ಯತ್ನ

ನವದೆಹಲಿ (ಪಿಟಿಐ): ಭಾರತದ ಬಲಿಷ್ಠ ಅರ್ಥ ವ್ಯವಸ್ಥೆಯ ಬಗ್ಗೆ ಮಾಹಿತಿ ನೀಡಲು ಕೇಂದ್ರ ಹಣಕಾಸು ಸಚಿವಾಲಯದ ಅಧಿಕಾರಿಗಳು ಅಮೆರಿಕದ ಮೂಡಿಸ್ ಇನ್ವೆಸ್ಟರ್ಸ್ ಸರ್ವಿಸಸ್ ಸಂಸ್ಥೆಯ ಪ್ರತಿನಿಧಿಗಳನ್ನು ಶುಕ್ರವಾರ ಭೇಟಿ ಮಾಡಲಿದ್ದಾರೆ. ದೇಶದ ರೇಟಿಂಗ್ ಅನ್ನು ಮೇಲ್ದರ್ಜೆಗೆ ಏರಿಸಬೇಕು ಎಂದು ಮೂಡಿಸ್ ಪ್ರತಿನಿಧಿಗಳ ಮನವೊಲಿಸುವ ಉದ್ದೇಶವನ್ನು ಅವರು ಹೊಂದಿದ್ದಾರೆ.

ಮೂಡಿಸ್ ಸಂಸ್ಥೆಯು ಈಗ ಭಾರತಕ್ಕೆ 'ಬಿಎಎ3' ರೇಟಿಂಗ್ ನೀಡಿದೆ. ಇದು ಹೂಡಿಕೆ ದರ್ಜೆಯ ರೇಟಿಂಗ್‌ಗಳಲ್ಲಿ ಅತ್ಯಂತ ಕಡಿಮೆಯದ್ದು.

ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅಜಯ್ ಸೇಠ್, ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಮತ್ತು ಕೆಲವು ಪ್ರಮುಖ ಸಚಿವಾಲಯಗಳ ಹಿರಿಯ ಅಧಿಕಾರಿಗಳು ದೇಶದಲ್ಲಿ ಈಗ ಜಾರಿಯಲ್ಲಿರುವ ಆರ್ಥಿಕ ಸುಧಾರಣೆಗಳು, ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ನೀಡುತ್ತಿರುವ ಆದ್ಯತೆ ಮತ್ತು ದೇಶದಲ್ಲಿರುವ ವಿದೇಶಿ ವಿನಿಮಯ ಮೀಸಲಿನ ಬಗ್ಗೆ ವಿವರ ನೀಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಜಾಗತಿಕವಾಗಿ ಪ್ರಭಾವಿ ರೇಟಿಂಗ್ ಸಂಸ್ಥೆಗಳಾ ಫಿಚ್, ಎಸ್‌ಆ್ಯಂಡ್‌ಪಿ ಮತ್ತು ಮೂಡಿಸ್ ಭಾರತಕ್ಕೆ ನೀಡಿರುವ ರೇಟಿಂಗ್, ಹೂಡಿಕೆ ದರ್ಜೆಯಲ್ಲಿ ಅತ್ಯಂತ ಕಡಿಮೆಯದ್ದು. ಹೂಡಿಕೆದಾರರು ಈ ರೇಟಿಂಗ್ ಗಮನಿಸಿ, ದೇಶವು ಸಾಲವನ್ನು ಪಡೆಯಲು ಎಷ್ಟರಮಟ್ಟಿಗೆ ಅರ್ಹ ಎಂಬುದನ್ನು ತೀರ್ಮಾನಿಸುತ್ತಾರೆ.

ಮೂಡಿಸ್ ಸಹ ವ್ಯವಸ್ಥಾಪಕ ನಿರ್ದೇಶಕ ಜೀನ್ ಫಾಂಗ್ ಅವರು, ಭಾರತದ ಅರ್ಥ ವ್ಯವಸ್ಥೆಯು ಜೂನ್ ತ್ರೈಮಾಸಿಕದಲ್ಲಿ ಶೇ 6.3ರವರೆಗೆ ಬೆಳವಣಿಗೆ ಸಾಧಿಸುವ ನಿರೀಕ್ಷೆ ಇದೆ ಎಂದು ಈಚೆಗೆ ಹೇಳಿದ್ದರು.

2 ವರ್ಷಗಳ ಕನಿಷ್ಠ ಮಟ್ಟಕ್ಕೆ ಹಣದುಬ್ಬರ

ಒಂದನೇ ಪುಟದಿಂದ

ಮೇ ತಿಂಗಳಲ್ಲಿ ಹಣದುಬ್ಬರ ಪ್ರಮಾಣ ಕಡಿಮೆ ಆಗಿದ್ದರೂ, ಮುಂಗಾರು ಮಳೆಯು ವಾಡಿಕೆಗಿಂತ ಕಡಿಮೆ ಆದರೆ, ಅದರ ಪರಿಣಾಮವು ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಆಹಾರ ವಸ್ತುಗಳ ಬೆಲೆ ಏರಿಕೆಯ ರೂಪದಲ್ಲಿ ಕಾಣಿಸಿಕೊಳ್ಳಬಹುದು ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಆರ್‌ಬಿಐ ರೆಪೊ ದರವನ್ನು ಪ್ರಸಕ್ತ ಆರ್ಥಿಕ ವರ್ಷದುದ್ದಕ್ಕೂ ಈಗಿನ ಮಟ್ಟದಲ್ಲಿಯೇ ಉಳಿಸಿಕೊಳ್ಳಬಹುದು ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಅಂದಾಜಿಸಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದ ಮುಂದಿನ ತಿಂಗಳುಗಳಲ್ಲಿ ಹಣದುಬ್ಬರದ ಪ್ರಮಾಣವು ಶೇ 4.4ರಿಂದ ಶೇ 5.4ರ ನಡುವೆ ಉಳಿಯಬಹುದು ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆಯ ತಜ್ಞರು ಅಂದಾಜಿಸಿದ್ದಾರೆ.

ರಾಜ್ಯದ ತೆರಿಗೆ ಪಾಲು ಬಿಡುಗಡೆ

ಒಂದನೇ ಪುಟದಿಂದ

ಬಂಡವಾಳ ವೆಚ್ಚವನ್ನು ವೇಗಗೊಳಿಸಲು, ಅಭಿವೃದ್ಧಿ ಮತ್ತು ಕಲ್ಯಾಣ ಸಂಬಂಧಿಸಿದ ವೆಚ್ಚಗಳಿಗೆ ಹಣಕಾಸು ಒದಗಿಸಲು ಹಾಗೂ ಆದ್ಯತೆಯ ಯೋಜನೆಗಳಿಗೆ ಸಂಪನ್ಮೂಲ ಲಭ್ಯವಾಗುವಂತೆ ಮಾಡಲು ಜೂನ್ ತಿಂಗಳ ಬಾಕಿ ಕಂತಿನ ಜತೆಗೆ ಒಂದು ಮುಂಗಡ ಕಂತನ್ನು ರಾಜ್ಯಗಳಿಗೆ ಬಿಡುಗಡೆ ಮಾಡಲಾಗಿದೆ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆಯಲ್ಲಿ ಶೇ 41 ಮೊತ್ತವನ್ನು ರಾಜ್ಯ ಸರ್ಕಾರಗಳಿಗೆ 14 ಕಂತುಗಳಲ್ಲಿ ಹಂಚಿಕೆ ಮಾಡಲಾಗುತ್ತದೆ.

2023–24ರ ಬಜೆಟ್ ಪ್ರಕಾರ, ಕೇಂದ್ರ ಸರ್ಕಾರವು ಈ ವರ್ಷ ರಾಜ್ಯಗಳಿಗೆ ₹10.21 ಲಕ್ಷ ಕೋಟಿ ವರ್ಗಾಯಿಸುವ ನಿರೀಕ್ಷೆ ಇದೆ. ಹಾಗಾಗಿ, ಪ್ರತಿ ಕಂತಿನ ಸರಾಸರಿ ಮೊತ್ತ ₹72.916 ಕೋಟಿ ಆಗಲಿದೆ. ಕೇಂದ್ರದ ಆದಾಯವು ಸುಧಾರಿಸಿದಂತೆ ಕಂತಿನ ಮೊತ್ತ ಸಹ ಹೆಚ್ಚಾಗಲಿದೆ.

ಬೆಲೆ ನಿಯಂತ್ರಿಸಲು 15 ವರ್ಷಗಳಲ್ಲಿ ಮೊದಲ ಬಾರಿಗೆ ಈ ಕ್ರಮ

ಗೋಧಿ ದಾಸ್ತಾನು: ಕೇಂದ್ರ ಮಿತಿ



ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 15 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಗೋಧಿ ಮೇಲೆ ದಾಸ್ತಾನು ಮಿತಿ ಹೇರಿದೆ. ಕೇಂದ್ರದ ಆದೇಶವು ಸೋಮವಾರದಿಂದಲೇ ಜಾರಿಗೆ ಬಂದಿದೆ. ಮುಂದಿನ ವರ್ಷದ ಮಾರ್ಚ್ ತಿಂಗಳ ಅಂತ್ಯದವರೆಗೂ ಇದು ಜಾರಿಯಲ್ಲಿ ಇರಲಿದೆ.

ಅಕ್ರಮ ದಾಸ್ತಾನು ತಡೆಯಲು ಮತ್ತು ಬೆಲೆ ಏರಿಕೆಯನ್ನು ನಿಯಂತ್ರಿಸಲು ಸರ್ಕಾರ ಈ ಕ್ರಮ ಕೈಗೊಂಡಿದೆ. ಈ ಹಿಂದೆ 2008ರಲ್ಲಿ ಗೋಧಿಗೆ ದಾಸ್ತಾನು ಮಿತಿ ಹೇರಲಾಗಿತ್ತು.

ಮಿತಿ ಎಷ್ಟು?: ವರ್ತಕರು/ ಸಗಟುದಾರರಿಗೆ 3 ಸಾವಿರ ಟನ್, ರಿಟೇಲ್ ವರ್ತಕರಿಗೆ 10 ಟನ್, ದೊಡ್ಡ ಪ್ರಮಾಣದಲ್ಲಿ ವಹಿವಾಟು ನಡೆಸುವ ದೊಡ್ಡ ಮಳಿಗೆಗಳಿಗೆ ಪ್ರತಿ ಮಳಿಗೆಗೆ 10 ಟನ್, ಸಂಸ್ಕರಣೆ ಮಾಡುವವರಿಗೆ ವಾರ್ಷಿಕ ಸಾಮರ್ಥ್ಯದ ಶೇ 75ರಷ್ಟು ಮಿತಿ ನಿಗದಿಪಡಿಸಲಾಗಿದೆ.

ಅಕ್ರಮ ವಹಿವಾಟಿನಲ್ಲಿ ತೊಡಗಿರುವ ಕೆಲವರು ಗೋಧಿಯನ್ನು ದಾಸ್ತಾನು ಮಾಡಿಕೊಂಡು, ಕೃತಕ ಅಭಾವ ಸೃಷ್ಟಿಸುತ್ತಿದ್ದಾರೆ. ಕಳೆದ ತಿಂಗಳಲ್ಲಿ ಮಂಡಿ ಮಟ್ಟದಲ್ಲಿ ಗೋಧಿಯ ಬೆಲೆಯು ಶೇಕಡ 8ರಷ್ಟು ಹೆಚ್ಚಳ ಕಂಡಿದೆ ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಹೇಳಿದ್ದಾರೆ.

ಮಂಡಿ ಮಟ್ಟದಲ್ಲಿ ಬೆಲೆಯು ಪ್ರತಿ ಕ್ವಿಂಟಲ್‌ಗೆ ₹2,129 ಇದ್ದಿದ್ದು ಜೂನ್ 7ರಂದು ₹2,302ಕ್ಕೆ ಏರಿಕೆ ಕಂಡಿದೆ ಎಂದು ಚೋಪ್ರಾ ತಿಳಿಸಿದ್ದಾರೆ.

ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ (ಒಎಂಎಸ್‌ಎಸ್) ಮೊದಲ ಹಂತದಲ್ಲಿ 15 ಲಕ್ಷ ಟನ್ ಗೋಧಿಯನ್ನು ಸಗಟು ಮಾರಾಟಗಾರರು ಮತ್ತು ವರ್ತಕರಿಗೆ ಮಾರಾಟ ಮಾಡಲು ನಿರ್ಧರಿಸಲಾಗಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಗೋಧಿ ಮೇಲಿನ ಆಮದು ಸುಂಕ ಕಡಿಮೆ ಮಾಡುವ ಕುರಿತು ಮಾತನಾಡಿದ ಅವರು, 'ದೇಶದಲ್ಲಿ ಗೋಧಿ ಪೂರೈಕೆಯು ಸಾಕಷ್ಟಿದೆ. ಹೀಗಾಗಿ ಯಾವುದೇ ಬದಲಾವಣೆ ಮಾಡುವ ಆಲೋಚನೆ ಇಲ್ಲ. ಗೋಧಿ ರಫ್ತು ಮೇಲಿನ ನಿಷೇಧವೂ ಮುಂದುವರಿಯಲಿದೆ' ಎಂದು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಗೋಧಿ ರಫ್ತು ನಿಷೇಧ ಮುಂದುವರಿಯಲಿದೆ
- ಗೋಧಿ ಆಮದು ಸುಂಕ ತಗ್ಗಿಸುವ ಆಲೋಚನೆ ಇಲ್ಲ

ಸಕ್ಕರೆ ರಫ್ತು: ಅವಕಾಶ ಅನುಮಾನ

ಮುಂಬೈ/ನವದೆಹಲಿ (ರಾಯಿಟರ್ಸ್): ಎಲ್ ನಿನೊದಿಂದಾಗಿ ಮಳೆ ಪ್ರಮಾಣ ಕಡಿಮೆ ಆಗಿ, ಸಕ್ಕರೆ ಉತ್ಪಾದನೆ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಆತಂಕ ಸರ್ಕಾರಕ್ಕೆ ಇದೆ. ಹೀಗಾಗಿ 2024ರ ಮೊದಲಾರ್ಧದವರೆಗೂ ಸಕ್ಕರೆ ರಫ್ತು ಮಾಡಲು ಅವಕಾಶ ನೀಡುವ ಕುರಿತು ಪರಿಗಣಿಸುವುದಿಲ್ಲ ಎಂದು ಸರ್ಕಾರದ ಮೂಲಗಳು ಸೋಮವಾರ ಹೇಳಿವೆ.

ಜಾಗತಿಕ ಮಟ್ಟದಲ್ಲಿ ಸಕ್ಕರೆ ರಫ್ತು ಮಾಡುವುದರಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ಹೊಸ ಮಾರುಕಟ್ಟೆ ವರ್ಷ ಅಕ್ಟೋಬರ್ 1ರಂದು ಆರಂಭ ಆಗುತ್ತದೆ. ಹೀಗಾಗಿ, ಕಾರ್ಖಾನೆಗಳು ಎಷ್ಟು ಪ್ರಮಾಣದಲ್ಲಿ ಸಕ್ಕರೆ ರಫ್ತು ಮಾಡಬಹುದು ಎನ್ನುವುದನ್ನು ಸರ್ಕಾರವು ಅದಕ್ಕೂ ಮೊದಲೇ ನಿರ್ಧರಿಸುತ್ತದೆ. ಭಾರತದಿಂದ ಸಕ್ಕರೆ ರಫ್ತು ವಿಳಂಬ ಆದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ದರವು ಭಾರಿ ಏರಿಕೆ ಕಾಣುವ ಸಾಧ್ಯತೆ ಇದೆ.

ಪ್ರತಿಕೂಲ ಹವಾಮಾನವೇ ಅತಿದೊಡ್ಡ ಅಡ್ಡಿಯಾಗಿದೆ. ಕಳೆದ ವರ್ಷ ಮುಂಗಾರು ಉತ್ತಮವಾಗಿದ್ದರೂ ಸಕ್ಕರೆ ಉತ್ಪಾದನೆ ಕುಸಿದಿತ್ತು. ಈ ವರ್ಷ ಎಲ್ ನಿನೊದಿಂದಾಗಿ ಮುಂಚಿತವಾಗಿ ಸಕ್ಕರೆ ರಫ್ತು ಮಾಡಲು ಅವಕಾಶ ನೀಡುವ ಅಪಾಯಕ್ಕೆ ಕೈಹಾಕುವುದಿಲ್ಲ ಎಂದು ಹೆಸರು ಬಹಿರಂಗಪಡಿಸಬಾರದು ಎನ್ನುವ ಷರತ್ತಿನೊಂದಿಗೆ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

2023–24ರ ಅವಧಿಯ ಮೊದಲಾರ್ಧದ ನಂತರ ಒಂದೊಮ್ಮೆ ರಫ್ತು ಮಾಡಲು ಅವಕಾಶ ನೀಡಿದರೂ, 40 ಲಕ್ಷ ಟನ್‌ಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ರಫ್ತು ಮಾಡಲು ಅನುಮತಿ ನೀಡುವುದು ಅನುಮಾನ. ಈ ವರ್ಷದಲ್ಲಿ ಕೆಲವು ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ಮತ್ತು 2024ರಲ್ಲಿ ಲೋಕಸಭೆ ಚುನಾವಣೆ ಇರುವುದರಿಂದ ಕೇಂದ್ರ ಸರ್ಕಾರವು ಆಹಾರ ವಸ್ತುಗಳ ದರ ನಿಯಂತ್ರಿಸುವುದರ ಕಡೆಗೆ ಆಸಕ್ತಿ ವಹಿಸಿದೆ ಎಂದು ಅವರು ಹೇಳಿದ್ದಾರೆ.

ತಿಂಗಳಾಂತ್ಯಕ್ಕೆ ಚೀನಾದಲ್ಲಿನ ಭಾರತದ ಕೊನೆಯ ಪತ್ರಕರ್ತ ವಾಪಸ್

ಚೀನಿ ಪತ್ರಕರ್ತರಿಗೆ ತಾರತಮ್ಯ: ಆರೋಪ

ಬೀಜಿಂಗ್(ರಾಯಟರ್ಸ್): 'ಭಾರತದಲ್ಲಿರುವ ಚೀನಾ ಪತ್ರಕರ್ತರ ಬಗ್ಗೆ ಅಲ್ಲಿನ ಸರ್ಕಾರ ತಾರತಮ್ಯ ನೀತಿ ಅನುಸರಿಸುವ ಮೂಲಕ ಅನ್ಯಾಯ ಎಸಗುತ್ತಿದೆ. ಅದೇ ಧೋರಣೆಯನ್ನೇ ನಾವು ಇಲ್ಲಿರುವ ಭಾರತೀಯ ಪತ್ರಕರ್ತರ ಬಗ್ಗೆ ತಳೆದಿದ್ದೇವೆ' ಎಂದು ಚೀನಾ ಪ್ರತಿಪಾದಿಸಿದೆ.

ಉಭಯ ದೇಶಗಳಲ್ಲಿ ಪತ್ರಕರ್ತರ ನಿರಂತರ ಉಪಸ್ಥಿತಿ ಬಗ್ಗೆ ತಲೆದೋರಿರುವ ವೀಸಾ ವಿವಾದದ ಬಗ್ಗೆ ಪ್ರತಿಕ್ರಿಯಿಸಿರುವ ಚೀನಾವು, 'ಅಲ್ಲಿರುವ ನಮ್ಮ ದೇಶದ ಪತ್ರಕರ್ತರ ಜೊತೆ ಭಾರತವು ಸರಿಯಾಗಿ ನಡೆದುಕೊಳ್ಳುತ್ತಿಲ್ಲ' ಎಂದು ದೂರಿದೆ.

2020ರಲ್ಲಿ ನಡೆದ ಲಡಾಖ್ ಗಡಿ ಸಂಘರ್ಷದಲ್ಲಿ 24 ಭಾರತೀಯ ಯೋಧರು ಹುತಾತ್ಮರಾದ ಬಳಿಕ ಭಾರತ ಮತ್ತು ಚೀನಾ ನಡುವಣ ದ್ವಿಪಕ್ಷೀಯ ಬಾಂಧವ್ಯ ಹಳಸಿದೆ. ಇದು ಎರಡೂ ದೇಶಗಳ ಪತ್ರಕರ್ತರ ಕಾರ್ಯ ನಿರ್ವಹಣೆ ಮೇಲೂ ಪರಿಣಾಮ ಬೀರಿದೆ.

'ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿರುವ ಚೀನಾ ಪತ್ರಕರ್ತರಿಗೆ ಅಗತ್ಯ ವ್ಯವಸ್ಥೆ ಕಲ್ಪಿಸುವಲ್ಲಿ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ' ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್ ಬಿನ್ ಸೋಮವಾರ ದೂರಿದ್ದಾರೆ.

'ಮಾಧ್ಯಮಗಳ ಸಂವಹನಕ್ಕೆ ಸಂಬಂಧಿಸಿದಂತೆ ಭಾರತವು ವಿಧಿಸಿರುವ ಅಸಮಂಜಸ ಷರತ್ತುಗಳನ್ನು ಬದಲಾಯಿಸಬೇಕು. ನಮ್ಮ ಪತ್ರಕರ್ತರಿಗೆ ವೀಸಾ ನೀಡುವ ಜೊತೆಗೆ ಅಲ್ಲಿ ಅವರು ಕೆಲಸ ಮಾಡಲು ಪೂರಕ ವಾತಾವರಣ ಸೃಷ್ಟಿಸುತ್ತದೆಂಬ ವಿಶ್ವಾಸ ಇದೆ' ಎಂದರು.

'2020ರಿಂದಲೂ ನಮ್ಮ ಪತ್ರಕರ್ತರಿಗೆ ಹೊಸ ವೀಸಾ ನೀಡಿಲ್ಲ. ಹಾಗಾಗಿ, 14 ಮಂದಿಯ ಪೈಕಿ ಒಬ್ಬರಷ್ಟೇ ಅಲ್ಲಿ ಉಳಿದಿದ್ದಾರೆ. ಮಾಧ್ಯಮ ಸಂವಹನ ಬಲಪಡಿಸುವಿಕೆಗೆ ಸಂಬಂಧಿಸಿದಂತೆ ನಾವು ಅಗತ್ಯ ಕ್ರಮವಹಿಸಲು ಸಿದ್ಧ. ಆ ದೇಶವೂ ಇದಕ್ಕೆ ಪೂರಕವಾಗಿ ಸ್ಪಂದಿಸಬೇಕಿದೆ' ಎಂದು ಹೇಳಿದರು.

ಒಟ್ಟು ನಾಲ್ವರು ಭಾರತೀಯ ಪತ್ರಕರ್ತರಿಗೆ ಚೀನಾದಲ್ಲಿ ಕೆಲಸ ನಿರ್ವಹಣೆಗೆ ಅನುಮತಿ ಸಿಕ್ಕಿತ್ತು. ಆದರೆ, ಇಬ್ಬರ ವೀಸಾಕ್ಕೆ ನಿರ್ಬಂಧ ಹೇರಿದ್ದರಿಂದ ಕಳೆದ ಏಪ್ರಿಲ್‌ನಲ್ಲಿ ಅವರು ಭಾರತಕ್ಕೆ ಮರಳಿದ್ದರು. ಉಳಿದ ಇಬ್ಬರ ಪೈಕಿ ವೀಸಾ ನವೀಕರಣಗೊಳ್ಳದ ಹಿನ್ನೆಲೆಯಲ್ಲಿ ಭಾನುವಾರ ಹಿಂದೂಸ್ತಾನ್ ಟೈಮ್ಸ್‌ನ ವರದಿಗಾರ ಸ್ವದೇಶಕ್ಕೆ ಮರಳಿದ್ದಾರೆ. ಈ ತಿಂಗಳಲ್ಲಿ ಪಿಟಿಐ ವರದಿಗಾರನ ವೀಸಾ ಅಂತ್ಯಗೊಳ್ಳಲಿದ್ದು, ಅವರು ವಾಪಸ್ ಬರಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಇಬ್ಬರ ವೀಸಾ ನವೀಕರಣಕ್ಕೆ ಚೀನಾ ನಿರಾಕರಿಸಿದ್ದರಿಂದ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಚೀನಾ ಸ್ಟೇಟ್ ಮಿಡಿಯಾದ ಪತ್ರಕರ್ತರ ವಿರುದ್ಧವೂ ಕೇಂದ್ರ ಸರ್ಕಾರ ಇದೇ ಕ್ರಮ ಅನುಸರಿಸಿತ್ತು.

ಗೋವಾದಲ್ಲಿ ನಡೆದ ಶಾಂಘೈ ಸಹಕಾರ ಸಂಸ್ಥೆಯ ವಿದೇಶಾಂಗ ಸಚಿವರ ಸಭೆಯ ವರದಿಗಾರಿಕೆ ಮಾಡಲು ಚೀನಾ ಪತ್ರಕರ್ತರಿಗೆ ಭಾರತವು ತಾತ್ಕಾಲಿಕ ವೀಸಾ ನೀಡಿತ್ತು ಎಂದು ಮೂಲಗಳು ತಿಳಿಸಿವೆ.

'ವಿದೇಶಿ ಪತ್ರಕರ್ತರಿಗೆ ಭಾರತದಲ್ಲಿ ಕೆಲಸ ನಿರ್ವಹಿಸಲು ನಾವು ಅವಕಾಶ ನೀಡಿದ್ದೇವೆ. ಅದೇ ರೀತಿ ಚೀನಾವೂ ಭಾರತೀಯರ ಪತ್ರಕರ್ತರಿಗೆ ಅಲ್ಲಿ ಕೆಲಸ ನಿರ್ವಹಣೆಗೆ ಅನುಕೂಲ ಕಲ್ಪಿಸುತ್ತದೆ ಎಂಬ ವಿಶ್ವಾಸವಿದೆ' ಎಂದು ಭಾರತೀಯ ವಿದೇಶಾಂಗ ಸಚಿವಾಲಯ ಕಳೆದ ತಿಂಗಳು ಹೇಳಿತ್ತು.

ಬಹುಮಾನದ ಒಂದು ಪಾಲು ರೈಲು ದುರಂತ ಸಂತ್ರಸ್ತರಿಗೆ

ದುಬೈ (ಪಿಟಿಐ): ಅಬುಧಾಬಿಯಲ್ಲಿ ನೆಲೆಸಿರುವ ಭಾರತ ಮೂಲದ ಬಾಣಸಿಗ ಸಹಜನ್ ಮೊಹಮ್ಮದ್ ಎಂಬುವವರು ತಾವು ಈಚೆಗೆ ಸ್ಕ್ರ್ಯಾಚ್ ಕಾರ್ಡ್ ಆಟದಲ್ಲಿ ಗೆದ್ದಿದ್ದ ₹4 ಲಕ್ಷದಲ್ಲಿ ಒಡಿಶಾ ರೈಲು ದುರಂತದ ಸಂತ್ರಸ್ತರಿಗೆ ನೀಡುವುದಾಗಿ ಘೋಷಿಸಿದ್ದಾರೆ ಎಂದು 'ಖಲೀಜ್ ಟೈಮ್ಸ್' ವರದಿ ಮಾಡಿವೆ.

ಒಡಿಶಾದ ಜಸ್‌ಪುರ ನಿವಾಸಿಯಾಗಿರುವ ಮೊಹಮ್ಮದ್ ಅವರು ಈಚೆಗೆ ಡ್ರೀಮ್ ಐಲ್ಯಾಂಡ್ ಸ್ಕ್ರ್ಯಾಚ್ ಕಾರ್ಡ್ ಆಟದಲ್ಲಿ 20 ಸಾವಿರ ದಿರ್ಹಾಂ (ಅಂದಾಜು ₹4.48 ಲಕ್ಷ) ಬಹುಮಾನ ಗೆದ್ದಿದ್ದರು.

'ಅದೃಷ್ಟವಶಾತ್ ನನಗೆ ಪರಿಚಯವಿರುವವರು ಯಾರೂ ಅಪಘಾತಕ್ಕೆ ಸಿಲುಕಿಲ್ಲ. ಆದರೂ ಅಪಘಾತದಲ್ಲಿ ಸಂತ್ರಸ್ತರಾಗಿರುವ ನನ್ನ ಗ್ರಾಮದವರಿಗೆ ಮೊದಲು ಸಹಾಯ ಮಾಡುತ್ತೇನೆ' ಎಂದು ತಿಳಿಸಿದ್ದಾರೆ. ರೈಲು ದುರಂತದ ಸಂತ್ರಸ್ತರಿಗೆ ಸಹಾಯ ಮಾಡುವುದರ ಜೊತೆಗೆ ಉಳಿದ ಹಣವನ್ನು ಮನೆ ನಿರ್ಮಾಣಕ್ಕೆ ವಿನಿಯೋಗಿಸುವುದಾಗಿಯೂ ಹೇಳಿದ್ದಾರೆ.

ಚೀನಾದ ಪ್ರಭಾವ ಹೆಚ್ಚಾಗಿದ್ದಕ್ಕೆ ಈ ಕ್ರಮ

'ಯುನೆಸ್ಕೊಗೆ ಅಮೆರಿಕ ಮರುಸೇರ್ಪಡೆ'

ಪ್ಯಾರಿಸ್ (ಪಿಟಿಐ): ವಿಶ್ವಸಂಸ್ಥೆಯ ಸಂಸ್ಕೃತಿ ಮತ್ತು ಶಿಕ್ಷಣ ಆಯೋಗ 'ಯುನೆಸ್ಕೊ'ಗೆ ಮರುಸೇರ್ಪಡೆ ಆಗಲು ಅಮೆರಿಕ ನಿರ್ಧರಿಸಿದ್ದು ₹49.46 ಸಾವಿರ ಕೋಟಿಗೂ ಹೆಚ್ಚು ಬಾಕಿ ಮೊತ್ತವನ್ನು ಪಾವತಿಸಲು ತಯಾರಿದೆ ಎಂದು ಯುನೆಸ್ಕೊ ಸೋಮವಾರ ಘೋಷಿಸಿದೆ.

ಪ್ಯಾಲೆಸ್ಟೀನ್‌ನನ್ನು ಸದಸ್ಯ ರಾಷ್ಟ್ರವನ್ನಾಗಿಸುವ ಯುನೆಸ್ಕೊದ ತೀರ್ಮಾನವನ್ನು ಅಮೆರಿಕ ವಿರೋಧಿಸಿತ್ತು. ಈ ಕಾರಣಕ್ಕೆ 2013ರಲ್ಲಿ ತನ್ನ ಮತ ಚಲಾವಣೆ ಹಕ್ಕನ್ನು ಕಳೆದುಕೊಂಡಿತ್ತು. 2017ರಲ್ಲಿ ಸದಸ್ಯತ್ವವನ್ನು ಹಿಂಪಡೆದಿತ್ತು.

ಯುನೆಸ್ಕೊ ನೀತಿ ನಿರ್ಣಯದಲ್ಲಿ ಅಮೆರಿಕದಿಂದ ತೆರವಾದ ಸ್ಥಾನವನ್ನು ಈಗ ಚೀನಾ ತುಂಬುತ್ತಿದೆ. ಅದರಲ್ಲೂ, ಜಗತ್ತಿನಾದ್ಯಂತ ಕೃತಕ ಬುದ್ಧಿಮತ್ತೆ ಹಾಗೂ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿಯ ಗುಣಮಟ್ಟವನ್ನು ನಿಗದಿಪಡಿಸುವಲ್ಲಿ ಚೀನಾ ಮಹತ್ವದ ಪಾತ್ರ ವಹಿಸುತ್ತಿದೆ. ಇವು ಯುನೆಸ್ಕೊಗೆ ಮರುಸೇರ್ಪಡೆ ಆಗುವುದಕ್ಕೆ ಅಮೆರಿಕವನ್ನು ಪ್ರೇರೇಪಿಸಿರುವ ಅಂಶಗಳು ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕದ ವಿದೇಶಾಂಗ ಉಪ ಕಾರ್ಯದರ್ಶಿ (ನಿರ್ವಹಣೆ ಮತ್ತು ಸಂಪನ್ಮೂಲ) ರಿಚರ್ಡ್ ವರ್ಮ ಅವರು ಮರುಸೇರ್ಪಡೆಗೆ ಸಂಬಂಧಿಸಿ ಯುನೆಸ್ಕೊ ಪ್ರಧಾನ ನಿರ್ದೇಶಕ ಔಡ್ರೆ ಅಝೌಲೆ ಅವರಿಗೆ ಪತ್ರ ಬರೆದಿದ್ದಾರೆ. ಸೋಮವಾರ ನಡೆದ ಯುನೆಸ್ಕೊದ ವಿಶೇಷ ಸಭೆಯಲ್ಲಿ ಔಡ್ರೆ ಅವರು ಅಮೆರಿಕದ ನಿರ್ಧಾರದ ಕುರಿತು ಪ್ರಸ್ತಾಪಿಸಿದ್ದಾರೆ ಎಂದು ಯುನೆಸ್ಕೊ ರಾಯಭಾರಿಯೊಬ್ಬರು ತಿಳಿಸಿದ್ದಾರೆ.

ಅಮೆರಿಕದ ಈ ನಿರ್ಧಾರದಿಂದ ಯುನೆಸ್ಕೊಗೆ ಭಾರಿ ಆರ್ಥಿಕ ನೆರವು ದೊರೆಯುತ್ತದೆ ಎಂದು ಅಂದಾಜಿಸಲಾಗಿದೆ.

ಇಟಲಿ ಮಾಜಿ ಪ್ರಧಾನಿ ಸಿಲ್ವಿಯೊ ನಿಧನ

ರೋಮ್ (ಎಪಿ): ಇಟಲಿಯ ಮಾಜಿ ಪ್ರಧಾನಿ, ಉದ್ಯಮಿ ಸಿಲ್ವಿಯೊ ಬರ್ಲುಸ್ಕೋನಿ (86) ಸೋಮವಾರ ನಿಧನರಾಗಿದ್ದಾರೆ.

ರಕ್ತದ ಕ್ಯಾನ್ಸರ್ ಚಿಕಿತ್ಸೆಗಾಗಿ ಬರ್ಲುಸ್ಕೋನಿ ಅವರನ್ನು ಶುಕ್ರವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೃದಯ ಸಂಬಂಧಿ ಕಾಯಿಲೆ, ಪ್ರಾಸ್ಟೇಟ್ ಕ್ಯಾನ್ಸರ್‌ನಿಂದಲೂ ಬಳಲುತ್ತಿದ್ದರು. 2020ರಲ್ಲಿ ಕೋವಿಡ್ ತಗುಲಿ ಆಸ್ಪತ್ರೆಗೆ ದಾಖಲಾಗಿದ್ದರು.

'ಬರ್ಲುಸ್ಕೋನಿ ಮೃತಪಟ್ಟಿದ್ದಾರೆ' ಎಂಬ ಶೀರ್ಷಿಕೆಯೊಂದಿಗೆ ಅವರ ಮೀಡಿಯಾಸೆಟ್ ಟೆಲಿವಿಷನ್ ನೆಟ್‌ವರ್ಕ್ ನಿಧನ ಸುದ್ದಿ ಘೋಷಿಸಿದೆ.

ಅವರು ಮೂರು ಬಾರಿ ದೇಶದ ಪ್ರಧಾನಿಯಾಗಿದ್ದರು. 1936, ಸೆಪ್ಟೆಂಬರ್ 29 ರಂದು ಮಿಲಾನ್‌ನಲ್ಲಿ ಬರ್ಲುಸ್ಕೋನಿ ಜನಿಸಿದರು. 25ನೇ ವಯಸ್ಸಿನಲ್ಲಿ ನಿರ್ಮಾಣ ಕಂಪನಿ ಪ್ರಾರಂಭಿಸಿದರು.

ಲೈಂಗಿಕ ಹಗರಣ ಹಾಗೂ ಭ್ರಷ್ಟಾಚಾರ ಆರೋಪಗಳಿಂದಾಗಿ ಪ್ರಧಾನಿ ಸ್ಥಾನದಿಂದ ಕೆಳಗಿಳಿದಿದ್ದರು. ಚಲನಚಿತ್ರ ಹಕ್ಕುಗಳ ಮಾರಾಟ ತೆರಿಗೆ ವಂಚನೆ ಪ್ರಕರಣದಲ್ಲಿ ನ್ಯಾಯಾಲಯ ಅವರಿಗೆ ಶಿಕ್ಷೆ ವಿಧಿಸಿತ್ತು. ಇಟಲಿಯ ಉನ್ನತ ಕ್ರಿಮಿನಲ್ ನ್ಯಾಯಾಲಯ 2013ರಲ್ಲಿ ಶಿಕ್ಷೆಯನ್ನು ಎತ್ತಿಹಿಡಿದಿತ್ತು. ಆದರೆ, ಅವರ ವಯಸ್ಸು 76 ಆಗಿದ್ದ ಕಾರಣ ಜೈಲು ಶಿಕ್ಷೆ ಬದಲು ಅಲ್ಝೈಮರ್ ರೋಗಿಗಳಿಗೆ ಸಹಾಯ ಮಾಡುವ ಮೂಲಕ ಸಮುದಾಯ ಸೇವೆ ಮಾಡಲು ಆದೇಶಿಸಿತು.



ಸಿಲ್ವಿಯೊ ಬರ್ಲುಸ್ಕೋನಿ– ಎಎಫ್‌ಪಿ ಚಿತ್ರ

1965 ರಲ್ಲಿ ಕಾರ್ಲಾ ಡಾಲ್'ಒಗ್ಲಿಯೊ ಅವರನ್ನು ಬರ್ಲುಸ್ಕೋನಿ ವಿವಾಹವಾದರು. ಮರೀನಾ, ಪಿಯರ್ಸಿಲ್ವಿಯೊ ಎಂಬ ಮಕ್ಕಳಿದ್ದಾರೆ.

ಎರಡನೇ ಮದುವೆ 1990ರಲ್ಲಿ ವೆರೋನಿಕಾ ಲ್ಯಾರಿಯೊ ಅವರೊಂದಿಗೆ ನಡೆಯಿತು. ಅವರಿಗೆ ಬಾರ್ಬರಾ, ಎಲಿಯೊನೊರಾ ಮತ್ತು ಲುಯಿಗಿ ಎಂಬ ಮೂವರು ಮಕ್ಕಳಿದ್ದಾರೆ.

'ರಷ್ಯಾದಿಂದ ಮತ್ತೊಂದು ಗ್ರಾಮ ಮರಳಿ ವಶಕ್ಕೆ'

ಕೀವ್ (ಎಪಿ): ರಷ್ಯಾ ಪಡೆಗಳಿಂದ ಮತ್ತೊಂದು ಗ್ರಾಮವನ್ನು ಮರಳಿ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಉಕ್ರೇನ್ ಮಿಲಿಟರಿ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಸ್ಟೊರೊಜೋವ್ ಗ್ರಾಮದ ಮೇಲೆ ಉಕ್ರೇನ್‌ಧ್ವಜ ಮತ್ತೆ ಹಾರುತ್ತಿದೆ ಎಂದು ಉಪ ರಕ್ಷಣಾ ಸಚಿವ ಹನ್ನಾ ಮಲಿಯರ್ ಟೆಲಿಗ್ರಾಮ್‌ನಲ್ಲಿ ಬರೆದಿದ್ದಾರೆ. ಇದಕ್ಕೂ ಮುನ್ನ ಉಕ್ರೇನ್ ಅಧಿಕಾರಿಗಳು, ಪೂರ್ವಡೊನೆಟೆಸ್ಕ್ ಪ್ರದೇಶದ ವೆಲ್ಕಾ ನೊವಸಿಲ್ಕೆ ಪಟ್ಟಣದ ದಕ್ಷಿಣ ಭಾಗದಲ್ಲಿ 3 ಇತರೆ ಸಣ್ಣ ಗ್ರಾಮಗಳು ವಿಮೋಚನೆಗೊಂಡಿವೆ ಎಂದು ತಿಳಿಸಿದ್ದಾರೆ.

ರಷ್ಯಾ ರಕ್ಷಣಾ ಸಚಿವಾಲಯವು ಹಳ್ಳಿಗಳಿಂದ ರಷ್ಯಾ ಪಡೆ ಹಿಂದಕ್ಕೆ ಸರಿದಿರುವ ಬಗ್ಗೆ ದೃಢಪಡಿಸಿಲ್ಲ. ಆದರೆ, ಕೆಲ ಮಿಲಿಟರಿ ಬ್ಲಾಗ್‌ಗಳು ಅವುಗಳ ಮೇಲೆ ರಷ್ಯಾ ನಿಯಂತ್ರಣ ಕಳೆದುಕೊಂಡಿರುವುದನ್ನು ಒಪ್ಪಿಕೊಂಡಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಎಲಕ್ಕಿ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	30109-33199
ಕೋಕ	21089-33099
ಫ್ಯಾಕ್ಟರಿ	14509-23566
ಹಳೆಚಾಲಿ	36609-39619
ಹೊಸಚಾಲಿ	35599-37669
ಪುತ್ತೂರು	
ಕೋಕ	11000-25000
ಹೊಸತು	33500-40500
ಸಾಗರ	
ಬಿಳಿಗೋಟು	23989-34499
ಚಾಲಿ	35299-37929
ಕೋಕ	18012-35419
ಕೆಂಪುಗೋಟು	30899-37499
ರಾಶಿ	35209-51619
ಸಿಪ್ಪೆಗೋಟು	12200-21601
ಶಿವಮೊಗ್ಗ	
ಬೆಟ್ಟೆ	45699-54599
ಗೊರಬಲು	17009-37689
ರಾಶಿ	40009-51399
ಸರಕು	57869-82810
ಸಿದ್ದಾಪುರ	
ಬಿಳಿಗೋಟು	29111-33889
ಚಾಲಿ	36399-38189
ಕೋಕ	27399-32899
ಕೆಂಪುಗೋಟು	28699-35689
ರಾಶಿ	45109-49049
ತಟ್ಟಿಬೆಟ್ಟೆ	40869-45309
ಶಿರಸಿ	
ಬೆಟ್ಟೆ	36609-46801
ಬಿಳಿಗೋಟು	26340-33199
ಚಾಲಿ	35319-38339
ಕೆಂಪುಗೋಟು	22199-34731
ರಾಶಿ	43899-48499
ಯಲ್ಲಾಪುರ	
ಬಿಳಿಗೋಟು	36899-34912
ಚಾಲಿ	35469-38014
ಕೋಕ	18099-32599
ಕೆಂಪುಗೋಟು	30099-35029
ರಾಶಿ	43422-53875
ತಟ್ಟಿಬೆಟ್ಟೆ	40899-46499

ಆಸ್ಟ್ರೇಲಿಯಾ: ಬಸ್ ಮಗುಚಿ 10 ಸಾವು

ಕ್ಯಾನ್‌ಬೆರಾ (ಎಪಿ): ಆಸ್ಟ್ರೇಲಿಯಾದ ಗ್ರೇಟಾ ನಗರದ ಸಮೀಪ ಮದುವೆ ಸಮಾರಂಭದಲ್ಲಿ ಪಾಲ್ಗೊಂಡು ಮರಳುತ್ತಿದ್ದ ಬಸ್ಸೊಂದು ಭಾನುವಾರ ರಾತ್ರಿ ಮಗುಚಿ 10 ಮಂದಿ ಮೃತಪಟ್ಟಿದ್ದು, 25 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಜು ಮುಸುಕಿದ ವಾತಾವರಣವಿದ್ದ ಕಾರಣ ಅಪಘಾತ ಸಂಭವಿಸಿರುವ ಸಾಧ್ಯತೆ ಇದೆ. ಬಸ್‌ನಲ್ಲಿ ಮದುವೆಯಲ್ಲಿ ಪಾಲ್ಗೊಂಡು ಮರಳುತ್ತಿದ್ದ ಅತಿಥಿಗಳಿದ್ದರು ಎಂದೂ ಹೇಳಿದ್ದಾರೆ. ಬಸ್ ಚಾಲಕನನ್ನು ಬಂಧಿಸಲಾಗಿದೆ.

ಗುಜರಾತ್: ನಾಲ್ಕು ಜಿಲ್ಲೆಗಳಲ್ಲಿ ಶಾಲೆಗಳಿಗೆ ರಜೆ, ಸಜ್ಜಾಗಿರಲು ಎನ್‌ಡಿಆರ್‌ಎಫ್‌ಗೆ ಸೂಚನೆ

ಬಿಪರ್‌ಜಾಯ್: 7500 ಜನರ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಬಿಪರ್‌ಜಾಯ್ ಚಂಡಮಾರುತ ಗುಜರಾತ್‌ನ ಕಛ್ ಜಿಲ್ಲೆಯ ಜಖೌ ಬಂದರು ವಲಯವನ್ನು ಇದೇ 15ರಂದು ಪ್ರವೇಶಿಸುವ ಅಂದಾಜಿದೆ. ಇದು, ತೀವ್ರ ಸ್ವರೂಪದ್ದಾಗಿದ್ದು, ಗಾಳಿಯ ವೇಗ ಗಂಟೆಗೆ 150 ಕಿ.ಮೀವರೆಗೂ ಇರಲಿದೆ. ಭೂಕುಸಿತ, ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಎಚ್ಚರಿಕೆ ನೀಡಿದೆ.

ಪರಿಣಾಮ ತೀವ್ರವಾಗಿರಲಿದೆ ಎಂಬ ಹಿನ್ನೆಲೆಯಲ್ಲಿ ಸರ್ಕಾರವು ನಾಲ್ಕು ಜಿಲ್ಲೆಗಳ ವ್ಯಾಪ್ತಿಯಲ್ಲಿ ಶಾಲೆಗಳಿಗೆ ರಜೆ ಘೋಷಿಸಿದ್ದು, 7,500 ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಿದೆ. ಕರಾವಳಿಯ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಕಛ್, ಜಾಮ್‌ನಗರ, ದೇವ್‌ಭೂಮಿ ದ್ವಾರಕಾ, ಜುನಾಗಢ್ ಜಿಲ್ಲೆಗಳಲ್ಲಿ ಶಾಲೆಗಳಿಗೆ ರಜೆ ಘೋಷಿಸಲಾಗಿದೆ. ಚಂಡಮಾರುತವು 15ರ ವೇಳೆಗೆ ಸೌರಾಷ್ಟ್ರ ಮತ್ತು ಕಛ್ ಜಿಲ್ಲೆಗಳ ಕರಾವಳಿ ಪ್ರದೇಶಗಳಿಗೆ ಪ್ರವೇಶಿಸಲಿದೆ ಎಂದು ಐಎಂಡಿ ತಿಳಿಸಿದೆ.

ಕಛ್, ಪೋರಬಂದರ್, ದೇವ್‌ಭೂಮಿ ದ್ವಾರಕಾ, ಜಾಮ್‌ನಗರ, ಜುನಾಗಢ್, ಮೊರ್ಬಿ ಜಿಲ್ಲೆಗಳ ಕರಾವಳಿ ಭಾಗದಲ್ಲಿ ಜನರನ್ನು ಸ್ಥಳಾಂತರಿಸಿದ್ದು, ಮೀನುಗಾರಿಕೆ ಚಟುವಟಿಕೆಗಳನ್ನು ನಿರ್ಬಂಧಿಸಲಾಗಿದೆ.

'ಚಂಡಮಾರುತ 15ರ ಮಧ್ಯಾಹ್ನ ಗುಜರಾತ್‌ನ ಕರಾವಳಿಗೆ ಅಪ್ಪಳಿಸಲಿದೆ. ಗಾಳಿಯ ವೇಗ ಗಂಟೆಗೆ 135-145 ಕಿ.ಮೀ ಇರಲಿದೆ. ಭಾರಿ ಮಳೆ ಆಗಬಹುದು' ಎಂದು ಐಎಂಡಿ ಅಹಮದಾಬಾದ್ ಕೇಂದ್ರದ ನಿರ್ದೇಶಕಿ ಮನೋರಮಾ ಮೊಹಂತಿ ತಿಳಿಸಿದ್ದಾರೆ.

ಸೌರಾಷ್ಟ್ರ-ಕಛ್, ಗುಜರಾತ್ ವಲಯದಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ಕರಾವಳಿ ತೀರದ ಜಿಲ್ಲೆಗಳಲ್ಲಿ ಸಮುದ್ರ ತೀರದಿಂದ 10 ಕಿ.ಮೀ.ವರೆಗಿನ ಗ್ರಾಮಗಳಿಂದ ಜನರನ್ನು ಸ್ಥಳಾಂತರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೋರ್‌ಬಂದರ್ ಜಿಲ್ಲೆಯ 31 ಗ್ರಾಮಗಳಿಂದ 3000 ಜನರು, ದೇವ್‌ಭೂಮಿ ದ್ವಾರಕಾ ಜಿಲ್ಲೆಯಿಂದ 1,500, ಕಾಂಡ್ಲಾದಿಂದ ಮೀನುಗಾರರು ಸೇರಿದಂತೆ 3000 ಜನರ ಸ್ಥಳಾಂತರವಾಗಿದೆ. ಇನ್ನೂ 23 ಸಾವಿರ ಜನರನ್ನು ಶಿಬಿರಗಳಿಗೆ ಸ್ಥಳಾಂತರಿಸುವ ಗುರಿ ಇದೆ ಎಂದು ಕಛ್ ಜಿಲ್ಲಾಧಿಕಾರಿ ಅಮಿತ್ ಅರೋರಾ ತಿಳಿಸಿದರು.

ಈ ಮಧ್ಯೆ ರಾಜ್ಯದ ವಲ್ಸದ್, ಗಿರ್ ಸೋಮನಾಥ್, ಭಾವ್‌ನಗರ್, ಅಮ್ರೇಲಿ ಸೇರಿದಂತೆ ವಿವಿಧೆಡೆ ಸೋಮವಾರ ಸಾಧಾರಣ ಮಳೆಯಾಗಿದೆ. ಮುಂಜಾಗ್ರತೆಯಾಗಿ ಕೇಂದ್ರ ಮತ್ತು ರಾಜ್ಯದ ಪ್ರಾಕೃತಿಕ ವಿಕೋಪ ನಿರ್ವಹಣಾ ತಂಡ, ಭಾರತೀಯ ಕರಾವಳಿ ರಕ್ಷಣಾ ಪಡೆ ತಂಡಗಳನ್ನು ಸಜ್ಜಾಗಿರಲು ಸೂಚಿಸಲಾಗಿದೆ. ಕೇಂದ್ರವು ಮುಂಜಾಗ್ರತೆ ವಹಿಸಲು ಸೂಚಿಸಿದೆ.

ರೈಲ್ವೆ ಇಲಾಖೆ ಮುಂಜಾಗ್ರತೆ: ಸಂಭವನೀಯ ಭೂಕುಸಿತದ ಹಿನ್ನೆಲೆಯಲ್ಲಿ ರೈಲ್ವೆ ಇಲಾಖೆಯ ಭಾವ್‌ನಗರ, ಮಹುಆ, ವೆರವಲ್, ಪೋರ್‌ಬಂದರ್, ಒಖಾ, ಹಪಾ, ಗಾಂಧಿಧಾಮ್ ವಲಯದಲ್ಲಿ ಮುಂಜಾಗ್ರತೆ ವಹಿಸಿದೆ. ಮಾಂಡ್ವಿ-ಜಖೌ ಬಂದರು ವಲಯದಲ್ಲಿ ಭೂಕುಸಿತವಾಗಬಹುದು ಎಂದು ಇಲಾಖೆಯು ಅಂದಾಜು ಮಾಡಿದೆ.

11 ಸಿಬ್ಬಂದಿ ರಕ್ಷಣೆ: ಭಾರತ ಕರಾವಳಿ ಕಾವಲು ಪಡೆ (ಐಸಿಜಿ) ಸಿಬ್ಬಂದಿ ದ್ವಾರ್ಕಾದ ತೈಲಸ್ಥಾವರದಿಂದ 11 ಮಂದಿ ಸಿಬ್ಬಂದಿಯನ್ನು ವಿಮಾನದ ಮೂಲಕ ಸುರಕ್ಷಿತ ಸ್ಥಳಗಳಿಗೆ ಕರೆದೊಯ್ದರು.





ಚಂಡಮಾರುತದ ಕಾರಣ ಮಹಾರಾಷ್ಟ್ರದ ಠಾಣೆಯಲ್ಲಿ ಸೋಮವಾರ ಮರವೊಂದು ಕಾರಿನ ಮೇಲೆ ಉರುಳಿರುವುದು (ಎಡಚಿತ್ರ). ಮುಂಬೈನ ಕೊಲಾಬ ಸಮುದ್ರ ತೀರದಲ್ಲಿ ಅಪ್ಪಳಿಸುತ್ತಿದ್ದ ಭಾರಿ ಅಲೆಗಳ ನಡುವೆ ಮಕ್ಕಳು ಆಟವಾಡಿದರು —ಪಿಟಿಐ ಚಿತ್ರಗಳು

ಬಿಕ್ಕಟ್ಟು ನಿರ್ವಹಣಾ ಸಮಿತಿ ಪರಿಶೀಲನೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಬಿಕ್ಕಟ್ಟು ನಿರ್ವಹಣಾ ಸಮಿತಿ (ಎನ್‌ಸಿಎಂಸಿ), ಗುಜರಾತ್ ಸರ್ಕಾರ ಮತ್ತು ಕೇಂದ್ರ ಸಂಸ್ಥೆಗಳ ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳನ್ನು ಪರಿಶೀಲಿಸಿದರು.

ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಸೂಚಿಸಿದೆ. ಸುಮಾರು 21 ಸಾವಿರ ದೋಣಿಗಳ ಕಾರ್ಯಸ್ಥಗಿತವಾಗಿದೆ. ಸಂಭವನೀಯ ಬಾಧಿತ ಗ್ರಾಮಗಳ ಪಟ್ಟಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿಯೊಬ್ಬರ ಸುರಕ್ಷತೆ, ಒಳಿತಿಗೆ ಪ್ರಾರ್ಥನೆ: ಪ್ರಧಾನಿ

ನವದೆಹಲಿ (ಪಿಟಿಐ): ಬಿಪರ್‌ಜಾಯ್ ಚಂಡಮಾರುತದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಗುಜರಾತ್‌ನಲ್ಲಿ ಕೈಗೊಂಡಿರುವ ಮುಂಜಾಗ್ರತೆ ಸೇರಿದಂತೆ ಒಟ್ಟು ಪರಿಸ್ಥಿತಿಯ ಪರಿಶೀಲನೆ ನಡೆಸಿದರು.

ಸಂಭವನೀಯ ಬಾಧಿತ ಪ್ರದೇಶಗಳಿಂದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಆದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ. 'ಜನರ ಸುರಕ್ಷತೆಗೆ ತಂಡ ಸಜ್ಜಾಗಿದೆ. ಪ್ರತಿಯೊಬ್ಬರ ಸುರಕ್ಷತೆ, ಒಳಿತಿಗಾಗಿ ಪ್ರಾರ್ಥಿಸುತ್ತೇನೆ' ಎಂದು ಸಭೆಯ ಬಳಿಕ ಮೋದಿ ಅವರು ಟ್ವೀಟ್ ಮಾಡಿದ್ದಾರೆ.



ಚಂಡಮಾರುತ ಭೀತಿಯ ಹಿನ್ನೆಲೆಯಲ್ಲಿ ಗುಜರಾತ್‌ನ ಕಛ್ ಜಿಲ್ಲೆಯಲ್ಲಿ ಸುರಕ್ಷಿತ ಸ್ಥಳಗಳಿಗೆ ಜನರನ್ನು ಸೋಮವಾರ ಸ್ಥಳಾಂತರಿಸಲಾಯಿತು —ಪಿಟಿಐ ಚಿತ್ರ

ಗರಿಷ್ಠ ಕಾಲ ಸಕ್ರಿಯ

ನವದೆಹಲಿ (ಪಿಟಿಐ): ಇದೇ 15ರಂದು ಗುಜರಾತ್ ಪ್ರವೇಶಿಸಲಿದೆ ಎಂದು ಅಂದಾಜಿಸಿರುವ ಬಿಪರ್‌ಜಾಯ್ ಚಂಡಮಾರುತ, ಅರಬ್ಬಿ ಸಮುದ್ರದಲ್ಲಿ ಗರಿಷ್ಠ ಅವಧಿ ಸಕ್ರಿಯವಾಗಿದ್ದ ಚಂಡಮಾರುತವಾಗಿರಲಿದೆ ಎಂದು ಐಎಂಡಿ ತಿಳಿಸಿದೆ.

ಜೂನ್ 6ರಂದು ಬೆಳಿಗ್ಗೆ 5.30ರಲ್ಲಿ ಅರಬ್ಬಿ ಸಮುದ್ರದಲ್ಲಿ ಮೂಡಿರುವ 'ಬಿಪರ್‌ಜಾಯ್' ಸದ್ಯ ಏಳು ದಿನ, 12 ಗಂಟೆ ಕಾಲ ಸಕ್ರಿಯವಾಗಿದೆ. ಈ ಮೊದಲು 2019ರಲ್ಲಿ ಕಾಣಿಸಿದ್ದ ಕ್ಯಾರ್ ಚಂಡಮಾರುತ 9 ದಿನ, 15 ಗಂಟೆ ಸಕ್ರಿಯವಾಗಿತ್ತು.

1965ರ ನಂತರ ಪಶ್ಚಿಮದ ರಾಜ್ಯವನ್ನು ಅಪ್ಪಳಿಸಲಿರುವ ಮೂರನೇ ಚಂಡಮಾರುತ ಇದಾಗಿದೆ. ಈ ಹಿಂದೆ 1996 ಮತ್ತು 1998ರಲ್ಲಿ ಚಂಡಮಾರುತ ಗುಜರಾತ್ ಕರಾವಳಿಯನ್ನು ಹಾದುಹೋಗಿತ್ತು.

ಅಂಕಿ ಅಂಶಗಳ ಪ್ರಕಾರ, 1965 ರಿಂದ 2022ರವರೆಗೆ ಅರಬ್ಬಿ ಸಮುದ್ರದಲ್ಲಿ 13 ಚಂಡಮಾರುತಗಳು ಮೂಡಿವೆ. ಇವುಗಳಲ್ಲಿ 2 ಗುಜರಾತ್‌ನ ಕರಾವಳಿ, 1 ಮಹಾರಾಷ್ಟ್ರ, 1 ಪಾಕಿಸ್ತಾನದ ಕರಾವಳಿ, ಮೂರು ಒಮನ್-ಯೆಮೆನ್ ಕರಾವಳಿ ವಲಯ ಹಾದುಹೋಗಿವೆ. ಸಮುದ್ರವ್ಯಾಪ್ತಿಯಲ್ಲಿಯೇ 6 ದುರ್ಬಲಗೊಂಡಿವೆ.

ಕೋವಿನ್ ಪೋರ್ಟಲ್ ದತ್ತಾಂಶ ಸೋರಿಕೆಯಾಗಿಲ್ಲ: ಕೇಂದ್ರ

ನವದೆಹಲಿ (ಪಿಟಿಐ): 'ಕೋವಿನ್' ಪೋರ್ಟಲ್‌ನಲ್ಲಿ ನೋಂದಣಿ ಮಾಡಿದ್ದ ಫಲಾನುಭವಿಗಳ ದತ್ತಾಂಶ ಸೋರಿಕೆಯಾಗಿದೆ ಎಂಬ ವರದಿಯು 'ಯಾವುದೇ ಆಧಾರವಿಲ್ಲದ್ದು' ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ಸ್ಪಷ್ಟಪಡಿಸಿದೆ.

ಈ ವಿಚಾರವಾಗಿ ಪರಿಶೀಲನೆ ನಡೆಸಿ ವರದಿ ನೀಡುವಂತೆ ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್‌ಗೆ (ಸಿಇಆರ್‌ಟಿ -ಇನ್) ಮನವಿ ಮಾಡಿದೆ. ಕೋವಿನ್ ಪೋರ್ಟಲ್ ಸಂಪೂರ್ಣ ಸುರಕ್ಷಿತವಾಗಿದ್ದು, ದತ್ತಾಂಶ ಗೋಪ್ಯತೆಗಾಗಿ ಹಲವು ಸುರಕ್ಷಿತ ಮಾರ್ಗಗಳನ್ನು ಅಳವಡಿಸಲಾಗಿದೆ. ಆದರೂ ದತ್ತಾಂಶಗಳ ಸುರಕ್ಷತೆಯ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದೂ ಸಚಿವಾಲಯ ತಿಳಿಸಿದೆ.

ಕೋವಿನ್ ಪೋರ್ಟಲ್‌ನಲ್ಲಿ ಸಂಗ್ರಹವಾಗಿದ್ದ ಕೋವಿಡ್ ಲಸಿಕೆ ಪಡೆದುಕೊಂಡಿರುವವರ ಮಾಹಿತಿಯು ಸೋರಿಕೆಯಾಗಿದೆ ಎಂದು ವರದಿಯಾಗಿತ್ತು.

ತನಿಖೆಗೆ ವಿರೋಧ ಪಕ್ಷಗಳ ಆಗ್ರಹ

'ಕೋವಿನ್' ಪೋರ್ಟಲ್‌ನಲ್ಲಿ ದತ್ತಾಂಶ ಸೋರಿಕೆಯಾಗಿರುವ ವರದಿಯ ಕುರಿತು ತನಿಖೆ ನಡೆಸಬೇಕೆಂದು ವಿರೋಧ ಪಕ್ಷಗಳು ಆಗ್ರಹಿಸಿವೆ.

ದತ್ತಾಂಶ ಸೋರಿಕೆಯಾಗುವುದನ್ನು ತಡೆಯಲು ಕೇಂದ್ರ ಸರ್ಕಾರವು ಕ್ರಮ ಕೈಗೊಳ್ಳಬೇಕು ಎಂದೂ ಒತ್ತಾಯಿಸಿವೆ. 'ಇದು ಕ್ರಿಮಿನಲ್ ನಿರ್ಲಕ್ಷ್ಯ,' ಎಂದು ಕಾಂಗ್ರೆಸ್ ಆರೋಪಿಸಿದೆ.

'ಡಿಜಿಟಲ್ ಇಂಡಿಯಾದಲ್ಲಿ ಕೇಂದ್ರ ಸರ್ಕಾರವು ನಾಗರಿಕರ ಖಾಸಗಿತನವನ್ನು ನಿರ್ಲಕ್ಷಿಸುತ್ತಿದೆ. ಕೋವಿಡ್ ಲಸಿಕೆ ಪಡೆದಿರುವ ಪ್ರತಿಯೊಬ್ಬ ನಾಗರಿಕನ ಖಾಸಗಿ ದತ್ತಾಂಶವು ಸಾರ್ವಜನಿಕವಾಗಿ ಲಭ್ಯವಿದೆ. ಇದು ನಡೆಯಲು ಯಾರು ಅವಕಾಶ ಮಾಡಿಕೊಟ್ಟರು' ಎಂದು ಸಂಸದ ಕಾರ್ತಿ ಚಿದಂಬರಂ ಪ್ರಶ್ನಿಸಿದಿದ್ದಾರೆ.

ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಇದಕ್ಕೆ ಉತ್ತರ ನೀಡಬೇಕು ಎಂದೂ ಅವರು ಆಗ್ರಹಿಸಿದ್ದಾರೆ.

ಎಂಬಿಬಿಎಸ್ ಪೂರ್ಣಕ್ಕೆ 9 ವರ್ಷದ ಗಡುವು

ನವದೆಹಲಿ(ಪಿಟಿಐ): ಪ್ರಥಮ ವರ್ಷದ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಒಂಬತ್ತು ವರ್ಷದೊಳಗೆ ಕೋರ್ಸ್ ಪೂರ್ಣಗೊಳಿಸಬೇಕು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗದ ನಿಯಮಾವಳಿಗಳು ಹೇಳಿವೆ.

ಆಯೋಗ ಪ್ರಕಟಿಸಿರುವ ವೈದ್ಯಕೀಯ ಪದವಿ ಶಿಕ್ಷಣದ ನಿಯಮಾವಳಿಗಳ (ಜಿಎಂಇಆರ್-23) ಅನ್ವಯ ವಿದ್ಯಾರ್ಥಿಗಳು ಕೋರ್ಸ್ ಪೂರ್ಣಗೊಳಿಸುವುದಕ್ಕೆ ಸಂಬಂಧಿಸಿ ಹೊಸ ಮಾನದಂಡಗಳನ್ನು ನಿಗದಿಪಡಿಸಲಾಗಿದೆ.

ದೇಶದ ಎಲ್ಲಾ ವೈದ್ಯಕೀಯ ಕಾಲೇಜುಗಳಲ್ಲಿನ ಪ್ರವೇಶಾತಿಗೆ ನೀಟ್-ಯುಜಿ ಮೆರಿಟ್ ಪಟ್ಟಿ ಆಧಾರದ ಮೇಲೆ ಏಕರೂಪದ ಕೌನ್ಸೆಲಿಂಗ್ ನಡೆಸಬೇಕು. ಪ್ರಥಮ ವರ್ಷದಲ್ಲಿ ಅನುತ್ತೀರ್ಣರಾದವರಿಗೆ ಮತ್ತೆ ಪರೀಕ್ಷೆ ಬರೆದು ಪಾಸಾಗಲು ನಾಲ್ಕು ಅವಕಾಶವಷ್ಟೇ ಸಿಗಲಿವೆ. ಒಂಬತ್ತು ವರ್ಷಗಳ ಬಳಿಕ ಶಿಕ್ಷಣ ಪೂರ್ಣಗೊಳಿಸಲು ಅವಕಾಶ ಸಿಗುವುದಿಲ್ಲ ಎಂದು ಇತ್ತೀಚೆಗೆ ಹೊರಡಿಸಿರುವ ಗೆಜೆಟ್ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದ 14,624 ಅಭ್ಯರ್ಥಿಗಳು

ನವದೆಹಲಿ (ಪಿಟಿಐ): ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಕಳೆದ ತಿಂಗಳ 28ರಂದು ನಡೆಸಿದ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಯ ಫಲಿತಾಂಶವನ್ನು ಸೋಮವಾರ ಪ್ರಕಟಿಸಿದ್ದು ಒಟ್ಟು 14,624 ಮಂದಿ ಮುಖ್ಯಪರೀಕ್ಷೆಗೆ ಅರ್ಹರಾಗಿದ್ದಾರೆ.

ಮುಖ್ಯಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳ ಪಟ್ಟಿಯನ್ನು ಯುಪಿಎಸ್‌ಸಿ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಈ ಎಲ್ಲ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಹಾಜರಾಗಲು ಅರ್ಜಿ ಸಲ್ಲಿಸಬೇಕು ಎಂದು ಯುಪಿಎಸ್‌ಸಿ ಈ ಕುರಿತು ನೀಡಿರುವ ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ.

ಫಲಿತಾಂಶ ಕುರಿತಂತೆ ಯಾವುದೇ ಮಾಹಿತಿ ಅಗತ್ಯವಿದ್ದಲ್ಲಿ ಅಭ್ಯರ್ಥಿಗಳು ಬೆಳಿಗ್ಗೆ 10 ರಿಂದ ಸಂಜೆ 5ರ ಅವಧಿಯಲ್ಲಿ ಕಚೇರಿಯಲ್ಲಿ ನೇರವಾಗಿ ಅಥವಾ ದೂರವಾಣಿ ಸಂಖ್ಯೆ 011-23385271, 011-23098543 ಅಥವಾ 011-23381125ಕ್ಕೆ ಕರೆ ಮಾಡುವ ಮೂಲಕ ಪಡೆಯಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಧ್ಯಪ್ರದೇಶ ಚುನಾವಣೆ ಕಾಂಗ್ರೆಸ್ 'ಗ್ಯಾರಂಟಿ' ಜಪ

ಜಬಲ್‌ಪುರ(ಪಿಟಿಐ): ಈ ವರ್ಷಾಂತ್ಯದಲ್ಲಿ ಮಧ್ಯಪ್ರದೇಶ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಗೆಲ್ಲಲೇಬೇಕು ಎಂದು ಪಣ ತೊಟ್ಟಿರುವ ಕಾಂಗ್ರೆಸ್ ಪಕ್ಷವು, ಅಧಿಕಾರಕ್ಕೆ ಬಂದರೆ ಕರ್ನಾಟಕದ ಮಾದರಿಯಲ್ಲಿಯೇ ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆ ಜಾರಿಯೂ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸುವುದಾಗಿ ಭರವಸೆ ನೀಡಿದೆ.

ಸೋಮವಾರ ಇಲ್ಲಿ ಕಾಂಗ್ರೆಸ್‌ನ ಚುನಾವಣಾ ಅಭಿಯಾನಕ್ಕೆ ಚಾಲನೆ ನೀಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು, ಆಡಳಿತಾರೂಢ ಬಿಜೆಪಿ ಸರ್ಕಾರದ ಅವಧಿಯಲ್ಲಿನ ವ್ಯಾಪಂ, ಪಡಿತರ ಹಂಚಿಕೆ ಹಗರಣಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಕಾಂಗ್ರೆಸ್‌ಗೆ ಅಧಿಕಾರ ನೀಡಿದರೆ ಮನೆಯ ಯಜಮಾನಿಗೆ ಮಾಸಿಕ ₹1,500, ಪ್ರತಿ ತಿಂಗಳು 100 ಯೂನಿಟ್ ಉಚಿತ ವಿದ್ಯುತ್, ₹ 500ಕ್ಕೆ ಅಡುಗೆ ಅನಿಲ ಸಿಲಿಂಡರ್, ವೃದ್ಧಾಪ್ಯ ವೇತನ ಸೌಲಭ್ಯ ನೀಡುವ ಜತೆಗೆ ಕೃಷಿ ಸಾಲ ಮನ್ನಾ ಮಾಡಲಾಗುವುದು' ಎಂದು ಘೋಷಿಸಿದರು.



ಜಬಲ್‌ಪುರದಲ್ಲಿ ಸೋಮವಾರ ನಡೆದ ಕಾಂಗ್ರೆಸ್ ರ‍್ಯಾಲಿ ವೇಳೆ ರಾಣಿ ದುರ್ಗಾವತಿ ಪ್ರತಿಮೆಗೆ ಪೂಜೆ ಸಲ್ಲಿಸಿದ ಬಳಿಕ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು, ಬುಡಕಟ್ಟು ಜನರನ್ನು ಭೇಟಿ ಮಾಡಿ ಕುಶಲೋಪರಿ ವಿಚಾರಿಸಿದರು —ಪಿಟಿಐ ಚಿತ್ರ

'ಪಕ್ಷ ಆಡಳಿತದಲ್ಲಿರುವ ರಾಜಸ್ಥಾನ, ಹಿಮಾಚಲ ಪ್ರದೇಶ ಮತ್ತು ಛತ್ತೀಸ‌ಗಢದಲ್ಲಿ ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸಲಾಗಿದೆ. ಕರ್ನಾಟಕದಲ್ಲಿ ಚುನಾವಣಾ ಪೂರ್ವದಲ್ಲಿ ಘೋಷಿಸಿದ್ದ ಐದೂ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ' ಎಂದರು.

2018ರ ಚುನಾವಣೆಯಲ್ಲಿ ಜಬಲ್‌ಪುರ ವಿಭಾಗದ ಎಂಟು ಜಿಲ್ಲೆಗಳ ವ್ಯಾಪ್ತಿಯ 38 ವಿಧಾನಸಭಾ ಕ್ಷೇತ್ರಗಳ ಪೈಕಿ 24ರಲ್ಲಿ ಕಾಂಗ್ರೆಸ್ ಜಯಗಳಿಸಿತ್ತು. ಹಾಗಾಗಿ, ಇಲ್ಲಿಯೇ ಚುನಾವಣಾ ರ‍್ಯಾಲಿ ಆರಂಭಿಸಿದ ಪ್ರಿಯಾಂಕಾ, 'ಹಣಬಲದ ಮೂಲಕ ಜನಾದೇಶ ನೀಡಿದ್ದ ಸರ್ಕಾರವನ್ನೇ ಮಧ್ಯಪ್ರದೇಶದಲ್ಲಿ ಬಿಜೆಪಿ ಉರುಳಿಸಿದೆ' ಎಂದು ಟೀಕಿಸಿದರು.

ಮಣಿಪುರ: ಸರ್ವಪಕ್ಷ ನಿಯೋಗ ಭೇಟಿಗೆ ಕಾಂಗ್ರೆಸ್ ಒತ್ತಾಯ

ಮೌನ ಮುರಿಯಲು ಪ್ರಧಾನಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಗಲಭೆ ಪೀಡಿತ ಮಣಿಪುರಕ್ಕೆ ಸರ್ವ ಪಕ್ಷಗಳ ನಿಯೋಗದ ಭೇಟಿಗೆ ಅವಕಾಶ ನೀಡುವಂತೆ ಆಗ್ರಹಿಸಿರುವ ಕಾಂಗ್ರೆಸ್ ಪಕ್ಷ, ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಭೇಟಿ ನೀಡುವುದರ ಜತಗೆ 'ಮಣಿಪುರ್ ಕಿ ಬಾತ್' ಮೂಲಕ ತಮ್ಮ ಮೌನ ಮುರಿಯಬೇಕು ಎಂದೂ ಒತ್ತಾಯಿಸಿದೆ.

ಒಡಿಶಾದ ಬಾಲೇಶ್ವರದಲ್ಲಿ ರೈಲು ಅಪಘಾತ ಸಂಭವಿಸಿದ ಸ್ಥಳಕ್ಕೆ ಸರಿಯಾದ ಸಮಯಕ್ಕೆ ಭೇಟಿ ನೀಡಿದ್ದ ಪ್ರಧಾನಿ ಅವರು, ಮಣಿಪುರಕ್ಕೆ ಇನ್ನೂ ಏಕೆ ಭೇಟಿ ನೀಡಿಲ್ಲ ಎಂದು ಕಾಂಗ್ರೆಸ್ ಸೋಮವಾರ ಕೇಳಿದೆ.

ಕಾಂಗ್ರೆಸ್ ನಾಯಕರಾದ ಮುಕುಲ್ ವಾಸ್ನಿಕ್ ಮತ್ತು ಭಕ್ತ ಚರಣ್ ದಾಸ್ ಅವರೊಂದಿಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್, 'ಮೇ 3ರಂದು ಮಣಿಪುರದಲ್ಲಿ ಭುಗಿಲೆದ್ದ ಹಿಂಸಾಚಾರ ರಾಷ್ಟ್ರೀಯ ಸಮಸ್ಯೆ ಆಗಿ ಬೆಳೆದಿದೆ. ಆದರೆ, ಶಾಂತಿ ಸ್ಥಾಪನೆಗಾಗಿ ಗೃಹ ಸಚಿವ ಅಮಿತ್ ಶಾ ಅವರು ಮಾಡಿದ ಮನವಿ ಸಂಪೂರ್ಣ ವಿಫಲವಾಗಿರುವುದಕ್ಕೆ ಕಾರಣವೇನು' ಎಂದು ಪ್ರಶ್ನಿಸಿದರು.

ಪ್ರಧಾನಿ ಅವರ ಮನ್ ಕಿ ಬಾತ್‌ನ 100ನೇ ಸಂಚಿಕೆ ಮುಗಿದಿದೆ. ಮಣಿಪುರದ ಜನರ ಶಾಂತಿಗಾಗಿ ಅವರಿಂದ ಕನಿಷ್ಠ ಒಂದು 'ಮಣಿಪುರ್ ಕಿ ಬಾತ್' ಬರಬೇಕಿದೆ. ಅವರು ಮಣಿಪುರ ಕುರಿತು ತಮ್ಮ ಮೌನವನ್ನು ಮುರಿಯಬೇಕು. ಆ ಮೂಲಕ ಶಾಂತಿಯ ಸಂದೇಶ ಕಳುಹಿಸಬೇಕು. ಶಾಂತಿ, ಸೌಹಾರ್ದ, ಸಹಜ ಸ್ಥಿತಿಯ ಮರು ಸ್ಥಾಪನೆಗಾಗಿ ಸರ್ಕಾರ ಎಲ್ಲವನ್ನೂ ಮಾಡಲಿದೆ ಎಂಬ ಭರವಸೆಯನ್ನು ಅವರು ನೀಡಬೇಕು ಎಂದು ಒತ್ತಾಯಿಸಿದರು.

ಕುಕಿ ಯುವಕನ ಹತ್ಯೆ

ಗುವಾಹಟಿ: ಮಣಿಪುರದ ಚುರಾಚಂದ್‌ಪುರ ಜಿಲ್ಲೆಯ ಲೋಕಲಾಫಾಯಿ ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ ಶಂಕಿತ ಮೈತೇಯಿ ಬಂಡುಕೋರರು ದಾಳಿ ನಡೆಸಿ, 22 ವರ್ಷದ ಯುವಕನನ್ನು ಕೊಂದಿದ್ದಾರೆ ಎಂದು ಮಣಿಪುರದ ಕುಕಿ ಸಮುದಾಯದ 'ಇಂಡಿಜಿನಸ್ ಟ್ರೈಬಲ್ ಲೀಡರ್ಸ್ ಫೋರಂ' (ಐಟಿಎಲ್‌ಎಫ್) ಸಂಘಟನೆ ತಿಳಿಸಿದೆ.

ಮಧ್ಯಾಹ್ನ 2.30ರ ವೇಳೆಯಲ್ಲಿ ಈ ಘಟನೆ ನಡೆದಿದೆ. ಮೈತೇಯಿ ಸಮುದಾಯದವರಿಗೆ ಶಾಂತಿ ಸ್ಥಾಪನೆಯ ಉದ್ದೇಶ ಇಲ್ಲ ಎಂಬುದನ್ನು ಈ ಕೃತ್ಯ ತೋರಿಸುತ್ತದೆ ಎಂದು ಅದು ಹೇಳಿದೆ.

ಚುರಾಚಂದ್‌ಪುರದ ಲಮ್ಕಾದಲ್ಲಿರುವ ಪರಿಹಾರ ಶಿಬಿರಕ್ಕೆ ರಾಜ್ಯಪಾಲರಾದ ಅನುಸೂಯಾ ಉಯಿಕೆ ಅವರು ಭೇಟಿ ನೀಡಿದ ದಿನವೇ ಈ ಘಟನೆ ನಡೆದಿದೆ. ಆದರೆ ಭದ್ರತಾ ಅಧಿಕಾರಿಗಳು ಈ ಘಟನೆ ನಡೆದಿರುವುದನ್ನು ಇನ್ನೂ ದೃಢೀಕರಿಸಿಲ್ಲ.

ತ್ರಿಪುರಾದ ಮೈತೇಯಿಗಳ ಮನವಿ (ಅಗರ್ತಲ, ಪಿಟಿಐ): ಮಣಿಪುರದಲ್ಲಿ ಶಾಂತಿ ಸ್ಥಾಪನೆಗಾಗಿ ತ್ರಿಪುರಾದ ಮೈತೇಯಿ ಸಮುದಾಯದ ಸಂಘಟನೆಗಳು ಮನವಿ ಮಾಡಿವೆ. ಅಲ್ಲದೆ ಜನಾಂಗೀಯ ಆಧಾರದ ಮೇಲೆ ರಾಜ್ಯವನ್ನು ವಿಭಜಿಸುವ ಕ್ರಮವನ್ನು ವಿರೋಧಿಸಿವೆ.

ಪ್ರಧಾನಿ ಮತ್ತು ಗೃಹ ಸಚಿವರು ಮಧ್ಯಸ್ಥಿಕೆ ವಹಿಸಿ ಮಣಿಪುರದಲ್ಲಿ ಶಾಂತಿ ಸ್ಥಾಪಿಸಬೇಕು ಎಂದು 'ದಿ ಪುತಿಬಾ ಅಂಡ್ ಕಲ್ಚರಲ್ ಸೊಸೈಟಿ' ಮತ್ತು 'ಆಲ್ ತ್ರಿಪುರಾ ಮೈತೇಯಿ ಕಮ್ಯುನಿಟಿ' ಆಗ್ರಹಿಸಿವೆ.

ಮೂವರಿಗೆ ಗಾಯ: ಇಂಫಾಲ್ ಈಸ್ಟ್ ಮತ್ತು ಕಾಂಗ್‌ಪೋಕ್ಪಿ ಜಿಲ್ಲೆಗಳ ಗಡಿ ಭಾಗವಾದ ಖಮೆನ್ಲೋಕ್ ಪ್ರದೇಶದಲ್ಲಿ ಗ್ರಾಮದ ಸ್ವಯಂ ಸೇವಕರು ಮತ್ತು ಬಂಡುಕೋರರ ನಡುವೆ ಸೋಮವಾರ ಗುಂಡಿನ ಚಕಮಕಿ ನಡೆದಿದೆ. ಇದರಲ್ಲಿ ಮೂವರಿಗೆ ಗಾಯಗಳಾಗಿದ್ದು, ಒಬ್ಬರ ಸ್ಥಿತಿ ಚಿಂತಾಜನಕವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಚಿವರ ಕಾರು: '9'ರ ನಂಟು!

ಒಂದನೇ ಪುಟದಿಂದ...

ಶಿವಕುಮಾರ್ ಮತ್ತು ಜಮೀರ್ ಅವರ ಕಾರಿನ ನೋಂದಣಿ ಸಂಖ್ಯೆಯ ನಾಲ್ಕೂ ಅಂಕಿಗಳು '9', ಎಂ.ಬಿ. ಪಾಟೀಲರ ಕಾರಿನ ಎಲ್ಲ ಅಂಕಿಗಳನ್ನು ಸೇರಿಸಿದರೆ '9'!

ಇತರ ಎಲ್ಲ ಸಚಿವರಿಗೂ 'ಇನ್ನೋವಾ ಕ್ರಿಸ್ಟಾ' ಕಾರು ನೀಡಲಾಗಿದೆ. ಈ ಪೈಕಿ, ಕೆ.ಜೆ. ಜಾರ್ಜ್ (5000), ರಾಮಲಿಂಗಾರೆಡ್ಡಿ (0001), ಶರಣಬಸಪ್ಪ ದರ್ಶನಾಪುರ (5555), ಶಿವಾನಂದ ಪಾಟೀಲ (0555), ಎಸ್.ಎಸ್. ಮಲ್ಲಿಕಾರ್ಜುನ (0002) ಅವರಿಗೆ ಹಂಚಿಕೆಯಾದ ಕಾರಿಗೆ '9'ರ ನಂಟಿಲ್ಲ. ಆದರೆ, ಫ್ಯಾನ್ಸಿ ನಂಬರ್‌ಗಳಿವು. ಆದರೆ, ಎಸ್.ಎಸ್. ಮಲ್ಲಿಕಾರ್ಜುನ ಮತ್ತು ಕೆ. ವೆಂಕಟೇಶ್ ತಮಗೆ ಹಂಚಿಕೆ ಮಾಡಿದ ಕಾರು ಪಡೆದುಕೊಂಡಿಲ್ಲ.

ಪ್ರಮುಖ ಸಚಿವರ ಕಾರು- '9'ರ ಸಂಬಂಧ

ಯಾರಿಗೆ	ಯಾವ ಕಾರು (ಮಾದರಿ)	ಓಡಿದ ಕಿ.ಮೀ	ನೋಂದಣಿ ಸಂಖ್ಯೆ
ಸಿದ್ದರಾಮಯ್ಯ	ಫಾರ್ಚುನರ್ (2019)	18,507	ಕೆಎ-3-ಜಿಎ-4545
ಡಿ.ಕೆ. ಶಿವಕುಮಾರ್	ಇನ್ನೋವಾ ಹೈಕ್ರಾಸ್(2023)	5,466	ಕೆಎ-71-ಜಿಎ-9999
ಎಂ.ಬಿ. ಪಾಟೀಲ	ಇನ್ನೋವಾ ಹೈಕ್ರಾಸ್(2023)	5,387	ಕೆಎ-02-ಜಿಬಿ-2727
ಜಮೀರ್ ಅಹಮದ್ ಖಾನ್	ಇನ್ನೋವಾ ಹೈಕ್ರಾಸ್(2023)	5,668	ಕೆಎ-15-ಜಿಎ-9999
ಸತೀಶ ಜಾರಕಿಹೊಳಿ	ಇನ್ನೋವಾ ಕ್ರಿಸ್ಟಾ(2021)	47,219	ಕೆಎ-02-ಜಿಎ-0909
ಕೆ.ಎಚ್. ಮುನಿಯಪ್ಪ	ಇನ್ನೋವಾ ಕ್ರಿಸ್ಟಾ(2021)	1,11,215	ಕೆಎ-70-ಜಿಎ-9999
ಪ್ರಿಯಾಂಕ್ ಖರ್ಗೆ	ಇನ್ನೋವಾ ಕ್ರಿಸ್ಟಾ(2020)	80,985	ಕೆಎ-50-ಜಿಎ-9000
ಎನ್. ಚಲುವರಾಯಸ್ವಾಮಿ	ಇನ್ನೋವಾ ಕ್ರಿಸ್ಟಾ(2021)	61,770	ಕೆಎ-33-ಜಿಎ-0999

4-5 ಸಚಿವರು ಹೊಸ ಕಾರು ನೀಡುವಂತೆ ಬೇಡಿಕೆ ಇಟ್ಟಿದ್ದಾರೆ.

ಸಾಮಾನ್ಯವಾಗಿ ಮೂರು ವರ್ಷ ಹಳೆಯ ಅಥವಾ 1 ಲಕ್ಷ ಕಿ.ಮೀ ಸಂಚರಿಸಿದ ಕಾರನ್ನು ಬದಲಾಯಿಸಿ ಸಚಿವರಿಗೆ ಹಂಚಿಕೆ ಮಾಡಲಾಗುತ್ತದೆ. 16 ಸಚಿವರಿಗೆ ಹಂಚಿಕೆ ಮಾಡಿದ ಕಾರುಗಳು 1 ಲಕ್ಷ ಕಿ.ಮೀಗೂ ಹೆಚ್ಚು ಓಡಿವೆ. ಅದರಲ್ಲೂ ಈಶ್ವರ ಖಂಡ್ರೆ ಮತ್ತು ಶರಣಬಸಪ್ಪ ದರ್ಶನಾಪುರ ಅವರಿಗೆ ಹಂಚಿಕೆಯಾದ ಕಾರುಗಳು 2 ಲಕ್ಷಕ್ಕೂ ಹೆಚ್ಚು ಕಿ.ಮೀ ಓಡಿವೆ.

ಸಂಕ್ಷಿಪ್ತ ಸುದ್ದಿ

ಅಮೃತಸರ: ಪಾಕ್ ಡ್ರೋನ್ ವಶ

ಚಂಡೀಗಢ (ಪಿಟಿಐ): ಪಂಜಾಬ್‌ನ ಅಮೃತಸರ ಜಿಲ್ಲೆಯ ಸೈದಾಪುರ ಕಲಾನ್ ಗ್ರಾಮದಲ್ಲಿ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಯೋಧರು ಪಾಕಿಸ್ತಾನದ ಡ್ರೋನ್ ವಶಪಡಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ಹೇಳಿದ್ದಾರೆ.

ಖಚಿತ ಮಾಹಿತಿಯ ಅನ್ವಯ ಗ್ರಾಮದಲ್ಲಿ ಶೋಧ ಕಾರ್ಯಾಚರಣೆ ನಡೆಸಿದ ಬಿಎಸ್‌ಎಫ್ ಯೋಧರು ಮುರಿದ ಸ್ಥಿತಿಯಲ್ಲಿದ್ದ ಮಾನವರಹಿತ ವೈಮಾನಿಕ ವಾಹನವನ್ನು (ಯುಎವಿ) ಗುರುದ್ವಾರವೊಂದರ ಬಳಿ ವಶಕ್ಕೆ ಪಡೆದಿದ್ದಾರೆ ಎಂದೂ ವಿವರಿಸಿದ್ದಾರೆ. ಡಿಜೆಐ ಮ್ಯಾಟ್ರಿಸ್ 300 ಆರ್‌ಟಿಕೆ ಶ್ರೇಣಿಯ ಡ್ರೋನ್ ಇದಾಗಿದೆ ಎಂದೂ ಹೇಳಿದ್ದಾರೆ.

ಜೂನ್ 11 ರಂದು ಪಂಜಾಬ್ ಪೊಲೀಸರು ಮತ್ತು ಬಿಎಸ್‌ಎಫ್ ಯೋಧರು ಶೋಧ ಕಾರ್ಯಾಚರಣೆ ನಡೆಸಿ ತರನ್ ತಾರನ್ ಜಿಲ್ಲೆಯಿಂದ ಪಾಕಿಸ್ತಾನದ ಡ್ರೋನ್ ಅನ್ನು ವಶಪಡಿಸಿಕೊಂಡಿದ್ದರು.

'ಎಎಪಿ ರ‍್ಯಾಲಿಯಲ್ಲಿ ಬಿಜೆಪಿ ಬೆಂಬಲಿಗರು ಭಾಗಿ'

ನವದೆಹಲಿ (ಪಿಟಿಐ): ದೆಹಲಿ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರ ಸರ್ಕಾರ ಹೊರಡಿಸಿರುವ ಸುಗ್ರೀವಾಜ್ಞೆ ವಿರುದ್ಧ ಎಎಪಿ ಹಮ್ಮಿಕೊಂಡಿದ್ದ ರ‍್ಯಾಲಿಯಲ್ಲಿ ಬಿಜೆಪಿ ಕಾರ್ಯಕರ್ತರು ಮತ್ತು ಬೆಂಬಲಿಗರು ಕೂಡ ಪಾಲ್ಗೊಂಡಿದ್ದರು ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಿಳಿಸಿದ್ದಾರೆ.

ಸುಗ್ರೀವಾಜ್ಞೆ ವಿರುದ್ಧ ಬಿಜೆಪಿ ಕಾರ್ಯಕರ್ತರಿಗೂ ಅಸಮಾಧಾನವಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಡೆ ಸರಿಯಲ್ಲವೆಂದು ಆ ಪಕ್ಷದವರೇ ಹೇಳುತ್ತಿದ್ದಾರೆ. ಇಲ್ಲಿನ ರಾಮಲೀಲಾ ಮೈದಾನದಲ್ಲಿ ಭಾನುವಾರ ನಡೆದ ರ‍್ಯಾಲಿಯಲ್ಲಿ ಅವರೆಲ್ಲರೂ ಭಾಗಿಯಾಗಿ ಬೆಂಬಲ ಘೋಷಿಸಿದ್ದಾರೆ ಎಂದು ಟ್ವೀಟ್ ಮಾಡಿದ್ದಾರೆ.

ಅಮಿತ್ ಅಗರ್‌ವಾಲ್ ಯುಐಡಿಐಎ ಸಿಇಒ

ನವದೆಹಲಿ (ಪಿಟಿಐ): ಹಿರಿಯ ಐಎಎಸ್ ಅಧಿಕಾರಿ ಅಮಿತ್ ಅಗರ್‌ವಾಲ್ ಅವರನ್ನು ಭಾರತದ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ (ಯುಐಡಿಎಐ) ಸಿಇಒ ಆಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ.

ಅಣ್ವಸ್ತ್ರ ಆಧಾರಿತ ಶಸ್ತ್ರಾಸ್ತ್ರಗಳ ಆಧುನೀಕರಣಕ್ಕೆ ಆದ್ಯತೆ

ನವದೆಹಲಿ (ಪಿಟಿಐ): ಅಣ್ವಸ್ತ್ರಸಜ್ಜಿತ ದೇಶಗಳು ಅಣ್ವಸ್ತ್ರ ಆಧಾರಿತ ಶಸ್ತ್ರಾಸ್ತ್ರಗಳ ಆಧುನೀಕರಣ ಕಾರ್ಯವನ್ನು ನಿರಂತರವಾಗಿ ಕೈಗೊಂಡಿವೆ ಎಂದು ಸ್ವೀಡಿಶ್‌ನ ಸ್ಟಾಕ್‌ಹೋಂ ಅಂತರ ರಾಷ್ಟ್ರೀಯ ಶಾಂತಿ ಸಂಶೋಧನಾ ಸಂಸ್ಥೆ (ಎಸ್‌ಐಪಿಆರ್‌ಐ) ತಿಳಿಸಿದೆ.

ಭಾರತ, ಅಮೆರಿಕ, ರಷ್ಯಾ, ಇಂಗ್ಲೆಂಡ್, ಫ್ರಾನ್ಸ್, ಚೀನಾ, ಪಾಕಿಸ್ತಾನ ರಾಷ್ಟ್ರಗಳು 2022ರಲ್ಲಿ ಅಣ್ವಸ್ತ್ರಸಜ್ಜಿತ ಅಥವಾ ಅಣ್ವಸ್ತ್ರ ಸಾಮರ್ಥ್ಯದ ಹೊಸ ಶಸ್ತ್ರಾಸ್ತ್ರಗಳನ್ನು ಸೇರ್ಪಡೆಗೊಳಿಸಿವೆ ಎಂದು ತನ್ನ ವರದಿಯಲ್ಲಿ ತಿಳಿಸಿದೆ.

ಚೀನಾ ಕಳೆದ ಒಂದು ವರ್ಷದಲ್ಲಿ ಅಣ್ವಸ್ತ್ರ ಸಿಡಿತಲೆಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿದೆ. ಚೀನಾದ ಬಳಿ 2022ರ ಜನವರಿಯಲ್ಲಿ 350 ಸಿಡಿತಲೆಗಳಿದ್ದರೆ, ಆ ಸಂಖ್ಯೆ 2023ರ ಜನವರಿಯಲ್ಲಿ 410ಕ್ಕೆ ಏರಿದೆ ಎಂದಿದೆ.

ತನ್ನ ಸೇನಾಪಡೆಯನ್ನು ಹೇಗೆ ಸಜ್ಜುಗೊಳಿಸಬೇಕು ಎಂಬುದನ್ನು ಗಮನಿಸಿದರೆ ಚೀನಾವು ಗರಿಷ್ಠ ಸಂಖ್ಯೆಯಲ್ಲಿ ಖಂಡಾಂತರ ಕ್ಷಿಪಣಿ ಒಳಗೊಂಡಿದೆ. ದಶಕದ ಅಂತ್ಯದೊಳಗೆ ಅಮೆರಿಕ ಮತ್ತು ರಷ್ಯಾ ಇಷ್ಟು ಪ್ರಮಾಣದ ಕ್ಷಿಪಣಿ ಹೊಂದಬಹುದು ಎಂದು ಅಂದಾಜಿಸಿದೆ.

ಭಾರತ, ಪಾಕಿಸ್ತಾನ ತನ್ನ ಅಣ್ವಸ್ತ್ರ ಸಜ್ಜಿತ ಶಸ್ತ್ರಾಸ್ತ್ರಗಳ ಸಾಮರ್ಥ್ಯ ಹೆಚ್ಚಿಸುತ್ತಿದೆ. 2022ರಲ್ಲಿ ಹೊಸ ಮಾದರಿ ಶಸ್ತ್ರಾಸ್ತ್ರಗಳನ್ನು ಸೇನೆಗೆ ಪರಿಚಯಿಸಿದೆ. ಅಲ್ಲದೆ ಚೀನಾ ಕೂಡ ಗಣನೀಯವಾಗಿ ಹೆಚ್ಚಿಸಿದೆ ಎಂದು ಎಸ್‌ಐಪಿಆರ್‌ಐನ ಹನ್ಸ್ ಎಂ.ಕ್ರಿಸ್ಟೀನ್ ಹೇಳಿದರು.

ಜಾಗತಿಕವಾಗಿ ಜನವರಿ 2023ರಲ್ಲಿ ಇದ್ದಂತೆ ಒಟ್ಟಾರೆ 12,512 ಅಣ್ವಸ್ತ್ರ ಸಿಡಿತಲೆಗಳಿವೆ. ಈ ಪೈಕಿ 9,576 ಸಂಭವನೀಯ ಬಳಕೆಗೆ ಸೇನೆಗಳ ಸುಪರ್ದಿಯಲ್ಲಿವೆ. ಜನವರಿ 22ಕ್ಕೆ ಹೋಲಿಸಿದರೆ 86 ಸಿಡಿತಲೆಗಳು ಹೆಚ್ಚಾಗಿವೆ ಎಂದು ತಿಳಿಸಿದರು

ಸೂರ್ಯಕಾಂತಿ ಬೀಜಕ್ಕೆ ಕನಿಷ್ಠ ಬೆಂಬಲ ಬೆಲೆಗೆ ರೈತರ ಆಗ್ರಹ

ದೆಹಲಿ- ಚಂಡೀಗಢ ಹೆದ್ದಾರಿ ತಡೆ

ಕುರುಕ್ಷೇತ್ರ (ಪಿಟಿಐ): ಸೂರ್ಯಕಾಂತಿ ಬೀಜಕ್ಕೆ ಕನಿಷ್ಠ ಬೆಂಬಲ ಬೆಲೆ ನೀಡಬೇಕೆಂದು ಆಗ್ರಹಿಸಿ ಇಲ್ಲಿನ ಪಿಪ್ಲಿಯ ಧಾನ್ಯ ಮಾರುಕಟ್ಟೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಮಹಾಪಂಚಾಯತ್ ಬಳಿಕ ರೈತರು ದೆಹಲಿ- ಚಂಡೀಗಢ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರ ತಡೆದು ಪ್ರತಿಭಟಿಸಿದರು.

ರೈತರು ಪ್ರತಿಭಟನೆ ನಡೆಸಿದ ಕಾರಣ ಪೊಲೀಸರು ಬೇರೆ ರಸ್ತೆಗಳ ಮೂಲಕ ವಾಹನಗಳನ್ನು ಕಳುಹಿಸಿದರು ಎಂದೂ ಹೇಳಿವೆ.

'ಬೇಡಿಕೆಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಮನೋಹರ್ ಲಾಲ್ ಕಟ್ಟರ್ ಅವರ ಜೊತೆ ಚರ್ಚಿಸಲು ಸಭೆ ಏರ್ಪಡಿಸುವುದಾಗಿ ಸ್ಥಳೀಯಾಡಳಿತ ಹೇಳಿತ್ತು. ಆದರೆ, ಸಭೆ ಏರ್ಪಡಿಸದ ಕಾರಣ ರಸ್ತೆ ತಡೆ ನಡೆಸುತ್ತಿದ್ದೇವೆ' ಎಂದು ರೈತ ಮುಖಂಡ ಕರಂ ಸಿಂಗ್ ಮಥಾನ ಹೇಳಿದರು.

ಭಾರತೀಯ ಕಿಸಾನ್ ಯೂನಿಯನ್ ಮುಖಂಡ ರಾಕೇಶ್ ಟಿಕಾಯತ್, ಕುಸ್ತಿಪಟು ಬಜರಂಗ್ ಪೂನಿಯಾ, ವಿವಿಧ ಖಾಪ್‌ಗಳ ಮುಖಂಡರು ಪಾಲ್ಗೊಂಡಿದ್ದರು. ಭಾರತೀಯ ಕಿಸಾನ್ ಯೂನಿಯನ್ (ಚಾರುಣಿ) ಮಹಾಪಂಚಾಯತ್‌ಗೆ ಕರೆ ನೀಡಿತ್ತು.

1.48 ಲಕ್ಷ ರೈತರ ವಿರುದ್ಧ ಇನ್ನೂ ಇವೆ ಪ್ರಕರಣಗಳು: ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ್ದ 1.48 ಲಕ್ಷ ರೈತರ ವಿರುದ್ಧದ ಪ್ರಕರಣಗಳನ್ನು ಇನ್ನೂ ವಾಪಸ್ ಪಡೆದಿಲ್ಲ ಎಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಮುಖಂಡ ಶಿವಕುಮಾರ್ ಶರ್ಮಾ ಸೋಮವಾರ ತಿಳಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು,'ಪ್ರತಿಭಟನೆಯು ಕೊನೆಗೊಂಡ ಬಳಿಕ 30 ದಿನಗಳೊಳಗೆ ಎಲ್ಲಾ ಪ್ರಕರಣಗಳನ್ನು ವಾಪಸ್ ಪಡೆಯುವುದಾಗಿ ಕೇಂದ್ರ ಸರ್ಕಾರವು ನಮಗೆ ಭರವಸೆ ನೀಡಿತ್ತು. ಆದರೆ ಪ್ರಕರಣಗಳು ಇನ್ನೂ ಇವೆ. ನಾನೂ ಸೇರಿದಂತೆ ರೈತರು ಈ ಪ್ರಕರಣಗಳಿಂದಾಗಿ ನ್ಯಾಯಾಲಯಕ್ಕೆ ಓಡಾಡುತ್ತಿದ್ದೇವೆ' ಎಂದು ಹೇಳಿದ್ದಾರೆ.



ಕುರುಕ್ಷೇತ್ರದ ರಾಷ್ಟ್ರೀಯ ಹೆದ್ದಾರಿಯಲ್ಲಿ ರೈತರು ವಾಹನ ಸಂಚಾರಕ್ಕೆ ಸೋಮವಾರ ತಡೆಯೊಡ್ಡಿದರು —ಪಿಟಿಐ ಚಿತ್ರ

ಸುಸ್ಥಿರಾಭಿವೃದ್ಧಿ ಗುರಿ ಸಾಧನೆಗೆ 7 ವರ್ಷದ ಕ್ರಿಯಾ ಯೋಜನೆ

ವಾರಾಣಸಿ (ಪಿಟಿಐ): ಸುಸ್ಥಿರಾಭಿವೃದ್ಧಿ ಗುರಿಗಳ ಸಾಧನೆಗಾಗಿ ಇನ್ನಷ್ಟು ವೇಗ ನೀಡಲು ಭಾರತವು ಏಳು ವರ್ಷಗಳ ಕ್ರಿಯಾಯೋಜನೆಯನ್ನು ರೂಪಿಸಿದ್ದು, ಅದನ್ನು ಜಿ-20 ಸದಸ್ಯ ರಾಷ್ಟ್ರಗಳ ಸಚಿವರ ಸಮೂಹ ಅಂಗೀಕರಿಸಿದೆ.

ಸೋಮವಾರ ನಡೆದ ಜಿ-20 ರಾಷ್ಟ್ರಗಳ ಅಭಿವೃದ್ಧಿ ಸಚಿವರುಗಳ ಸಭೆ, ಸುಸ್ಥಿರಾಭಿವೃದ್ಧಿ ಜೀವನಶೈಲಿ ಹಾಗೂ ತಾಪಮಾನ ಕುಗ್ಗಿಸುವ ಕಾರ್ಯಗಳಲ್ಲಿ ಸಹಕಾರ ಮತ್ತು ಪಾಲುದಾರಿಕೆಯನ್ನು ಮುಂದುವರಿಸುವ ಪ್ರಸ್ತಾವವನ್ನು ಅನುಮೋದಿಸಿತು.

ಸದಸ್ಯ ರಾಷ್ಟ್ರಗಳ ಅಭಿವೃದ್ಧಿ ಸಚಿವರ ಸಭೆಯಲ್ಲಿ ಮಾತನಾಡಿದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು, ಪೂರೈಕೆ ವ್ಯವಸ್ಥೆಯಲ್ಲಿನ ಏರುಪೇರು, ದೀರ್ಘ ಕಾಲದ ಸಾಲದ ಬಿಕ್ಕಟ್ಟು, ಇಂಧನ, ಆಹಾರ ಮತ್ತು ರಸಗೊಬ್ಬರ ಭದ್ರತೆ ಕುರಿತ ಒತ್ತಡಗಳಿಂದಾಗಿ ಜಾಗತಿಕ ಆರ್ಥಿಕತೆ ಚೇತರಿಕೆಯೂ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ ಎಂದು ಹೇಳಿದರು.

ಪರಸ್ಪರ ಸಂಬಂಧವಿರುವ ವಿವಿಧ ಬಿಕ್ಕಟ್ಟುಗಳಿಂದಾಗಿ ಜಗತ್ತು ಬಳಲುತ್ತಿದೆ. ಹೀಗಾಗಿ, ಸುಸ್ಥಿರಾಭಿವೃದ್ಧಿ ಗುರಿ ಸಾಧಿಸುವಲ್ಲಿಯೂ ಪ್ರಯಾಸದ ಅನುಭವವಾಗುತ್ತಿದೆ ಎಂದರು.

ಇದೇ ಹಿನ್ನೆಲೆಯಲ್ಲಿ ಭಾರತ ಈಗ ಏಳು ವರ್ಷಗಳ ಮಹತ್ವಾಕಾಂಕ್ಷೆಯ ಕ್ರಿಯಾ ಯೋಜನೆ ರೂಪಿಸಿದ್ದು, ಇದು ಅಭಿವೃದ್ಧಿಗೆ ಚೇತರಿಕೆ ನೀಡಲಿದೆ. ಪರಸ್ಪರ ಸಹಕಾರ, ಒಗ್ಗೂಡುವಿಕೆ ಹಾಗೂ ಜಿ-20 ಕಾರ್ಯಕ್ರಮಗಳ ಜಾರಿಗೆ ನೀಲನಕ್ಷೆಯನ್ನು ಒಳಗೊಂಡಿದೆ ಎಂದರು.

ಅಭಿವೃದ್ಧಿ ಸಚಿವರ ಸಭೆಯು ಅಂಗೀಕರಿಸಿದ ಪ್ರಸ್ತಾವವನ್ನು ಸೆಪ್ಟೆಂಬರ್ 9 ಮತ್ತು 10ರಂದು ನವದೆಹಲಿಯಲ್ಲಿ ನಡೆಯಲಿರುವ ಜಿ-20 ರಾಷ್ಟ್ರಗಳ ಮುಖಂಡರ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗುತ್ತದೆ.

ಕ್ರಿಕೆಟ್: ಏಕದಿನ ವಿಶ್ವಕಪ್ ಕರಡು ವೇಳಾಪಟ್ಟಿ; ಅಹಮದಾಬಾದ್‌ನಲ್ಲಿ ಹಣಾಹಣಿ

ಅ.15ರಂದು ಭಾರತ–ಪಾಕ್ ಪಂದ್ಯ

ನವದೆಹಲಿ (ಪಿಟಿಐ): ಭಾರತ ತಂಡವು ಮುಂಬರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಅ.8 ರಂದು ಆಸ್ಟ್ರೇಲಿಯಾ ವಿರುದ್ಧದ ಪಂದ್ಯದೊಂದಿಗೆ ಪ್ರಶಸ್ತಿಯೆಡೆಗಿನ ಅಭಿಯಾನ ಆರಂಭಿಸಲಿದೆ.

ವಿಶ್ವಕಪ್ ಟೂರ್ನಿ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಭಾರತದಲ್ಲಿ ನಡೆಯಲಿದೆ. ಬಿಸಿಸಿಐ ಸಿದ್ಧಪಡಿಸಿರುವ ಕರಡು ವೇಳಾಪಟ್ಟಿಯಂತೆ ಭಾರತ–ಆಸ್ಟ್ರೇಲಿಯಾ ಪಂದ್ಯ ಅ.8 ರಂದು ಚೆನ್ನೈನಲ್ಲಿ ಆಯೋಜನೆಯಾಗಿದೆ.

ಕ್ರಿಕೆಟ್ ಪ್ರೇಮಿಗಳ ಕುತೂಹಲಕ್ಕೆ ಕಾರಣವಾಗಿರುವ ಭಾರತ– ಪಾಕಿಸ್ತಾನ ಪಂದ್ಯ ಅ.15 ರಂದು ನಡೆಯಲಿದ್ದು, ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಆತಿಥ್ಯ ವಹಿಸಲಿದೆ.

'ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ವಿಶ್ವಕಪ್ ಟೂರ್ನಿಯ ಕರಡು ವೇಳಾಪಟ್ಟಿಯನ್ನು ಐಸಿಸಿಗೆ ಸಲ್ಲಿಸಿದೆ. ಐಸಿಸಿಯು ವೇಳಾಪಟ್ಟಿಯನ್ನು ಟೂರ್ನಿಯಲ್ಲಿ ಪಾಲ್ಗೊಳ್ಳುವ ಎಲ್ಲ ದೇಶಗಳ ಕ್ರಿಕೆಟ್ ಮಂಡಳಿಗಳಿಗೆ ಕಳುಹಿಸಿಕೊಡಲಿದೆ. ಅವರ ಅಭಿಪ್ರಾಯ ತಿಳಿದುಕೊಂಡ ಬಳಿಕ ಮುಂದಿನ ವಾರ ವೇಳಾಪಟ್ಟಿಯನ್ನು ಅಂತಿಮಗೊಳಿಸಲಾಗುವುದು' ಎಂದು ಇಎಸ್‌ಪಿಎನ್ ಕ್ರಿಕ್‌ಇನ್ಫೊ ವರದಿ ಮಾಡಿದೆ.

ತಾತ್ಕಾಲಿಕ ವೇಳಾಪಟ್ಟಿಯ ಪ್ರಕಾರ ಉದ್ಘಾಟನಾ ಪಂದ್ಯ ಅಹಮದಾಬಾದ್‌ನಲ್ಲಿ ಅ.5 ರಂದು ನಡೆಯಲಿದ್ದು, ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವು ಕಳೆದ ಬಾರಿಯ ರನ್ನರ್ ಅಪ್ ನ್ಯೂಜಿಲೆಂಡ್ ವಿರುದ್ಧ ಪೈಪೋಟಿ ನಡೆಸಲಿದೆ. ನ.19 ರಂದು ನಡೆಯಲಿರುವ ಫೈನಲ್ ಪಂದ್ಯಕ್ಕೂ ಅಹಮದಾಬಾದ್ ಆತಿಥ್ಯ ವಹಿಸಲಿದೆ.

ಸೆಮಿಫೈನಲ್ ಪಂದ್ಯಗಳು ನ.15 ಮತ್ತು 16 ರಂದು ಮುಂಬೈ ಮತ್ತು ಚೆನ್ನೈನಲ್ಲಿ ನಡೆಯಲಿವೆ. ಆತಿಥೇಯ ಭಾರತ ತಂಡವು ತನ್ನ ಲೀಗ್ ಪಂದ್ಯಗಳನ್ನು ಒಂಬತ್ತು ನಗರಗಳಲ್ಲಿ ಆಡಲಿದೆ.

ಐದು ತಾಣಗಳಲ್ಲಿ ಪಾಕ್ ಪಂದ್ಯಗಳು: ಪಾಕಿಸ್ತಾನ ತಂಡವು ಲೀಗ್ ಪಂದ್ಯಗಳನ್ನು ಐದು ನಗರಗಳಲ್ಲಿ ಆಡಲಿದೆ. ಅರ್ಹತಾ ಹಂತದಲ್ಲಿ ಗೆದ್ದು ಬರುವ ತಂಡಗಳನ್ನು ಅ.6 ಮತ್ತು 12ರಂದು ಹೈದರಾಬಾದ್‌ನಲ್ಲಿ ಎದುರಿಸಲಿದೆ.

ಆಸ್ಟ್ರೇಲಿಯಾ ವಿರುದ್ಧ ಬೆಂಗಳೂರಿನಲ್ಲಿ (ಅ.20), ಅಫ್ಗಾನಿಸ್ತಾನ (ಅ.23) ಮತ್ತು ದಕ್ಷಿಣ ಆಫ್ರಿಕಾ (ಅ.27) ವಿರುದ್ಧ ಚೆನ್ನೈನಲ್ಲಿ, ಬಾಂಗ್ಲಾದೇಶ ವಿರುದ್ಧ (ಅ.31) ಕೋಲ್ಕತ್ತದಲ್ಲಿ, ನ್ಯೂಜಿಲೆಂಡ್ ವಿರುದ್ಧ (ನ.5) ಬೆಂಗಳೂರಿನಲ್ಲಿ ಮತ್ತು ಇಂಗ್ಲೆಂಡ್ ವಿರುದ್ಧ (ನ.12) ಕೋಲ್ಕತ್ತದಲ್ಲಿ ಆಡಲಿದೆ.



ಪಾಕಿಸ್ತಾನ ತಂಡದ ನಾಯಕ ಬಾಬರ್ ಅಜಂ ಮತ್ತು ಭಾರತ ತಂಡದ ನಾಯಕ ರೋಹಿತ್ ಶರ್ಮಾ

ಭಾರತದ ಪಂದ್ಯಗಳು

ಎದುರಾಳಿ	ದಿನಾಂಕ	ತಾಣ
ಆಸ್ಟ್ರೇಲಿಯಾ	ಅ.8	ಚೆನ್ನೈ
ಅಫ್ಗಾನಿಸ್ತಾನ	ಅ.11	ದೆಹಲಿ
ಪಾಕಿಸ್ತಾನ	ಅ.15	ಅಹಮದಾಬಾದ್
ಬಾಂಗ್ಲಾದೇಶ	ಅ.19	ಪುಣೆ
ನ್ಯೂಜಿಲೆಂಡ್	ಅ.22	ಧರ್ಮಶಾಲಾ
ಇಂಗ್ಲೆಂಡ್	ಅ.29	ಲಖನೌ
ಅರ್ಹತಾ ಹಂತದಲ್ಲಿ ಗೆದ್ದ ತಂಡ	ನ.2	ಮುಂಬೈ
ದಕ್ಷಿಣ ಆಫ್ರಿಕಾ	ನ.5	ಕೋಲ್ಕತ್ತ
ಅರ್ಹತಾ ಹಂತದಲ್ಲಿ ಗೆದ್ದ ತಂಡ	ನ.11	ಬೆಂಗಳೂರು

ಟೂರ್ನಿಯಲ್ಲಿ 10 ತಂಡಗಳು ಭಾಗಿ

ವಿಶ್ವಕಪ್ ಟೂರ್ನಿಯಲ್ಲಿ ಒಟ್ಟು 10 ತಂಡಗಳು ಪಾಲ್ಗೊಳ್ಳಲಿವೆ. ಇದರಲ್ಲಿ ಎಂಟು ತಂಡಗಳು ನೇರ ಅರ್ಹತೆ ಪಡೆದುಕೊಂಡಿವೆ. ಇನ್ನುಳಿದ ಎರಡು ತಂಡಗಳು ಅರ್ಹತಾ ಹಂತದಲ್ಲಿ ಗೆದ್ದು ಬರಲಿವೆ.

ವಿಶ್ವಕಪ್‌ಗೆ ಇನ್ನು ನಾಲ್ಕು ತಿಂಗಳುಗಳು ಮಾತ್ರ ಇದ್ದು, ವೇಳಾಪಟ್ಟಿ ಪ್ರಕಟಿಸುವುದು ಈಗಾಗಲೇ ವಿಳಂಬವಾಗಿದೆ. 2015 ಮತ್ತು 2019ರ ಟೂರ್ನಿಗಳ ವೇಳಾಪಟ್ಟಿಯನ್ನು ಒಂದು ವರ್ಷ ಮುಂಚಿತವಾಗಿಯೇ ಪ್ರಕಟಿಸಲಾಗಿತ್ತು.

ಭಾರತ ತಂಡಕ್ಕೆ ಶೇ 100 ದಂಡ

ಡಬ್ಲ್ಯುಟಿಸಿ ಫೈನಲ್: ನಿಧಾನಗತಿ ಓವರ್ ಮಾಡಿದ್ದಕ್ಕೆ ಕ್ರಮ

ದುಬೈ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ನಿಧಾನಗತಿಯಲ್ಲಿ ಓವರುಗಳನ್ನು ಮಾಡಿದ್ದಕ್ಕೆ ಭಾರತ ಮತ್ತು ಆಸ್ಟ್ರೇಲಿಯಾ ತಂಡದ ಆಟಗಾರರಿಗೆ ದಂಡ ವಿಧಿಸಲಾಗಿದೆ.

'ಡಬ್ಲ್ಯುಟಿಸಿ ಫೈನಲ್ ಪಂದ್ಯದಲ್ಲಿ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳು ತಮ್ಮ ಪಾಲಿನ ಓವರುಗಳನ್ನು ಪೂರೈಸಲು ನಿಗದಿಗಿಂತಲೂ ಹೆಚ್ಚಿನ ಸಮಯ ತೆಗೆದುಕೊಂಡಿವೆ. ಭಾರತ ತಂಡದ ಆಟಗಾರರಿಗೆ ಪಂದ್ಯದ ಸಂಪೂರ್ಣ ಶುಲ್ಕವನ್ನು ಮತ್ತು ಆಸ್ಟ್ರೇಲಿಯಾ ಆಟಗಾರರಿಗೆ ಪಂದ್ಯ ಶುಲ್ಕದ ಶೇ. 80 ದಂಡ ವಿಧಿಸಲಾಗಿದೆ' ಎಂದು ಐಸಿಸಿ ಪ್ರಕಟಣೆ ತಿಳಿಸಿದೆ.

'ಐಸಿಸಿಯ 2.22 ನಿಯಮದ ಪ್ರಕಾರ, ನಿಗದಿತ ಸಮಯದಲ್ಲಿ ಬೌಲಿಂಗ್ ಮಾಡಲು ವಿಫಲವಾದ ಪ್ರತಿ ಓವರ್‌ಗೆ ಆಟಗಾರರಿಗೆ ಪಂದ್ಯ ಶುಲ್ಕದ ಶೇ 20 ದಂಡ ವಿಧಿಸಲಾಗುತ್ತದೆ' ಎಂದು ಐಸಿಸಿ ಹೇಳಿದೆ.

ಭಾರತ ತಂಡವು ನಿಗದಿಪಡಿಸಿದ ಸಮಯದಲ್ಲಿ 5 ಓವರ್‌ಗಳನ್ನು ಕಡಿಮೆ ಮಾಡಿದ್ದರೆ, ಆಸ್ಟ್ರೇಲಿಯಾ ತಂಡ ನಾಲ್ಕು ಓವರ್‌ಗಳನ್ನು ಕಡಿಮೆ ಮಾಡಿತ್ತು.

ಫೈನಲ್‌ನಲ್ಲಿ ಅಂತಿಮ ಹನ್ನೊಂದರ ಬಳಗದಲ್ಲಿದ್ದ ಭಾರತ ತಂಡದ ಆಟಗಾರರು ಟೆಸ್ಟ್ ಪಂದ್ಯಕ್ಕೆ ತಲಾ ₹ 15 ಲಕ್ಷ ಸಂಭಾವನೆ ಪಡೆಯುವರು. ರಿಸರ್ವ್ ಆಟಗಾರರು ತಲಾ ₹ 7.5 ಲಕ್ಷ ಗಳಿಸುವರು.


ಶುಭಮನ್ ಗಿಲ್

ಮುಖ್ಯಾಂಶಗಳು

- ಆಸ್ಟ್ರೇಲಿಯಾ ಆಟಗಾರರಿಗೆ ಪಂದ್ಯ ಶುಲ್ಕದ ಶೇ 80 ದಂಡ
- ಶುಭಮನ್ ಗಿಲ್ ಅವರಿಗೆ ಹೆಚ್ಚುವರಿಯಾಗಿ ಶೇ 15 ದಂಡ

ಗಿಲ್‌ಗೆ ಶೇ 15 ಹೆಚ್ಚುವರಿ ದಂಡ: ಅಂಪೈರ್ ತೀರ್ಪಿಗೆ ಅಸಮಾಧಾನ ವ್ಯಕ್ತಪಡಿಸಿದ್ದಕ್ಕೆ ಭಾರತ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರಿಗೆ ಹೆಚ್ಚುವರಿಯಾಗಿ ಶೇ 15 ದಂಡ ವಿಧಿಸಲಾಗಿದೆ.

ಪಂದ್ಯದ ನಾಲ್ಕನೇ ದಿನದಾಟದಲ್ಲಿ ಗಿಲ್ ಅವರು ಸ್ಕಾಟ್ ಬೊಲಾಂಡ್ ಬೌಲಿಂಗ್‌ನಲ್ಲಿ ಕ್ಯಾಮೆರಾನ್ ಗ್ರೀನ್‌ಗೆ ಕ್ಯಾಚಿತ್ತು ಔಟಾಗಿದ್ದರು. ಆದರೆ ಗ್ರೀನ್ ಕ್ಯಾಚ್ ಪಡೆಯುವಾಗ ಚೆಂಡು ನೆಲಕ್ಕೆ ತಾಗಿದಂತೆ ಕಂಡಬಂದಿತ್ತು. ಇದರಿಂದ ಮೈದಾನದ ಅಂಪೈರ್‌ಗಳು ಮೂರನೇ ಅಂಪೈರ್ ಮೊರೆ ಹೋಗಿದ್ದರು. ಅದು ಕ್ಯಾಚ್ ಹೌದೇ ಎಂಬುದು ರಿಪ್ಲೇನಲ್ಲೂ ಸ್ಪಷ್ಟವಾಗಿರಲಿಲ್ಲ. ಟಿ.ವಿ. ಅಂಪೈರ್ ರಿಚರ್ಡ್ ಕೆಟ್ಲ್‌ಬರೋ, ಔಟ್ ಎಂದು ತೀರ್ಪು ನೀಡಿದ್ದರು.

ದಿನದಾಟದ ಬಳಿಕ ಗಿಲ್ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಗ್ರೀನ್ ಕ್ಯಾಚ್ ಪಡೆಯುವ ಚಿತ್ರವನ್ನು ಪೋಸ್ಟ್ ಮಾಡಿ, ಅಂಪೈರ್ ತೀರ್ಪಿಗೆ ಅಸಮಾಧಾನ ಹೊರಹಾಕಿದ್ದರು. ಅಂಪೈರ್ ತೀರ್ಮಾನ ಟೀಕಿಸಿ, ಅಶಿಸ್ತು ತೋರಿದ್ದಕ್ಕೆ ಅವರಿಗೆ ದಂಡ ವಿಧಿಸಲಾಗಿದೆ.

285 ರನ್ ಜತೆಯಾಟ ನಿರ್ಣಾಯಕ: ಫಿಂಚ್

ಮೆಲ್ಬರ್ನ್ (ಪಿಟಿಐ): ಸ್ಟೀವ್ ಸ್ಮಿತ್ ಮತ್ತು ಟ್ರಾವಿಸ್ ಹೆಡ್ ನಡುವಣ 285 ರನ್‌ಗಳ ಜತೆಯಾಟವು, ಡಬ್ಲ್ಯುಟಿಸಿ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿತು ಎಂದು ಆಸ್ಟ್ರೇಲಿಯಾ ತಂಡದ ಮಾಜಿ ನಾಯಕ ಆ್ಯರನ್ ಫಿಂಚ್ ಅಭಿಪ್ರಾಯಪಟ್ಟಿದ್ದಾರೆ.

'ಆಸ್ಟ್ರೇಲಿಯಾ ತಂಡ ಟೆಸ್ಟ್‌ನಲ್ಲಿ ವಿಶ್ವಚಾಂಪಿಯನ್ ಎನಿಸಿರುವುದು ಅಮೋಘ ಸಾಧನೆ. ಹೆಡ್ ಮತ್ತು ಸ್ಮಿತ್ ಅವರ ಜತೆಯಾಟವು ಫಲಿತಾಂಶದ ಮೇಲೆ ಪರಿಣಾಮ ಬೀರಿತು' ಎಂದು ಹೇಳಿದ್ದಾರೆ.

ವೆಸ್ಟ್ ಇಂಡೀಸ್ ಪ್ರವಾಸ: ಜೈಸ್ವಾಲ್‌ಗೆ ಅವಕಾಶ ಸಾಧ್ಯತೆ

ಪೂಜಾರ, ಉಮೇಶ್ ಸ್ಥಾನಕ್ಕೆ ಸಂಚಕಾರ?

ನವದೆಹಲಿ: ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಭಾರತದ ಸೋಲಿಗೆ ನಿರೀಕ್ಷಿತ ಪ್ರಮಾಣದಲ್ಲಿ ಟೀಕೆಗಳು ಬರದೇ ಇರಬಹುದು. ಆದರೆ ಎರಡು ಟೆಸ್ಟ್‌ಗಳ ಸರಣಿಯನ್ನಾಡಲು ತಂಡ ವೆಸ್ಟ್ ಇಂಡೀಸ್ ಪ್ರವಾಸಕ್ಕೆ ತೆರಳುವ ಮೊದಲು ಹಿರಿಯ ಆಟಗಾರರಾದ ಚೇತೇಶ್ವರ ಪೂಜಾರ ಮತ್ತು ಉಮೇಶ್ ಯಾದವ್ ಅವರಿಗೆ ಅವಕಾಶ ನೀಡುವ ಬಗ್ಗೆ ಪುನರಾವಲೋಕನ ನಡೆಯುವ ಸಾಧ್ಯತೆಯಿದೆ.

ಪ್ರತಿಭಾನ್ವಿತ ಆಟಗಾರ ಯಶಸ್ವಿ ಜೈಸ್ವಾಲ್ ಮತ್ತು ಮಧ್ಯಮ ವೇಗಿ ಮುಕೇಶ್ ಕುಮಾರ್ ಅವರು ಈ ಸ್ಥಾನಗಳಿಗೆ ಪೈಪೋಟಿಯಲ್ಲಿದ್ದಾರೆ. ಮುಂಬರುವ ಕಠಿಣ ಪ್ರವಾಸಗಳಿಗೆ ಮುಂದಿನ ಹಂತದ ಆಟಗಾರರನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಆಯ್ಕೆ ಸಮಿತಿ ತಯಾರಿ ಆರಂಭಿಸಲಿದೆ.

ಒಂದು ತಿಂಗಳ ವೆಸ್ಟ್ ಇಂಡೀಸ್ ಪ್ರವಾಸದಲ್ಲಿ ಭಾರತ ಎರಡು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಮೊದಲ ಟೆಸ್ಟ್ ಜುಲೈ 12ರಂದು ಆರಂಭವಾಗಲಿದೆ. ಇದರ ನಂತರ ಮೂರು ಏಕದಿನ ಪಂದ್ಯಗಳನ್ನು, ಐದು ಟಿ–20 ಪಂದ್ಯಗಳನ್ನು ಆಡಲಿದೆ. ಸೀಮಿತ ಓವರುಗಳ ಪಂದ್ಯಕ್ಕೆ ಹಾರ್ದಿಕ್ ಪಾಂಡ್ಯ ನೇತೃತ್ವದಲ್ಲಿ, ತಂಡ ಕೆಲ ಹೊಸಮುಖಗಳೊಂದಿಗೆ ಕಣಕ್ಕಿಳಿಯುವ ಸಾಧ್ಯತೆಯಿದೆ. ಐಪಿಎಲ್‌ನಲ್ಲಿ ಉತ್ತಮ ಸಾಧನೆ ತೋರಿದವರಿಗೆ ಅವಕಾಶ ಸಿಗುವ ನಿರೀಕ್ಷೆಯಿದೆ.

ಡಬ್ಲ್ಯುಟಿಸಿ ಫೈನಲ್‌ನ ಸೋಲು ತಂಡವನ್ನು ಕಾಡುತ್ತಿರುವ ಮಧ್ಯೆಯೇ, ಶಿವ ಸುಂದರ್ ದಾಸ್ ನೇತೃತ್ವದ ಆಯ್ಕೆ ಸಮಿತಿ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರು ಮುಂದಿನ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಅಭಿಯಾನಕ್ಕೆ ಹೊಸ ಆಯ್ಕೆಗಳತ್ತ ಗಮಹರಿಸಲಿದ್ದಾರೆ. ಹೊಸ ಟೆಸ್ಟ್ ಚಾಂಪಿಯನ್‌ಷಿಪ್ ಅಭಿಯಾನ ವಿಂಡೀಸ್ ಸರಣಿಯೊಡನೆ ಆರಂಭವಾಗುತ್ತದೆ. ಪೂಜಾರ ಮತ್ತು ಯಾದವ್ ಅವರು ಕಳೆದೊಂದು ವರ್ಷದಿಂದ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಲು ವಿಫಲರಾಗಿದ್ದಾರೆ.

'ತಂಡದಲ್ಲಿ ಸಮತೋಲನ ಕಾಪಾಡಿಕೊಳ್ಳಬೇಕಾದ ಅಗತ್ಯವಿದೆ. ಯುವಕರ ಜೊತೆ ಅನುಭವವೂ ಇರುವ ಅಗತ್ಯವಿದೆ' ಎಂದು ಆಯ್ಕೆಸಮಿತಿಯ ಮಾಜಿ ಸದಸ್ಯ ದೇವಾಂಗ್ ಗಾಂಧಿ ಹೇಳಿದರು.

'ಯಶಸ್ವಿ ಜೈಸ್ವಾಲ್ ಅಂತರರಾಷ್ಟ್ರೀಯ ಕ್ರಿಕೆಟ್ ಆಡಲು ಸಿದ್ಧರಾಗಿದ್ದಾರೆ. ರಣಜಿ, ಇರಾನಿ, ದುಲೀಪ್ ಟ್ರೋಫಿ ಟೂರ್ನಿಗಳಲ್ಲಿ ಅವರು ದ್ವಿಶತಕಗಳನ್ನು ಬಾರಿಸಿದ್ದಾರೆ. ಉತ್ತಮ ಸಂಯಮ ಹೊಂದಿದ್ದು, ಈಗಿನಿಂದಲೇ ಅವಕಾಶಗಳನ್ನು ನೀಡಿದರೆ ಉತ್ತಮ ಆಟಗಾರನಾಗಿ ರೂಪುಗೊಳ್ಳಬಹುದು' ಎಂದು ಅವರು ಹೇಳಿದರು.

ರಿಂಕು, ಜಿತೇಶ್ ಮೇಲೆ ಕಣ್ಣು: ಮುಂದಿನ ವರ್ಷದ ಟಿ–20 ವಿಶ್ವಕಪ್ ಸೇರಿದಂತೆ ಚುಟುಕು ಮಾದರಿಯಲ್ಲಿ ಹಾರ್ದಿಕ್ ಪಾಂಡ್ಯ ಅವರೇ ನಾಯಕರಾಗುತ್ತಾರೆ ಎಂಬ ಬಗ್ಗೆ ಯಾವುದೇ ಗೊಂದಲಗಳಿಲ್ಲ. ಐಪಿಎಲ್ ಸಾಧನೆಗಳ ಆಧಾರದಲ್ಲಿ ಇಲ್ಲಿ ತಂಡಕ್ಕೆ ಆಟಗಾರರು ಸ್ಥಾನ ಪಡೆಯುವುದು ಹೆಚ್ಚು. ಹೀಗಾಗಿ ರಿಂಕು ಸಿಂಗ್ ಮತ್ತು ಜಿತೇಶ್ ಶರ್ಮಾ ಅವರು ತಂಡದಲ್ಲಿ ಅವಕಾಶ ಪಡೆಯುವ ಸಾಧ್ಯತೆಯಿದೆ.

ಋತುರಾಜ್ ಗಾಯಕವಾಡ್ ಪುನರಾಗಮನ ಮತ್ತು ಯಶಸ್ವಿ ಜೈಸ್ವಾಲ್ ಸೇರ್ಪಡೆ ಅನಿವಾರ್ಯ ಎಂಬಂತೆ ಕಾಣುತ್ತಿದೆ. ಇತ್ತೀಚಿನ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನದ ಕಾರಣ ಅನುಭವಿ ಮೋಹಿತ್ ಶರ್ಮಾ ಅವರೂ ಅವಕಾಶ ಪಡೆಯಬಹುದು.


ಯಶಸ್ವಿ ಜೈಸ್ವಾಲ್


ಒಡಿಶಾದ ಭುವನೇಶ್ವರದಲ್ಲಿ ನಡೆದ ವಾಲಿಬಾಲ್ ಟೂರ್ನಿಯಲ್ಲಿ ಚಿನ್ನದ ಪದಕ ಪಡೆದ ರಾಜ್ಯ ಮಹಿಳೆಯರ ತಂಡ

ವಾಲಿಬಾಲ್; ರಾಜ್ಯ ಪುರುಷ, ಮಹಿಳಾ ತಂಡಗಳಿಗೆ ಪ್ರಶಸ್ತಿ

ಹುಬ್ಬಳ್ಳಿ: ಒಡಿಶಾದ ಭುವನೇಶ್ವರದಲ್ಲಿ ಜೂನ್ 9ರಿಂದ 12ರವರೆಗೆ ನಡೆದ ಜನಜಾತಿಯ ಖೇಲ್ ಮಹೋತ್ಸವ ವಾಲಿಬಾಲ್ ಟೂರ್ನಿಯಲ್ಲಿ ರಾಜ್ಯದ ಪುರುಷರ ಮತ್ತು ಮಹಿಳೆಯರ (ಪರಿಶಿಷ್ಟ ಪಂಗಡ) ತಂಡಗಳು ಚಿನ್ನದ ಪದಕ ಗಳಿಸಿವೆ.

ಪುರುಷರ ತಂಡವು 18–25, 25–16, 20–25, 15–11ರಿಂದ ಉತ್ತರಾಖಂಡ ತಂಡವನ್ನು ಮಣಿಸಿತು. ಮಹಿಳೆಯರ ತಂಡವು 25–21, 25–10ರಿಂದ ಒಡಿಶಾ ತಂಡದ ವಿರುದ್ಧ ಗೆಲುವು ಸಾಧಿಸಿತು.

'ಪುರುಷರ ತಂಡಕ್ಕೆ ಎಂ.ಆರ್. ರಮೇಶ್ ಮತ್ತು ಮಹಿಳೆಯರ ತಂಡಕ್ಕೆ ಗೀತಾ ತರಬೇತಿ ನೀಡಿದರು' ಎಂದು ಕರ್ನಾಟಕ ವಾಲಿಬಾಲ್ ಅಸೋಸಿಯೇಷನ್‌ನ ಅಡ್‌ಹಾಕ್ ಸಮಿತಿಯ ಅಧ್ಯಕ್ಷ ಎಲ್‌.ಪಿ.ಅಂಟೋನಿ ಜೋಸೆಫ್ ಮತ್ತು ಸದಸ್ಯ ಎಂ.ಎಂ. ಗುಡಿ ತಿಳಿಸಿದ್ದಾರೆ. ಪುರುಷರ ತಂಡದಲ್ಲಿ ಮನು ಬಿ.ಎಲ್., ಯಶವಂತ್ ನಾಯಕ್ ಪಿ., ಧನುಶ್ ಎಂ.ಎನ್., ಸಂದೇಶ್ ಜೆ.ಆರ್., ನಂದೀಶ್ ಎನ್., ಸಂತೋಷ್, ಸುಬ್ರಮಣಿ, ಶಿವಕುಮಾರ್, ಟಿ.ಮಂಜುನಾಥ, ನವೀನ್, ಅಶೋಕ್, ಅಮರೇಶ್ ಇದ್ದರು. ಮಹಿಳೆಯರ ತಂಡದಲ್ಲಿ ಝ್ಞಾನ್ಸಿ, ಅಂಜಲಿ, ಭವ್ಯಾ, ಇಂದುಮತಿ, ಕವಿತಾ, ಸವಿತಾ, ದೀಕ್ಷಿತಾ, ಶಿಲ್ಪಾ, ಲೇಖನಾ, ಸಿಂಚನಾ ಇದ್ದರು.

ಜೊಕೊವಿಚ್‌ಗೆ ಮತ್ತೆ ಅಗ್ರಸ್ಥಾನ

ಪ್ಯಾರಿಸ್ (ಎಎಫ್‌ಪಿ): ಭಾನುವಾರ ವಷ್ಟೇ ಫ್ರೆಂಚ್ ಓಪನ್ ಚಾಂಪಿಯನ್ ಆದ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಸೋಮವಾರ ಪ್ರಕಟವಾದ ಎಟಿಪಿ ಕ್ರಮಾಂಕ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೆ ಏರಿದ್ದಾರೆ.

23ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದು ಐತಿಹಾಸಿಕ ಸಾಧನೆ ಮಾಡಿದ 36 ವರ್ಷದ ಜೊಕೊವಿಚ್ ಮೂರನೇ ಸ್ಥಾನದಿಂದ ಅಗ್ರಸ್ಥಾನಕ್ಕೆ ಜಿಗಿದಿದ್ದಾರೆ.

ಅಗ್ರಸ್ಥಾನದಲ್ಲಿದ್ದ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಎರಡನೇ ಸ್ಥಾನಕ್ಕೆ ಇಳಿದಿದ್ದಾರೆ. 20 ವರ್ಷದ ಸ್ಪೇನ್ ಆಟಗಾರ, ಫ್ರೆಂಚ್ ಓಪನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಜೊಕೊವಿಚ್ ಎದುರು ಸೋತಿದ್ದರು.

ಫ್ರೆಂಚ್ ಓಪನ್ ಮೊದಲ ಸುತ್ತಿನಲ್ಲೇ ಆಘಾತಕಾರಿ ಸೋಲು ಕಂಡಿದ್ದ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಎರಡನೇ ಸ್ಥಾನದಿಂದ ಮೂರನೇ ಸ್ಥಾನಕ್ಕೆ ಇಳಿದಿದ್ದಾರೆ. ಫ್ರೆಂಚ್ ಓಪನ್ ರನ್ನರ್ ಅಪ್ ಆದ ನಾರ್ವೆಯ ಕ್ಯಾಸ್ಪರ್ ರೂಡ್ 4ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

14 ಬಾರಿ ಫೆಂಚ್ ಓಪನ್ ಕಿರೀಟ ಧರಿಸಿದ್ದ ರಫೆಲ್ ನಡಾಲ್ ಕ್ರಮಾಂಕ ಪಟ್ಟಿಯಲ್ಲಿ 136ನೇ ಸ್ಥಾನಕ್ಕೆ ಕುಸಿದಿದ್ದಾರೆ. ಅವರು ಸೊಂಟದ ನೋವಿನಿಂದಾಗಿ ಜನವರಿಯಿಂದ ಯಾವುದೇ ಟೂರ್ನಿಯಲ್ಲಿ ಆಡಿರಲಿಲ್ಲ.

ಶ್ವಾಂಟೆಕ್‌ಗೆ ಅಗ್ರಪಟ್ಟ: ಫ್ರೆಂಚ್ ಓಪನ್ ಚಾಂಪಿಯನ್, ಪೋಲೆಂಡ್‌ನ ಇಗಾ ಶ್ವಾಂಟೆಕ್, ಡಬ್ಲ್ಯುಟಿಎ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಉಳಿಸಿಕೊಂಡಿದ್ದಾರೆ.

ಬೆಲಾರಸ್‌ನ ಅರಿನಾ ಸಬಲೆಂಕಾ ಅವರು ಎರಡನೇ ಶ್ರೇಯಾಂಕದಲ್ಲೇ ಮುಂದುವರಿದಿದ್ದಾರೆ. ಫ್ರೆಂಚ್ ಓಪನ್ ಗೆದ್ದಲ್ಲಿ ಅವರು ಅಗ್ರಸ್ಥಾನಕ್ಕೆ ಏರಲು ಅವಕಾಶವಿತ್ತು. ಆದರೆ ಸೆಮಿಫೈನಲ್‌ನಲ್ಲಿ ಕರೋಲಿನಾ ಮುಕೋವಾ ಎದುರು ಸೋಲನುಭವಿಸಿದ್ದರು. ಮುಕೋವಾ 43ನೇ ಸ್ಥಾನದಿಂದ 16ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

ಕಜಕಸ್ತಾನದ ಎಲೆನಾ ರಿಬಾಕಿನಾ 3ನೇ, ಫ್ರಾನ್ಸ್‌ನ ಕರೋಲಿನಾ ಗಾರ್ಸಿಯಾ 4ನೇ ಸ್ಥಾನದಲ್ಲಿದ್ದಾರೆ. 3ನೇ ಸ್ಥಾನದಲ್ಲಿದ್ದ ಅಮೆರಿಕದ ಜೆಸ್ಸಿಕಾ ಪೆಗುವಾ 5ನೇ ಸ್ಥಾನಕ್ಕೆ ಸರಿದಿದ್ದಾರೆ.


ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಟ್ರೋಫಿಯೊಂದಿಗೆ ಪ್ಯಾರಿಸ್‌ನ ಐಫೆಲ್ ಟವರ್ ಎದುರು ಕಾಣಿಸಿಕೊಂಡರು (ಎಎಫ್‌ಪಿ ಚಿತ್ರ)

ರಾಷ್ಟ್ರೀಯ ಫುಟ್‌ಬಾಲ್: ರಾಜ್ಯ ತಂಡಕ್ಕೆ ಐಶ್ವರ್ಯಾ ನಾಯಕಿ

ಬೆಂಗಳೂರು: ಪಂಜಾಬ್‌ನ ಅಮೃತಸರದಲ್ಲಿ ನಡೆಯಲಿರುವ 27ನೇ ಹೀರೊ ಸೀನಿಯರ್ ಮಹಿಳೆಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಆಡಲು ಎ.ಐಶ್ವರ್ಯಾ ನಾಯಕತ್ವದಲ್ಲಿ 22 ಆಟಗಾರ್ತಿಯರ ಕರ್ನಾಟಕ ತಂಡವನ್ನು ಆಯ್ಕೆ ಮಾಡಲಾಗಿದೆ.

ರಾಜ್ಯ ತಂಡವು ಜೂನ್ 14ರಂದು ತಮಿಳುನಾಡು ತಂಡದ ವಿರುದ್ಧ ಸೆಣಸಲಿದೆ. 16ರಂದು ಪಂಜಾಬ್ ವಿರುದ್ಧ, 18ರಂದು ಛತ್ತೀಸಗಢ ವಿರುದ್ಧ, 20ರಂದು ಒಡಿಶಾ ವಿರುದ್ಧ, 22ರಂದು ಜಾರ್ಖಂಡ್ ವಿರುದ್ಧ ಆಡಲಿದೆ.

ತಂಡ ಇಂತಿದೆ: ಎ.ಐಶ್ವರ್ಯಾ (ನಾಯಕಿ), ರಿವ್ಕಾ ರಾಮ್ಜಿ (ಉಪನಾಯಕಿ), ಎ.ಧನುಶ್ರೀ, ಟಿ.ಎಸ್. ಏಜೆಂಲ್ ಮರಿಯಾ, ಎಂ.ಮಾನಸಾ, ಡಿ.ಜಾನಕಿ, ಸಿಮ್ರಾನ್ ಭಾರ್ಗವ, ಅರುಣಾ, ಇ.ಜಯಶ್ರೀ, ರೂಪಾಲಿ ಬೌರಿ, ತಾರಾ ಆನಂದ್, ವಿ.ಜಿ. ಲೇಖಶ್ರೀ, ಆರುಷಿ ಸಂತೋಷ್, ಮೈತ್ರೇಯಿ ಪಾಲಸಮುದ್ರಂ, ತನ್ವಿ ನಾಯರ್, ಮಿಥಿಲಾ ರಮಣಿ, ಸಂಜಿತಾ ನಿರೋಲಾ, ಮೊನಾಲಿಸಾ ಮರಾಂಡಿ, ಕವಿಯಾ ಪಕ್ಕಿರಿಸಾಮಿ, ರಿತು ಶ್ರೀನಂದನ್, ಸುನಾಲಿಂದ ಲಾರೆನ್, ಅದಿತಿ ಜಾಧವ್.

ಫುಟ್‌ಬಾಲ್: ಚೆಟ್ರಿ ಗೆಲುವಿನ ಗೋಲು

ಭುವನೇಶ್ವರ: ನಾಯಕ ಸುನಿಲ್ ಚೆಟ್ರಿ ಗಳಿಸಿದ ಗೋಲಿನ ನೆರವಿನಿಂದ ಭಾರತ ತಂಡ, ಇಂಟರ್‌ಕಾಂಟಿನೆಂಟಲ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಸತತ 2ನೇ ಗೆಲುವು ಸಾಧಿಸಿತು.

ಕಳಿಂಗಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಭಾರತ 1–0 ಗೋಲಿನಿಂದ ವನುವಾಟು ತಂಡವನ್ನು ಮಣಿಸಿತು. ಗೋಲು ಗಳಿಸುವ ಹಲವು ಉತ್ತಮ ಅವಕಾಶಗಳನ್ನು ಹಾಳುಮಾಡಿಕೊಂಡ ಆತಿಥೇಯ ತಂಡಕ್ಕೆ ಪ್ರಬಲ ಪೈಪೋಟಿ ಒಡ್ಡಲು ಎದುರಾಳಿಗಳು ಯಶಸ್ವಿಯಾದರು.


ಭಾರತ ತಂಡದ ಗೆಲುವಿನ ಗೋಲು 81ನೇ ನಿಮಿಷದಲ್ಲಿ ಬಂತು. ಸುಭಾಶಿಷ್ ಬೋಸ್ ನೀಡಿದ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ಚೆಟ್ರಿ, ಎಡಗಾಲಲ್ಲಿ ಒದ್ದು ಗುರಿ ಸೇರಿಸಲು ಯಶಸ್ವಿಯಾದರು.

ಆ ಬಳಿಕ ಚೆಂಡನ್ನು ಜರ್ಸಿಯೊಳಗೆ ಇಟ್ಟು ಸಂಭ್ರಮಿಸಿದರಲ್ಲದೆ, ತಾನು ಶೀಘ್ರದಲ್ಲೇ ತಂದೆಯಾಗುತ್ತಿರುವ ವಿಚಾರವನ್ನು ಈ ರೀತಿ ಬಹಿರಂಗಪಡಿಸಿದರು. ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಪತ್ನಿ ಸೋನಮ್ ಅವರು ಚಪ್ಪಾಳೆ ತಟ್ಟುತ್ತಾ ನಗು ಬೀರಿದ ದೃಶ್ಯ ಕ್ರೀಡಾಂಗಣದ ಬೃಹತ್ ಪರದೆಯಲ್ಲಿ ಮೂಡಿಬಂತು.

ಪಂದ್ಯದ ಹೆಚ್ಚಿನ ಅವಧಿಯಲ್ಲೂ ಚೆಂಡು ಭಾರತದ ಆಟಗಾರರ ನಿಯಂತ್ರಣದಲ್ಲಿತ್ತು. ಆದರೆ ಹೊಂದಾಣಿಕೆಯ ಕೊರತೆ ಮತ್ತು ವನುವಾಟು ತಂಡದ ಡಿಫೆಂಡರ್‌ಗಳ ಛಲದ ಆಟದಿಂದಾಗಿ ದೊಡ್ಡ ಅಂತರದ ಜಯ ಸಾಧಿಸಲು ಭಾರತ ವಿಫಲವಾಯಿತು.

ಡ್ರಾ ಸಾಧಿಸಿದ ಮಂಗೋಲಿಯಾ: ದಿನದ ಮೊದಲ ಪಂದ್ಯದಲ್ಲಿ ಮಂಗೋಲಿಯಾ ತಂಡ, ಫಿಫಾ ರ‍್ಯಾಂಕ್‌ನಲ್ಲಿ ತನಗಿಂತ ಮೇಲಿನ ಸ್ಥಾನದಲ್ಲಿರುವ ಲೆಬನಾನ್ ತಂಡವನ್ನು ಗೋಲು ರಹಿತ ಡ್ರಾದಲ್ಲಿ ಕಟ್ಟಿಹಾಕಿ ಮೊದಲ ಪಾಯಿಂಟ್ಸ್ ಗಿಟ್ಟಿಸಿಕೊಂಡಿತು.

ಆರಂಭಿಕ ಪಂದ್ಯದಲ್ಲಿ ಭಾರತದ ಎದುರು ಸೋತಿದ್ದ ಮಂಗೋಲಿಯಾ ಈಗ ಒಂದು ಪಾಯಿಂಟ್ಸ್ ಹೊಂದಿದೆ. ಲೆಬನಾನ್ ಎರಡು ಪಂದ್ಯಗಳಿಂದ 3 ಪಾಯಿಂಟ್ಸ್ ಗಳಿಸಿದೆ.


ಗೋಲು ಗಳಿಸಿದ ಸಂಭ್ರಮದಲ್ಲಿ ಸುನಿಲ್ ಚೆಟ್ರಿ – ಎಐಎಫ್‌ಎಫ್ ಟ್ವಿಟರ್ ಚಿತ್ರ

ಇಂದಿನಿಂದ ಇಂಡೊನೇಷ್ಯಾ ಓಪನ್

ಜಕಾರ್ತ (ಪಿಟಿಐ): ಎಚ್‌.ಎಸ್. ಪ್ರಣಯ್ ಮಂಗಳವಾರ ಇಲ್ಲಿ ಆರಂಭವಾಗಲಿರುವ ಇಂಡೊನೇಷ್ಯಾ ಓಪನ್ ಬಿಡಬ್ಲ್ಯುಎಫ್ ಸೂಪರ್– 1000 ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಕಳೆದ ತಿಂಗಳು ನಡೆದಿದ್ದ ಮಲೇಷ್ಯಾ ಮಾಸ್ಟರ್ಸ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ಪ್ರಣಯ್ ಮೇಲೆ ನಿರೀಕ್ಷೆಯ ಭಾರ ಹೆಚ್ಚಿದೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ 8ನೇ ಸ್ಥಾನದಲ್ಲಿರುವ ಅವರು ಮೊದಲ ಸುತ್ತಿನಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ಅವರನ್ನು ಎದುರಿಸುವರು.

ಕಳೆದ ಎರಡು ಟೂರ್ನಿಯಲ್ಲಿ ಮೊದಲ ಸುತ್ತಿನಲ್ಲೇ ಹೊರಬಿದ್ದ ಪಿ.ವಿ. ಸಿಂಧು ಈ ಟೂರ್ನಿಯಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದು, ಇಂಡೋನೇಷ್ಯಾದ ಗ್ರೆಗೋರಿಯಾ ಮರಿಸ್ಕಾ ಅವರನ್ನು ಎದುರಿಸುವರು.

ಎನ್‌ಎಸಿ– ಆರ್‌ಎಲ್‌ಎಸ್‌ಎಸ್ ಒಪ್ಪಂದ

ಬೆಂಗಳೂರು: ಈಜು ಮತ್ತು ಜೀವ ಸುರಕ್ಷತಾ ಕೌಶಲಕ್ಕೆ ಸಂಬಂಧಿಸಿದ ತರಬೇತಿ ನೀಡಲು ನೆಟ್ಟಕಲ್ಲಪ್ಪ ಈಜು ಕೇಂದ್ರವು (ಎನ್‌ಎಸಿ) ರಾಷ್ಟ್ರೀಯ ಜೀವಸುರಕ್ಷತಾ ಸೊಸೈಟಿ (ಆರ್‌ಎಲ್‌ಎಸ್‌ಎಸ್) ಜತೆ ಒಪ್ಪಂದ ಮಾಡಿಕೊಂಡಿದೆ.

ಈ ಸಹಭಾಗಿತ್ವದಡಿ ಲೈಫ್‌ಗಾರ್ಡ್, ಪ್ರಥಮ ಚಿಕಿತ್ಸೆ, ಸಿಪಿಆರ್ ಮತ್ತು ಎಇಡಿ ಹಾಗೂ 'ಸ್ವಿಮ್ ಎನ್ ಸರ್ವೈವ್' ವಿಷಯದಲ್ಲಿ ತರಬೇತಿ ನೀಡುವ ಅವಕಾಶ ಎನ್‌ಎಸಿಗೆ ದೊರೆಯಲಿದೆ.

ಪ್ರಾಯೋಗಿಕ ಮತ್ತು 'ಥಿಯರಿ' ತರಗತಿಗಳನ್ನು ಹೊಂದಿರುವ ತರಬೇತಿ ಕಾರ್ಯಕ್ರಮ ಜುಲೈನಲ್ಲಿ ಆರಂಭವಾಗಲಿದೆ. ನುರಿತ ಮತ್ತು ವೃತ್ತಿಪರ ತರಬೇತುದಾರರ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಲ್ಲಿ ಈ ಎಲ್ಲಾ ಕೋರ್ಸ್‌ಗಳನ್ನು ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ರಾಷ್ಟ್ರೀಯ ಜೀವಸುರಕ್ಷತಾ ಸೊಸೈಟಿಯು ರಾಯಲ್ ಲೈಫ್ ಸೇವಿಂಗ್ ಸೊಸೈಟಿಯ (ಕಾಮನ್‌ವೆಲ್ತ್) ಅಧಿಕೃತ ಶಾಖೆಯಾಗಿರುವುದರ ಜತೆ ಇಂಟರ್‌ನ್ಯಾಷನಲ್ ಲೈಫ್ ಸೇವಿಂಗ್ ಫೆಡರೇಷನ್‌ನ (ಐಎಲ್‌ಎಸ್) ಪೂರ್ಣಾವಧಿ ಸದಸ್ಯತ್ವ ಹೊಂದಿರುವುದರಿಂದ ಇಲ್ಲಿ ನೀಡಲಾಗುವ ಪ್ರಮಾಣಪತ್ರವು ಹೆಚ್ಚಿನ ಮೌಲ್ಯ ಹೊಂದಿರುತ್ತದೆ.

ಕುಸ್ತಿ ಫೆಡರೇಷನ್: ಜು. 4ರಂದು ಚುನಾವಣೆಗೆ ನಿರ್ಧಾರ

ನ್ಯಾ.ಮಹೇಶ್ ಮಿತ್ತಲ್ ಚುನಾವಣಾ ಅಧಿಕಾರಿ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಮಹೇಶ್ ಮಿತ್ತಲ್ ಕುಮಾರ್ ಅವರನ್ನು ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ), ಭಾರತ ಕುಸ್ತಿ ಫೆಡರೇಷನ್ ಚುನಾವಣೆ ನಡೆಸಲು ಚುನಾವಣಾ ಅಧಿಕಾರಿಯನ್ನಾಗಿ ನೇಮಕ ಮಾಡಿದೆ. ಜುಲೈ 4ರಂದು ಚುನಾವಣೆ ನಡೆಸಲು ನಿರ್ಧರಿಸಲಾಗಿದೆ.

ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಹೋರಾಟದಲ್ಲಿ ತೊಡಗಿದ್ದ ಕುಸ್ತಿಪಟುಗಳ ಜೊತೆ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ಜೂನ್ 7ರಂದು ಮಾತುಕತೆ ನಡೆಸಿದ್ದರು. ಈ ವೇಳೆ ಅವರು ನನೆಗುದಿಗೆ ಬಿದ್ದಿರುವ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಚುನಾವಣೆಯನ್ನು ಜೂನ್ 30ರೊಳಗೆ ನಡೆಸುವುದಾಗಿ ಹೇಳಿದ್ದರು. ಆದರೆ, ಡಬ್ಲುಎಫ್‌ಐ ವಿಶೇಷ ಮಹಾಸಭೆಯನ್ನು ಕರೆಯಲು 21 ದಿನಗಳ ಮೊದಲು ನೋಟಿಸ್ ನೀಡಬೇಕಾಗಿರುವ ಕಾರಣ ಈ ಗಡುವು ಪಾಲನೆ ಕಷ್ಟವಾಗಿತ್ತು.

ವಾರ್ಷಿಕ ಮಹಾಸಭೆ ಅಥವಾ ವಿಶೇಷ ಮಹಾಸಭೆ ಕರೆದು ಚುನಾವಣೆ ನಡೆಸಬಹುದಾಗಿದೆ.

ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಕುಟುಂಬ ಸದಸ್ಯರಿಗೆ ಅಥವಾ ಬೆಂಬಲಿಗರಿಗೆ ಚುನಾವಣೆಗೆ ಸ್ಪರ್ಧಿಸಲು ಸರ್ಕಾರ ಅವಕಾಶ ನೀಡುವುದಿಲ್ಲ ಎಂದು ಸಚಿವರು ಕುಸ್ತಿಪಟುಗಳಿಗೆ ಆಶ್ವಾಸನೆ ನೀಡಿದ್ದರು. ಬಳಿಕವಷ್ಟೇ ಜೂನ್ 15ರವರೆಗೆ ಹೋರಾಟ ಸ್ಥಗಿತಗೊಳಿಸಲು ಧರಣಿನಿರತ ಪೈಲ್ವಾನರು ನಿರ್ಧರಿಸಿದ್ದರು.

ನ್ಯಾ.ಮಿತ್ತಲ್ ಕುಮಾರ್ ಅವರಿಗೆ ನೇಮಕದ ವಿಷಯವನ್ನು ಐಒಎ ಸಿಇಒ ಆಗಿರುವ ಕಲ್ಯಾಣ್ ಚೌಬೆ ಅವರು ಪತ್ರಮುಖೇನ ತಿಳಿಸಿದ್ದು, ಹುದ್ದೆ ವಹಿಸಲು ಸಮ್ಮತಿಸುವಂತೆ ಮನವಿ ಮಾಡಿದ್ದಾರೆ.

ಆದರೆ ನ್ಯಾ.ಮಿತ್ತಲ್ ಕುಮಾರ್ ಅವರು ವಿಶೇಷ ಮಹಾಸಭೆಯ ದಿನಾಂಕದ ಬಗ್ಗೆ ತಮ್ಮದೇ ನಿರ್ಧಾರ ಕೈಗೊಳ್ಳಬಹುದು. ಜುಲೈ 4ರಂದೇ ಚುನಾವಣೆ ನಡೆಸಬೇಕೇ ಅಥವಾ ಕೆಲದಿನಗಳ ನಂತರ ನಡೆಸಬೇಕೇ ಎಂಬುದು ಅವರ ನಿರ್ಧಾರಕ್ಕೆ ಬಿಟ್ಟಿದ್ದು ಎಂದು ಮೂಲಗಳು ತಿಳಿಸಿವೆ.

ಕುಸ್ತಿ ಫಡರೇಷನ್‌ಗೆ ಕೇಂದ್ರಾಡಳಿತ ಪ್ರದೇಶ ಚಂಡೀಗಢ ಮತ್ತು ದೆಹಲಿ ಸೇರಿ 25 ಸಂಯೋಜಿತ ಘಟಕಗಳಿವೆ. ಪ್ರತಿ ಘಟಕಗಳು ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಬಹುದು. ಪ್ರತಿಯೊಬ್ಬರೂ ಮತ ಚಲಾಯಿಸಲು ಅವಕಾಶವಿದೆ. ಚುನಾವಣೆಯಲ್ಲಿ 50 ಮಂದಿ ಮತದಾನದ ಹಕ್ಕು ಹೊಂದಿದ್ದಾರೆ.

ಕುಸ್ತಿ ಫೆಡರೇಷನ್ ನಿಯಮಾವಳಿಯಂತೆ, ರಾಜ್ಯ ಘಟಕಗಳು ಕಾರ್ಯಕಾರಿ ಸಮಿತಿಯಲ್ಲಿರುವವರನ್ನು ಮಾತ್ರ ಪ್ರತಿನಿಧಿಗಳನ್ನಾಗಿ ನಾಮನಿರ್ದೇಶನ ಮಾಡಬೇಕಾಗುತ್ತದೆ. ಬ್ರಿಜ್ ಭೂಷಣ್ ಸಿಂಗ್ ಅವರ ಬೆಂಬಲಿಗರು ಅರ್ಹ ಅಭ್ಯರ್ಥಿಗಳಾಗಿದ್ದು ಚುನಾವಣೆಗೆ ನಾಮಪತ್ರ ಸಲ್ಲಿಸಿದರೆ ಏನಾಗಬಹುದು ಎಂಬ ಕುತೂಹಲವೂ ಇದೆ.

ಸಿಂಗ್ ಅವರ ಪುತ್ರ ಕರಣ್ ಈ ಹಿಂದಿನ ಡಬ್ಲ್ಯುಎಫ್‌ಐ ಆಡಳಿತವರ್ಗದಲ್ಲಿ ಉಪಾಧ್ಯಕ್ಷ ಆಗಿದ್ದರು. ಅವರು ಉತ್ತರ ಪ್ರದೇಶ ಕುಸ್ತಿ ಸಂಸ್ಥೆಯಲ್ಲಿ ಸಕ್ರಿಯರಾಗಿದ್ದಾರೆ. ಸಿಂಗ್ ಅವರ ಅಳಿಯ ವಿಶಾಲ್ ಸಿಂಗ್ ಅವರು ಬಿಹಾರ ಕುಸ್ತಿ ಸಂಸ್ಥೆ ಅಧ್ಯಕ್ಷರಾಗಿದ್ದಾರೆ.

ಟೆನಿಸ್; ಕಶ್ವಿ, ಪ್ರಣೀತ್‌ಗೆ ಜಯ

ಮಂಡ್ಯ: ಕರ್ನಾಟಕದ ಕಶ್ವಿ ಸುನಿಲ್ ಮತ್ತು ಪ್ರಣೀತ್ ಪೌಲ್ ಅವರು ಟಾಪ್ ಸರ್ವ್ ಟೆನಿಸ್ ಅಕಾಡೆಮಿ ಆಶ್ರಯದಲ್ಲಿ ನಡೆಯುತ್ತಿರುವ 16 ವರ್ಷದೊಳಗಿನವರ ಅಖಿಲ ಭಾರತ ರ‍್ಯಾಂಕಿಂಗ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ನಗರದ ಪಿಇಟಿ ಕ್ರೀಡಾಂಗಣದ ಅಂಕಣದಲ್ಲಿ ಸೋಮವಾರ ನಡೆದ ಬಾಲಕಿಯರ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಕಶ್ವಿ 6–0, 7–5 ಸೆಟ್‌ಗಳಿಂದ ವಾರುಣ್ಯ ವಿರುದ್ಧ ಜಯ ಸಾಧಿಸಿದರು.

ಬಾಲಕರ ವಿಭಾಗದಲ್ಲಿ ಪ್ರಣೀತ್ ಪೌಲ್ 6–3, 6–0 ರಿಂದ ತಮಿಳುನಾಡಿನ ಸುದರ್ಶನ್ ಮುರುಗೇಶನ್ ಅವರನ್ನು ಸೋಲಿಸಿದರು. ಇನ್ನೊಂದು ಪಂದ್ಯದಲ್ಲಿ ಮಧ್ಯಪ್ರದೇಶದ ಅದ್ವೈತ್ ವ್ಯಾಸ್ ಅವರು 6–3, 6–4 ರಿಂದ ಉತ್ತರ ಪ್ರದೇಶದ ಅಗ್ರಿಂ ಸಾಹು ವಿರುದ್ಧ ಗೆದ್ದರು.